ಡಾ. ಕೆ.ಜಿ. ವಸಂತ ಮಾಧವ

ಅಬ್ಬಕ್ಕ ದೇವಿಯರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಅಬ್ಬಕ್ಕ ದೇವಿಯರು

(ಕ್ರಿ.ಶ. ೧೫೫೪-೧೭೫೦: ಚೌಟರಸರ ಇತಿಹಾಸದ ಹಿನ್ನೆಲೆಯೊಂದಿಗೆ)

ಡಾ. ಕೆ.ಜಿ. ವಸಂತಮಾಧವ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಂಗಳೂರು ಮಹಾನಗರಪಾಲಿಕೆ ಕಟ್ಟಡ
ಲಾಲ್‌ಬಾಗ್, ಮಂಗಳೂರು-575 003
ದೂರವಾಣಿ / ಫ್ಯಾಕ್ಸ್ : 0824- 2459389
Email: tuluacademy@yahoo.co.in

ABBAKKA DEVIYARU : HISTORICAL LIFESKETCH AND ACHIEVEMENTS OF ABBAKKAS IN THE HISTORY OF TULUNADU.

WRITTEN BY	:	**DR. K.G. VASANTHMADHAVA,** 'AARADHANA', PAVANJE, Dakshina Kannada
PUBLISHED BY	:	**KARNATAKA TULU SAHITYA ACADEMY,** CORPORATION BUILDING MANGALORE 575 003. PH : 2459389
1ನೇ ಮುದ್ರಣ	:	1998
2ನೇ ಮುದ್ರಣ	:	2007
ಪುಟಗಳು	:	10+70
ಬೆಲೆ	:	ರೂ.30
ಹಕ್ಕುಗಳು	:	ಲೇಖಕರದ್ದು
ಪ್ರಧಾನ ಸಂಪಾದಕರು	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ.
ಪ್ರಕಾಶಕರು	:	ಎಸ್.ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ದೂರವಾಣಿ / ಫ್ಯಾಕ್ಸ್ : 0824 - 2459389 ಲಾಲ್‌ಬಾಗ್, ಮಂಗಳೂರು - 3 Email: tuluacademy@yahoo.co.in
ಮುಖಪುಟ ವಿನ್ಯಾಸ	:	ಗೋಪಾಡ್ಕರ್
ಮುದ್ರಣ	:	ಪವನ್ ಗ್ರಾಫಿಕ್ಸ್ ಎಂಡ್ ಪ್ರಿಂಟರ್ಸ್ ಎನ್. ಡಿ. ಕಾಂಪ್ಲೆಕ್ಸ್, ಕುದ್ರೋಳಿ ಮಂಗಳೂರು -3 .

ಅಧ್ಯಕ್ಷರ ಮಾತು - 1

ತುಳುನಾಡಿನ ಇತಿಹಾಸದಲ್ಲಿ ಅಬ್ಬಕ್ಕ ಎನ್ನುವ ಹೆಸರು ಸ್ವಾಭಿಮಾನ ಮತ್ತು ಹೋರಾಟದ ಒಂದು ರೂಪಕವಾಗಿದೆ. ಲಿಖಿತ ಮತ್ತು ಮೌಖಿಕ ಪರಂಪರೆಗಳಲ್ಲಿ ಅಬ್ಬಕ್ಕ ಕಾಲದ ಕಟ್ಟುಪಾಡುಗಳನ್ನು ಕಡಿದು ವಿಮೋಚನೆಯ ಪ್ರತೀಕವಾಗಿ ತುಳುವರ ಮನಸ್ಸಿನಲ್ಲಿ ನೆಲೆಯೂರಿದ್ದಾಳೆ. ವಿದೇಶಿಯರ ಆಕ್ರಮಣದ ವಿರುದ್ಧ ವಸಾಹತುಶಾಹಿಗೆ ಪ್ರತಿಭಟನೆಯಾಗಿ ಹೋರಾಟದ ಸಾಹಸಿಗಳ ಸಾಲಿನಲ್ಲಿ ಅಬ್ಬಕ್ಕ ಮೊದಲಿಗಳಾಗಿ ನಿಲ್ಲುತ್ತಾಳೆ. ಮಾತೃಪ್ರಧಾನ ವ್ಯವಸ್ಥೆಯ ತುಳುನಾಡಿನಲ್ಲಿ ನಾಡಿನ ರಕ್ಷಣೆಯಲ್ಲಿ ತನ್ನ ಕೈಯ ಕಂಕಣವನ್ನಾಗಿ ಧರಿಸಿ ಅಬ್ಬಕ್ಕ, ಇತಿಹಾಸವೂ ಹೌದು ಆಧುನಿಕರಿಗೆ ಒಂದು ಕನಸೂ ಹೌದು.

ಭಾರತದ ಸ್ವಾತಂತ್ರ್ಯದ ಸ್ವರ್ಣ ಹಬ್ಬದ ಸಂಭ್ರಮದಲ್ಲಿ ಸುಮಾರು 550 ವರ್ಷಗಳ ಹಿಂದಿನ ಅಬ್ಬಕ್ಕ ಮತ್ತೆ ತುಳುವರ ಕನ್ನಡಿಗರ ಭಾರತೀಯರ ನೆನಪಿಗೆ ಬಂದಿರುವುದು ಒಂದು ಶುಭ ಲಕ್ಷಣ. ಕಳೆದ ವರ್ಷ (ನವೆಂಬರ್ 8,9-1997) ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಉಳ್ಳಾಲ ಅಬ್ಬಕ್ಕರಾಣಿ ಉತ್ಸವ ಸಮಿತಿಯ ಸಹಯೋಗದೊಂದಿಗೆ ಉಳ್ಳಾಲದಲ್ಲಿ ನಡೆಸಿದ ಎರಡು ದಿನಗಳ ಅರ್ಥಪೂರ್ಣ ವೈಭವಯುತ ಅಬ್ಬಕ್ಕ ಉತ್ಸವವು ಉಳ್ಳಾಲ ಪರಿಸರದಲ್ಲಿ ತುಳುನಾಡಿನ ರೋಮಾಂಚನದ ಅಲೆಗಳನ್ನು ಎಬ್ಬಿಸಿತು. ತುಳು ಸಾಹಿತ್ಯ ಅಕಾಡೆಮಿಯು ಅಬ್ಬಕ್ಕ ಮತ್ತು ಉಳ್ಳಾದ ಕುರಿತಾಗಿ 'ಉಳ್ಳಾಲ ಇತಿ ಆದಿ' ಎಂಬ ಗ್ರಂಥವನ್ನು ಪ್ರಕಟಿಸಿತು.

ಇಷ್ಟಾದರೂ ಅಬ್ಬಕ್ಕಳನ್ನು ಕುರಿತು ಐತಿಹಾಸಿಕ ಆಕರ ಸಾಮಗ್ರಿಗಳನ್ನು ಎಲ್ಲವನ್ನೂ ಬಳಸಿಕೊಂಡು ಸಾಧ್ಯವಾದಷ್ಟು ಅಧಿಕೃತ ಪ್ರಮಾಣ ಗ್ರಂಥವೊಂದನ್ನು ಪ್ರಕಟಿಸಬೇಕು ಎನ್ನುವ ತುಳು ಸಾಹಿತ್ಯ ಅಕಾಡೆಮಿಯ ಬಯಕೆಯನ್ನು ಪೂರೈಸಲು ತುಳುನಾಡಿನ ಇತಿಹಾಸ ಸಂಶೋಧಕ, ಪ್ರಾಧ್ಯಾಪಕ ಡಾ. ಕೆ.ಜಿ. ವಸಂತಮಾಧವರು ನೆರವಾದರು. ವಿದೇಶೀ ಪ್ರವಾಸಿಗರ ಬರಹಗಳನ್ನಷ್ಟೇ ನೋಡಿದರೂ ಉಳ್ಳಾಲದಲ್ಲಿ ಇಬ್ಬರು ಅಬ್ಬಕ್ಕರಿದ್ದರು ಎನ್ನುವ ಪ್ರಾಥಮಿಕ ಸಂಗತಿ ಗಮನಕ್ಕೆ ಬರುತ್ತದೆ. ಈ ಕುರಿತು ವಿದ್ವಾಂಸರಲ್ಲಿ ಸಹಜವಾಗಿಯೇ ಕೆಲವು ಭಿನ್ನಾಭಿಪ್ರಾಯಗಳಿದ್ದುವು. ವಿದೇಶೀ ಪ್ರವಾಸಿಗರ ಬರವಣಿಗೆಗಳ ಜೊತೆಗೆ ಮೌಖಿಕ ಪರಂಪರೆಯ ಐತಿಹ್ಯಗಳನ್ನು ಬಳಸಿಕೊಂಡು ಕನ್ನಡ ಮತ್ತು ತುಳುವಿನಲ್ಲಿ ನಾಟಕ, ಕಾದಂಬರಿ, ಲೇಖನ ಮುಂತಾದವು

ಪ್ರಕಟವಾಗಿವೆ. ಆದರೆ ಇತಿಹಾಸದ ಎಲ್ಲ ದಾಖಲಿತ ವಿವರಗಳನ್ನು ಕೂಡಾ ಗಮನಿಸುವುದು ಅಗತ್ಯ ಎನ್ನುವ ದೃಷ್ಟಿಯಿಂದ ತುಳು ಸಾಹಿತ್ಯ ಅಕಾಡೆಮಿಯ ಡಾ. ಕೆ.ಜಿ. ವಸಂತಮಾಧವ ಅವರ ಅಬ್ಬಕ್ಕದೇವಿಯರು ಎಂಬ ಪುಸ್ತಕವನ್ನು ಪ್ರಕಟಿಸುತ್ತಿದೆ.

ಡಾ. ಕೆ.ಜಿ. ವಸಂತ ಮಾಧವ ಅವರು ಈ ಗ್ರಂಥದಲ್ಲಿ ತುಳುನಾಡಿನ ಇತಿಹಾಸದಲ್ಲಿ ನಾಲ್ವರು ಅಬ್ಬಕ್ಕರು ಇದ್ದುದನ್ನು ಗುರುತಿಸಿದ್ದಾರೆ. ಉಳ್ಳಾಲದಲ್ಲಿ ಆಳಿದ ಇಬ್ಬರು ವೀರರಾಣಿ ಅಬ್ಬಕ್ಕರು, ಇನ್ನಿಬ್ಬರು ಪುತ್ತಿಗೆಯಲ್ಲಿ ಇದ್ದ ಕಲಾ ಪೋಷಕರಾದ ಅಬ್ಬಕ್ಕರು, ಪರಾಕ್ರಮ, ಸ್ವಾಭಿಮಾನ, ಹೋರಾಟಗಳ ದೃಷ್ಟಿಯಿಂದ ವಿದೇಶೀ ಪ್ರವಾಸಿಗರು ಐತಿಹ್ಯಗಳು ವರ್ಣಿಸುವ ಅಬ್ಬಕ್ಕರು ಆರಂಭದ ಇಬ್ಬರು ಅಬ್ಬಕ್ಕರು. ತಾಯಿ ಮತ್ತು ಮಗಳು ಛಲ ಮತ್ತು ಧೀಮಂತಿಕೆಯಿಂದ ಪೋರ್ಚುಗೀಸರೊಡನೆ ಹೋರಾಡಿದ್ದನ್ನು ರಾಜನೀತಿಜ್ಞತೆಯನ್ನು ಮೆರೆದದ್ದನ್ನು ಸಂಶೋಧಕರು ಎಲ್ಲ ದಾಖಲೆ ಸಹಿತ ವಿವರಿಸಿದ್ದಾರೆ. ಈ ಇಬ್ಬರು ಅಬ್ಬಕ್ಕರ ಬಗ್ಗೆ ಈಗಾಗಲೇ ಜನರಿಗಿರುವ ಅಭಿಮಾನ ಮತ್ತು ವಿಶ್ವಾಸ ಹೆಚ್ಚುವಂತೆ ಮಾಡಿದ್ದಾರೆ. ಅಬ್ಬಕ್ಕರ ಸಂಖ್ಯೆ ನಿರ್ಣಯಿಸುವುದಾಗಲೀ ಆ ಮೂಲಕ ಅಬ್ಬಕ್ಕರ ಸಾಮರ್ಥ್ಯವನ್ನು ಬೇರೆ ಬೇರೆ ತೋರಿಸುವುದಾಗಲೀ ಈ ಗ್ರಂಥದ ಉದ್ದೇಶವಲ್ಲ. ತುಳುನಾಡಿನ ಇತಿಹಾಸದಲ್ಲಿ 'ಅಬ್ಬಕ್ಕ ಪರಂಪರೆ'ಯನ್ನು ಈ ಗ್ರಂಥದ ಉದ್ದೇಶವಲ್ಲ. ತುಳುನಾಡಿನ ಇತಿಹಾಸದಲ್ಲಿ ಅಬ್ಬಕ್ಕ ಪರಂಪರೆಯನ್ನು ರೂಪಿಸುವುದು ಮತ್ತು ಆ ಪರಂಪರೆಯ ಹೆಣ್ಣಿನ ಧೈರ್ಯ, ಸ್ವಾಭಿಮಾನ ಮತ್ತು ಹೋರಾಟದ ಗುಣಗಳ ಒಟ್ಟಾಗಿ ನಮಗೆ ಆದರ್ಶವಾಗುವುದು ಬಹಳ ಮುಖ್ಯವಾದುದು.

ಡಾ. ಕೆ.ಜಿ. ವಸಂತ ಮಾಧವರು ಅನೇಕ ಅಪೂರ್ವ ದಾಖಲೆಗಳನ್ನು, ಕಡತಗಳನ್ನು, ಶಾಸನಗಳನ್ನು ಪರಿಶೀಲಿಸಿ ಪರಿಶ್ರಮಪೂರ್ವಕ ಈ ಕೃತಿಯನ್ನು ರಚಿಸಿದ್ದಾರೆ. ಇಲ್ಲಿರುವ ಮಾಹಿತಿಗಳಿಗೆ ಇನ್ನೂ ಹೆಚ್ಚಿನ ವಿವರಗಳು ಸೇರಿದರೆ ಈಗಿರುವ ಅಭಿಪ್ರಾಯಗಳಲ್ಲಿ ಪರಿಷ್ಕಾರವಾಗಲೂ ಬಹುದು. ಆದರೆ ಸಂಶೋಧನೆಯೆನ್ನುವುದು ಒಂದು ಪ್ರಕ್ರಿಯೆ ಎಂಬುದನ್ನು ಅರ್ಥ ಮಾಡಿಕೊಂಡಾಗ ಈ ಗ್ರಂಥದ ಮಹತ್ವ ನಮಗೆ ಮನವರಿಕೆಯಾಗುತ್ತದೆ.

ಇತಿಹಾಸದ 'ಅಬ್ಬಕ್ಕ ಪರಂಪರೆ' ವರ್ತಮಾನಕ್ಕೆ ಸಲ್ಲುವುದು, ವರ್ತಮಾನದಿಂದ ನಮ್ಮ ಭವಿಷ್ಯವನ್ನು ರೂಪಿಸುವುದು- ಈ ದೃಷ್ಟಿಯಿಂದ ಹಡಗು ಕಟ್ಟಿದ, ಕೋಟೆ ಕಟ್ಟಿದ ಜನಗಳನ್ನು

ಸಂಘಟಿಸಿದ ಹಿಂದೂ ಮುಸ್ಲಿಂ ಸಹಿತ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿದ ಅಬ್ಬಕ್ಕ ನಮ್ಮ ನಾಡಿಗೆ ತುಳುನಾಡಿಗೆ ದೀವಟಿಕೆಯಾಗಬೇಕು. ಅಂತಹ ಅಬ್ಬಕ್ಕ ದೀವಟಿಗೆಗೆ ಈ ಗ್ರಂಥ ಒಂದು ಮಡಲು ಎನ್ನುವ ವಿನಮ್ರತೆಯಿಂದ ತುಳು ಸಾಹಿತ್ಯ ಅಕಾಡೆಮಿ ಈ ಗ್ರಂಥವನ್ನು ತುಳು ಕನ್ನಡ ದೇಸಿಗರಿಗೆ ಅರ್ಪಿಸುತ್ತಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ವಿಶೇಷ ಅನುದಾನದಿಂದ 'ಅಬ್ಬಕ್ಕ ದೇವಿಯರು' ಎಂಬ ಈ ಗ್ರಂಥ ಪ್ರಕಟವಾಗುತ್ತಿದೆ. ಇದು ಸಾಧ್ಯವಾದಷ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಅ.ರಾ. ಚಂದ್ರಹಾಸ ಗುಪ್ತ ಅವರ ಸಂಸ್ಕೃತಿ ಪ್ರೀತಿಯಿಂದಾಗಿ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣರ ಸಹಕಾರದಿಂದಾಗಿ, ಕರ್ನಾಟಕ ಸರಕಾರ ಮತ್ತು ಈಗ ಇಬ್ಬರು ಸಹೃದಯ ಅಧಿಕಾರಿಗಳಿಗೆ ತುಳು ಸಾಹಿತ್ಯ ಅಕಾಡೆಮಿಯು ಕೃತಜ್ಞವಾಗಿದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಜಯ ಆಫ್‌ಸೆಟ್, ಕಾರ್‌ಸ್ಟ್ರೀಟ್, ಮಂಗಳೂರು ಮತ್ತು ಕಲಾತ್ಮಕ ಮುಖಪುಟವನ್ನು ರಚಿಸಿದ ಶ್ರೀ ಗೋಪಾಡ್ಕರ್ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಏಪ್ರಿಲ್ 2007

ಪ್ರೊ. ಬಿ.ಎ. ವಿವೇಕ ರೈ

ಅಧ್ಯಕ್ಷರು

ಅಧ್ಯಕ್ಷರ ಮಾತು - 2

ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ, ಕಡೆಗಣಿಸಲ್ಪಟ್ಟ ರಾಣಿ ಎಂದರೆ ತುಳುನಾಡಿನ ಉಳ್ಳಾಲದ ರಾಣಿ ಅಬ್ಬಕ್ಕ. ಸ್ವಾತಂತ್ರ್ಯ ಹೋರಾಟಕ್ಕೆ ತನ್ನನ್ನು ತಾನೇ ಅರ್ಪಿಸಿಕೊಂಡ ಈ ಧೀರ ಮಹಿಳೆಯ ಸತ್ಯ ಚರಿತ್ರೆ ಇನ್ನೂ ನಿಖರವಾಗಿ ಕರ್ನಾಟಕದವರಿಗೆ ಹಾಗೂ ಭಾರತೀಯರಿಗೆ ತಲುಪದಿರುವುದು ವಿಷಾದಕರ. ಇದಕ್ಕೆ ಬದಲಾದ ಕಾರಣ ಚರಿತ್ರೆಯಲ್ಲಿ ಹಲವಾರು ಅಬ್ಬಕ್ಕ ಎಂಬ ರಾಣಿಯರ ಹೆಸರನ್ನು ನಾವು ಕಾಣುತಿದ್ದೇವೆ. ಹಲವಾರು ವಿದ್ವಾಂಸರು, ಶೋಧನೆಗಾರರು, ಸ್ವಾತಂತ್ರ್ಯ ಹೋರಾಟಗಾರ್ತಿ ಅಬ್ಬಕ್ಕ ಯಾರೆಂಬ, ದಿಸೆಯಲ್ಲಿ ಸಂಶೋಧನೆ ನಡೆಸಿದ್ದಾರೆ. ಉಳ್ಳಾಲದಲ್ಲಿ ರಾಣಿಯಾಗಿದ್ದು, ಪೋರ್ಚುಗೀಸರೊಂದಿಗೆ ಸುಂಕ, ಕೋಟೆ ನಿರ್ಮಿಸಲು ಜಾಗ ಹಾಗೂ ಪೋರ್ಚುಗೀಸರು ವ್ಯಾಪಾರ ವ್ಯವಹಾರದಲ್ಲಿ ಎಸಗುವ ಅಕ್ರಮವನ್ನು ತಡೆಗಟ್ಟಿ ಪೊಚುಗೀಸರ ಪಾಲಿಗೆ ವೈರಿಯಾಗಿದ್ದ ಅಬ್ಬಕ್ಕ ಯಾರೆಂಬುದನ್ನು ಇನ್ನು ಸ್ಪಷ್ಟವಾಗಿಲ್ಲ.

ವಿದೇಶಿ ಪ್ರವಾಸಿಗರು, ಬರಹಗಾರರು ಈ ತುಳುನಾಡಿಗೆ ಆಗಮಿಸಿ ಬರೆದ ಲೇಖನಗಳನ್ನು ಗಮನಿಸಿದರೇ, ಪೋರ್ಚುಗೀಸರೊಂದಿಗೆ ದಿಟ್ಟವಾಗಿ ನೇರವಾಗಿ ಹೋರಾಡಿದವಳು ಇಂಥವಳೇ ಎಂದು ಹೇಳಲು ಅಸಾದ್ಯ. ಡಾ. ಕೆ. ಜಿ. ವಸಂತ ಮಾಧವರವರು ನಾಲ್ಕು ಅಬ್ಬಕ್ಕದೇವಿಯರ ಹೆಸರನ್ನು ಸೂಚಿಸಿರುವರು ಕ್ರಮವಾಗಿ ೧೫೫೪ ರಿಂದ ೧೫೮೪ರ ವರೆಗೆ, ೧೫೯೪ ರಿಂದ ೧೯೪೦ರ ವರೆಗೆ, ೧೬೬೭ ರಿಂದ ೧೬೭೬ರ ವರೆಗೆ ಮತ್ತು ೧೭೧೯ ರಿಂದ ೧೭೪೦ರ ವರೆಗೆ ಆಳಿದ ಇವರೆಲ್ಲರೂ ತುಳುನಾಡಿನ ಇತಿಹಾಸವನ್ನು ತಮ್ಮದೇ ಆದ ಶೈಲಿಯಲ್ಲಿ ಶ್ರೀಮಂತಗೊಳಿಸಿದ್ದಾರೆ ಎಂದಿದ್ದಾರೆ.

ಇತಿಹಾಸದಲ್ಲಿ ಎಷ್ಟೊ ರಾಜ-ರಾಣಿಯರು ಕಾಣಿಸಿಕೊಂಡರು, ಅವರ ಸಾಧನೆಯ ಮೇರೆಗೆ ಅವರನ್ನು ಗುರುತಿಸುವ ಕೆಲಸ ಮುಖ್ಯವಾದುದು ಈ ಕಾರಣದಿಂದ ತುಳುನಾಡಿಗೆ ವೈರಿಗಳಾಗಿ ಆಗಮಿಸಿದ ತನ್ನವರು ಗೈದ ವಂಚನೆಗೆ ಬಲಿಯಾಗಿ ಪೋರ್ಚುಗೀಸರೊಂದಿಗೆ ಸ್ವಾತಂತ್ರ್ಯಕ್ಕಾಗಿ, ಹೋರಾಡಿದ ನಾಲ್ವರು ಧೀರಮಹಿಳೆಯರಲ್ಲಿ, (ಈ ನಾಲ್ವರು ಯಾರು ಎಂಬುದು ಇನ್ನೂ ಸ್ಪಷ್ಟೀಕರಿಸಲು ಸಾದ್ಯವಿಲ್ಲ. ಈ ದಿಸೆಯಲ್ಲಿ ತುಳು ಅಕಾಡೆಮಿ ಇನ್ನೂ ಸಂಶೋಧಕರಿಗೆ, ಅಧ್ಯಯನಗಾರರಿಗೆ ಪ್ರೋತ್ಸಾಹಿಸುತ್ತದೆ.) ಔರ್ವಳ ಚರಿತ್ರೆಯ ಕತೆಯನ್ನು ಎತ್ತಿ ಹಿಡಿಯಬೇಕಾದದ್ದು ತುಳುವರ ಕರ್ತವ್ಯ.

ಈ ದಿಸೆಯಲ್ಲಿ ಡಾ. ಕೆ. ಜಿ. ವಸಂತ ಮಾಧವರವರು ತನ್ನ ಈ ಪುಸ್ತಕದಲ್ಲಿ ಕ್ರಿ. ಶ. ೧೫೫೪ ರಿಂದ ೧೭೪೦ರ ವರೆಗೆ ಬರುವ ಚೌಟರ ಮನೆತನದ ಇತಿಹಾಸದಲ್ಲಿ ಹಿನ್ನಲೆಯನ್ನು ನೀಡಿದ್ದಾರೆ.

"ಅಬ್ಬಕ್ಕ ದೇವಿಯರು" ಎಂಬ ಪುಸ್ತಕ ತುಳುನಾಡಿನ ಇತಿಹಾಸವನ್ನು ಪ್ರತಿಬಿಂಬಿಸಬೇಕಾದ ಕಾರಣಗಳನ್ನು ಹೊತ್ತು ಈ ಸುವರ್ಣ ಕರ್ನಾಟಕದ ಸವಿನೆನಪಿನ ಸವಿ ಉಣ್ಣಲು ಓದುಗರಿಗೆ ಈ ಪುಸ್ತಕಗಳನ್ನು ಮರುಮುದ್ರಿಸಲು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮುಂದಾಗಿದೆ.

ಇದರ ಮರುಮುದ್ರಣಕ್ಕೆ ಒಪ್ಪಿದ ಲೇಖಕರಿಗೆ, ಸಹಕರಿಸಿದ ಎಲ್ಲಾ ಸಹದಯಿ ಅಭಿಮಾನಿಗಳಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಏಪ್ರಿಲ್ 2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು

ಲೇಖಕರ ಮಾತು

ಕರಾವಳಿ ಕರ್ನಾಟಕ ಇತಿಹಾಸದ ಸಂದಿಗ್ಧ ಕಾಲದಲ್ಲಿ (೧೫೬೫–೧೬೪೦) ಬೆಳಕಿಗೆ ಬಂದವರು ಉಳ್ಳಾಲದ ರಾಣಿಯರು ಅಬ್ಬಕ್ಕ ದೇವಿಯರು. ಇವರು ಈ ಕಾಲದಲ್ಲಿ ಅಪ್ರತಿಮ ಸಾಹಸ ಮತ್ತು ಧೈರ್ಯವನ್ನು ತೋರಿಸಿ ಈ ಪರಿಸ್ಥಿತಿಯನ್ನು ತಮ್ಮ ಹಿಡಿತಕ್ಕೆ ತಂದರು. ಇವರ ಸಾಹಸ, ಸ್ಥೈರ್ಯ ಮತ್ತು ಜನಹಿತ ಕಾರ್ಯಗಳನ್ನು ಮೆಚ್ಚಿ ಹೊಗಳಿದರು. ಸಮಕಾಲೀನ ಇತಿಹಾಸಕಾರರು ಹಾಗೂ ದಾಖಲೆಕಾರರು. ಆದರೂ, ಈ ರಾಣಿಯರ ಮಾಹಿತಿ ಕ್ರಿ.ಶ. ೧೮೯೨ರ ವರೆಗೆ ಏನೂ ಲಭ್ಯವಿರಲಿಲ್ಲವೆಂದರೆ ತಪ್ಪಾಗಲಾರದು. ಆ ವರ್ಷ ಪಿಯತ್ರೊ ದೆಲ್ಲಾವೆಲ್ಲೆಯ ಪ್ರವಾಸಕಥನವು ಆಂಗ್ಲ ಭಾಷೆಗೆ ತರ್ಜುಮೆಗೊಂಡು ಲಂಡನ್ನಿನಲ್ಲಿ ಪ್ರಕಟವಾಯಿತು. ಇದರಿಂದಾಗಿ ಪ್ರೇರಿತವಾಗಿ ಕೆಲವು ವಿದ್ವಂಸರುಗಳುಅಬ್ಬಕ್ಕ ದೇವಿಯರ ಕುರಿತಾಗಿ ಮಾಹಿತಿಗಳನ್ನು ಸಂಗ್ರಹಿಸಿ ಕೆಲವು ಲೇಖನಗಳನ್ನು ಬರೆದು ಪ್ರಕಟಿಸಿದರು. ಆದರೆ ಇವುಗಳಲ್ಲಿ ತಿಳಿಸಿದ ಹೆಚ್ಚಿನ ಮಾಹಿತಿಗಳು ಜನಜನಿತ ಕಥೆಗಳಿಂದ ಕೂಡಿವೆ. ಈ ರಾಣಿಯವರುಗಳ ಕುರಿತಾದ ನಿಖ ಇತಿಹಾಸ ದಾಖಲೆಗಳು ಸಿಕ್ಕಿವೆ. ಈ ಹಿನ್ನೆಲೆಯಲ್ಲಿ ಅಬ್ಬಕ್ಕ ರಾಣಿಯರ ಇತಿಹಾಸವನ್ನು ಪುನರ್ ನಿರ್ಮಿಸುವ ಅವಶ್ಯಕತೆ ಇದೆ. ಈ ಯತ್ನವನ್ನು ಇಲ್ಲಿ ಮಾಡಲಾಗಿದೆ.

ಉಳ್ಳಾಲ ಅಬ್ಬಕ್ಕಂದಿರ ಅಧಿಕೃತ ಇತಿಹಾಸ ರಚಿಸುವ ಸೂಚಿಸಿ ಇದಕ್ಕೆ ಪ್ರೋತ್ಸಾಹ ನೀಡಿದವರು ಡಾ. ಬಿ.ಎ. ವಿವೇಕ ರೈ, ಪೋರ್ತುಗೀಸ್ ಭಾಷೆಯಲ್ಲಿದ್ದ ಹೆಚ್ಚಿನ ನಿಖರ ದಾಖಲೆ ಮತ್ತು ಇತಿಹಾಸಗಾರರನ್ನು ಪರಿಚಯಿಸಿ ಮತ್ತು ವಿಷಯಗಳನ್ನು ತಿಳಿಸಿದವರು ಗುರು ಮತ್ತು ಮಿತ ದಿ| ಬಿ.ಎಸ್. ಶಾಸ್ತ್ರಿಯವರು. ಗೋವಾ ಪತ್ರಾಗಾರದಲ್ಲಿರುವ ಕೆಲವು ಉಪಯುಕ್ತ ದಾಖಲೆಗಳನ್ನು ಅಧ್ಯಯಿನಿಸಲು ಅವಕಾಶ ಕೊಟ್ಟವರು ಈ ಪತ್ರಾಗಾರ ನಿರ್ದೇಶಕ ಪಿ.ಪಿ. ಶಿರೋಢಕಾರರು. ಹೆರಾಸ್ ಸಂಸ್ಥೆ ಕ್ಸೇವಿಯರ್ ಕಾಲೇಜು ಮುಂಬಯಿ ಮುಖ್ಯವಾಗಿ ಈ ಸಂಸ್ಥೆಯ ನಿರ್ದೇಶಕರು ಜೊನ್ ಕೊರಿಯಾ 'ಅಫಾನ ಸೊ (John Carreio-Afonso) ಇನ್ನು ಕೆಲವು ಪೋರ್ತುಗೀಸ್ ದಾಖಲೆಯಲ್ಲಿದ್ದ ಮಾಹಿತಿಗಳನ್ನು ತಿಳಿಸಿದರು. ಅಬ್ಬಕ್ಕ ದೇವಿಯರುಗಳು ಕುರಿತಾಗಿ ಕೆಲವು ನಿಖರ ಸ್ಥಳೀಯ ದಾಖಲೆ ಮುಖ್ಯವಾಗಿ ಶಾಸನ ಮತ್ತು ಕಡತಗಳನ್ನು ಅಧ್ಯಯನಿಸಲು ನೀಡಿದವರು ಶ್ರೀ ವೈ. ಉಮಾನಾಥ ಶೆಣೈ ಹಾಗೂ ಎಸ್.ಡಿ. ಶೆಟ್ಟಿ (ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ, ಡಾ. ಎ.ಕೆ. ಶಾಸ್ತ್ರಿ ಪ್ರಾಧ್ಯಾಪಕ ಡಾ. ಎ.ಕೆ. ಶಾಸ್ತ್ರಿ ಇತಿಹಾಸ ಪ್ರಾಧ್ಯಾಪಕ, ಶಿರಸಿ ಕಲಾ ಶಾಲೆ ಶಿರಸಿ, ಮತ್ತು ಮೂಡಬಿದಿರೆಯ ಶ್ರೀ ದೇವಕುಮಾರ ಜೈನ. ಗೆಳೆಯ ಪಿ. ಶ್ರೀನಿವಾಸ ಭಟ್ಟ ಕಟೀಲು ಮೊದಲಾದವರು. ಈ ರಾಣಿಯರುಗಳ ಕುರಿತಾಗಿ ಕೆಲವು ಅಮೂಲ್ಯ ಗ್ರಂಥಗಳನ್ನು ಅಧ್ಯಯನಿಸುವಲ್ಲಿ ಸಹಕರಿಸಿದವರು ಮಿತ್ರ ಎಸ್. ಮೋಹನ್‌ರಾವ್ ಗ್ರಂಥ ಪಾಲಕ ವಿಜಯ ಕಾಲೇಜು ಮೂಲ್ಕಿ, ಈ ಎಲ್ಲಾ ಮಹನೀಯರಿಗೆ ಈ ಗ್ರಂಥಕರ್ತ ಕೃತಜ್ಞನಾಗಿದ್ದಾನೆ.

ಅಬ್ಬಕ್ಕಂದಿರ ಅಧಿಕೃತ ಎನ್ನಬಹುದಾದ ಇತಿಹಾಸ ತಿಳಿಸುವ ಈ ಗ್ರಂಥದಲ್ಲಿ ಸಮಕಾಲೀನ ನಿಖರ ಆಕರಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಇವುಗಳಲ್ಲಿ ಗಮನಾರ್ಹವಾದವುಗಳಾವುವೆಂದರೆ ಶಾಸನ, ಕಡತ ಮತ್ತು ವಿದೇಶಿಯ ದಾಖಲೆಗಳು. ಈ ರಾಣಿಯರ ಮಾಹಿತಿ ತಿಳಿಸುವ ಜನಜನಿತ ಹೇಳಿಕೆಗಳನ್ನು ನಿಖರ ಐತಿಹಾಸಿಕ ದಾಖಲೆಗಳ ಆಧಾರದಿಂದ ವಿಮರ್ಶಿಸಿ ಇವುಗಳಿಗೆ ವಿರೋಧವಿಲ್ಲದವುಗಳನ್ನು ಈ ಗ್ರಂಥದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈ ಗ್ರಂಥ ಪ್ರಕಟಿಸಲು ಹೆಚ್ಚಿನ ಆಸಕ್ತಿ ವಹಿಸಿ ಪ್ರಕಟಿಸಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು, ಮುಖ್ಯವಾಗಿ ಇದರ ಅಧ್ಯಕ್ಷ ಪ್ರೊ. ಬಿ.ಎ. ವಿವೇಕ ರೈ ಹಾಗೂ ಸದಸ್ಯ ಡಾ. ವಾಮನ ನಂದಾವರ ಇವರಿಗೆ ಈ ಗ್ರಂಥಕರ್ತನ ಕೃತಜ್ಞತೆಗಳು.

'ಆರಾಧನಾ'
ಪಾವಂಜೆ,
ಹಳೆಯಂಗಡಿ

ಡಾ. ಕೆ.ಜಿ. ವಸಂತ ಮಾಧವ

ಪರಿವಿಡಿ

ಲೇಖಕರ ಮಾತು

ಅಧ್ಯಾಯ ೧ : ಪೀಠಿಕೆ - ಅಬ್ಬಕ್ಕ ದೇವಿಯರ ಚರಿತ್ರೆಯ ಮಹತ್ವ 1

ಅಧ್ಯಾಯ ೨ : ಆಕರಗಳು - ಇವುಗಳ ವಿಶ್ಲೇಷಣೆ ಮತ್ತು ವಿಮರ್ಶಾತ್ಮಕ ಅಧ್ಯಯನ ಬರಹಗಳ ಸಮೀಕ್ಷೆ 4

ಅಧ್ಯಾಯ ೩ : ಅಬ್ಬಕ್ಕ ದೇವಿಯರ ಐತಿಹಾಸಿಕ ಹಿನ್ನೆಲೆ - ಚೌಟರಸರ ಚಟುವಟಿಕೆಗಳು 18

ಅಧ್ಯಾಯ ೪ : ಹಿರಿಯ ಅಬ್ಬಕ್ಕ ದೇವಿ ೧೫೫೪-೧೫೮೮-ಪರಿಚಯ-ರಾಜಕೀಯ ಪರಿಸ್ಥಿತಿ ಅಬ್ಬಕ್ಕ ದೇವಿ ಪೋರ್ತುಗೀಸರು-ಬಂಗ-ಚೌಟರಾಣಿ ಮತ್ತು ಪೋರ್ತುಗೀಸರು-ಅಬ್ಬಕ್ಕಳ ಇನ್ನಿತರ ಸಾಧನೆಗಳು 21

ಅಧ್ಯಾಯ ೫ : ಅನಾಮಧೇಯ ಚೌಟರಸ (ಚಂದ್ರಶೇಖರ ರಾಯ) ಬಂಗ ಮತ್ತು ಉಳ್ಳಾಲ ಚೌಟರಸ—ಪೋರ್ತುಗೀಸರು. 37

ಅಧ್ಯಾಯ ೬ : ಕಿರಿಯ ಅಬ್ಬಕ್ಕ ದೇವಿ-ಬಂಗ ಪೋರ್ತುಗೀಸ್ ಕೆಳದಿನಾಯಕರೊಳಗಿನ ರಾಜಕೀಯ ಸಂಬಂಧ- ಯುದ್ಧ-ಪೋರ್ತುಗೀಸರ ಸೋಲು. ಅಬ್ಬಕ್ಕ ದೇವಿಯ ವ್ಯಕ್ತಿತ್ವ-ಬೊಕೆರೊ ಮತ್ತು ಡೆಲ್ಲಾವೆಲ್ಲೆ ವರದಿಗಳ ಆಧಾರದಿಂದ—ಅಬ್ಬಕ್ಕ ಮತ್ತು ಕೆಳದಿ ನಾಯಕರು ಅಬ್ಬಕ್ಕ ದೇವಿಯ ಉತ್ತರಾಧಿಕಾರಿಗಳು 39

ಅಧ್ಯಾಯ ೭ : ಮೂರನೇ ಮತ್ತು ನಾಲ್ಕನೇ ಅಬ್ಬಕ್ಕ ದೇವಿಯರು 57

ಅಧ್ಯಾಯ ೭ : ಪರಿಶಿಷ್ಟ : 60

ಆಯ್ದ ಆಕರ ಗ್ರಂಥಗಳು :

ಹಿರಿಯ ಅಬ್ಬಕ್ಕ ದೇವಿಯ ಶಾಸನಗಳು (ಪಡಿಯಚ್ಚಿನೊಂದಿಗೆ)

ಭೂಪಟಗಳು

ಅರ್ಪಣೆ

ನನಗೆ ಅತ್ಯಂತ ಆಸಕ್ತಿಯಿಂದ

ಪೋರ್ತುಗೀಸ್ ದಾಖಲೆಗಳ ಮಾಹಿತಿ ತಿಳಿಸಿದ

ಗುರು ಹಾಗೂ ಮಿತ್ರ

ದಿ| ಡಾ. ಬಿ. ಎಸ್. ಶಾಸ್ತ್ರಿ

(೧೯೩೭–೧೯೯೧)

ಅವರಿಗೆ.

ಅಧ್ಯಾಯ ೧

ಪೀಠಿಕೆ

ತುಳುನಾಡಿನ ಇತಿಹಾಸದ ವೈಶಿಷ್ಟ್ಯ -ರಾಣಿಯರು ಅಬ್ಬಕ್ಕದೇವಿಯರು ತುಳುನಾಡಿನ ಇತಿಹಾಸದಲ್ಲಿ.

ಇತಿಹಾಸವೆಂಬುದು ಒಂದು ವೈಜ್ಞಾನಿಕ ಅಧ್ಯಯನ ವಿಷಯವಾಗಿದೆ. ಇದರ ಮುಖ್ಯ ಉದ್ದೇಶವೆಂದರೆ ಗತಕಾಲದ ಮಾನವನ ಸಮಗ್ರ ಚಟುವಟಿಕೆಗಳನ್ನು ಕಾಲಾನುಕ್ರಮಣಿಕೆಯಂತೆ ನಿರೂಪಿಸುವುದು ಇತಿಹಾಸಕಾರರು ತೋರಿಸಬೇಕಾದ ನಿಷ್ಪಕ್ಷಪಾತ ಧೋರಣೆ. ಇದನ್ನು ಅವಲಂಭಿಸಿಯೇ ವೈಜ್ಞಾನಿಕ ರೀತಿಯ ಇತಿಹಾಸ ನಿರೂಪಿಸಲಾಗುತ್ತದೆ. ಈ ರೀತಿಯಲ್ಲಿ ರಚಿತವಾದ ಇತಿಹಾಸವು ಮಾನವನಿಗೆ ಬಹಳ ಉಪಯುಕ್ತವಾಗುತ್ತದೆ. ತನ್ನ ಪೂರ್ವಿಕರ ವಿಚಾರಗಳಿಗೆ ಸಂಬಂಧಿಸಿದ ಸರಿಯಾದ ಮಾಹಿತಿಗಳು ದೊರೆಯುತ್ತವೆ.

ಇತಿಹಾಸ ಅಧ್ಯಯನವು ಹಲವಾರು ಪ್ರಕಾರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದದ್ದು ಪ್ರಾದೇಶಿಕ ಇತಿಹಾಸ. ಇಂದು ಇದರ ಅಧ್ಯಯನದ ಅವಶ್ಯಕತೆ ತುಂಬಾ ಇದೆ. ಏಕೆಂದರೆ ಪ್ರಾದೇಶಿಕ ಇತಿಹಾಸವು ರಾಷ್ಟ್ರೀಯ ಇತಿಹಾಸದ ಕೊಂಡಿ ಮತ್ತು ತಳಪಾಯ. ವ್ಯಾಪ್ತಿಯ ಮಿತವಾದುದೆಂದು ತೋರಿದರೂ ಪ್ರಾದೇಶಿಕ ಇತಿಹಾಸದ ಅಧ್ಯಯನವು ಅಲ್ಲಿನ ಹಲವಾರು ಐತಿಹಾಸಿಕ ವೈಶಿಷ್ಟ್ಯಗಳನ್ನು ಬೆಳಕಿಗೆ ತರುತ್ತದೆ. ಈ ಹಿನ್ನೆಲೆಯಲ್ಲಿ ತುಳುನಾಡಿನ ಇತಿಹಾಸದ ಅಧ್ಯಯನವನ್ನು ಪರಿಶೀಲಿಸಬಹುದು.

ಪ್ರಾಚೀನಕಾಲದಿಂದ ಹದಿನೈದನೇ ಶತಮಾನದವರೆಗೆ ಉತ್ತರಕ್ಕೆ ಅಂಕೋಲಾ ನದಿಯಿಂದ ದಕ್ಷಿಣಕ್ಕೆ ಚಂದ್ರಗಿರಿ ನದಿಯವರೆಗೆ ಪಶ್ಚಿಮಕ್ಕೆ ಅರಬಿ ಸಮುದ್ರದಿಂದ ಪೂರ್ವಕ್ಕೆ ಸಹ್ಯಾದ್ರಿ ಅಂಚಿನವರೆಗಿನ ಪ್ರದೇಶವನ್ನು ತೌಳವ ಅಥವಾ ತುಳುನಾಡು ಎಂದು ಕರೆಯುತ್ತಿದ್ದರು. ಈ ಪ್ರದೇಶವು ರಾಜಕೀಯವಾಗಿ ಕರ್ನಾಟಕದ ಅರಸುಮನೆತನದ ಸಾರ್ವಭೌಮತೆಯನ್ನು ಒಪ್ಪಿಕೊಂಡಿದ್ದರೂ ಇಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣವಾದ

---

೧ Duarte Barbose ; The Book of Duarte Barbose Vol I Lord 1981 I ಪು ೧೮೪೧ ೩, ಎಪ್ರಿಗ್ರಾಪಿಯಾ ಕರ್ನಾಟಕ (ಹಳೆ ಮುದ್ರಣ) VII ಸಾಗರ ಸಂಖ್ಯೆ 55

ರಾಜಕೀಯ ಮತ್ತು ಸಾಂಸ್ಕೃತಿಕ ಪರಂಪರೆಗಳಿದ್ದುವು. ಇಲ್ಲಿ ಗಮನಿಸಬೇಕಾದ ರಾಜಕೀಯ ಇತಿಹಾಸದ ಮುಖ್ಯ ಸಂಗತಿಯೆಂದರೆ ಸುಮಾರು ಎಂಟು ನೂರು ವರ್ಷಗಳಷ್ಟು ದೀರ್ಘಕಾಲ ಅಳುಪ ಜಮನೆತನವು ತುಳು, ಹೈವ ಮತ್ತು ಬನವಾಸಿ ಮಂಡಲಗಳಲ್ಲಿ ರಾಜಕೀಯ ವರ್ಚಸ್ಸನ್ನು ಹೊಂದಿತ್ತು. ಅಳುಪರ ಬಳಿಕ ತುಳುನಾಡಿನಲ್ಲಿ ಅನೇಕ ಸ್ಥಳೀಯ ಅರಸು ಮನೆತನದವರು ಆಳಿ, ಕರ್ನಾಟಕದ ರಾಜಕೀಯ ಶಕ್ತಿಗೆ ಹೊಂದಿಕೊಂಡು ಬಾಳಿದರು. ಇದರಿಂದಾಗಿ ಇಲ್ಲಿಗೇ ವಿಶಿಷ್ಟವಾದ ರಾಜಕೀಯ ಮತ್ತು ಆಡಳಿತ ಸಂಸ್ಥೆಗಳು ಕಾಣಿಸಿಕೊಂಡವು. ೨ ಸ್ತ್ರೀ ಸಂತತಿ ಮತ್ತು ಅಳಿಯ ಸಂತಾನ ಕಟ್ಟಿನಂತೆ ಹೆಂಗಸರು ಆಡಳಿತದ ಪಟ್ಟಕ್ಕೆ ಬರುವುದು ಇಲ್ಲಿನ ವಿಶಿಷ್ಟವಾದ ಒಂದು ರಾಜಕೀಯ ಪದ್ಧತಿ. ಇದರಿಂದಾಗಿ ತುಳುನಾಡಿನಲ್ಲಿ ಹಲವಾರು ರಾಣಿಯರ ಆಳ್ವಿಕೆಗಳು ನಡೆದಿರುವ ವಿವರಗಳು ದೊರೆಯುತ್ತವೆ. ಇವರಲ್ಲಿ ಕೆಲವು ರಾಣಿಯರು ರಾಜರುಗಳ ರಾಜಕೀಯದಲ್ಲಿ ಸಹಭಾಗಿಗಳಾಗುತ್ತಿದ್ದರು. ಇಂತಹವರಲ್ಲಿಮುಖ್ಯರಾದವರು :- ಅಳುಪ ವಂಶದ ಬಲ್ಲ ಮಹಾದೇವಿ (೧೨೨೫-೧೯೨) ಮತ್ತು ಚಿಕ್ಕಾಯಿ ತಾಯಿ (೧೩೩೩-೧೩೪೮), ಬಂಗ ವಂಶದ ವಿಠಲ ದೇವಿ (೧೪೧೬ ಮತ್ತು ವೀರನರಸಿಂಹ ಶಂಕರದೇವಿ ||| (೧೬೪೩), ಸೀಮಂತೂರು ಸಾಮಂತ ವಂಶದ ಚೆನ್ನಮ್ಮ ದೇವಿ, (ಪೋರ್ತುಗೀಸ್ ದಾಖಲೆ ಪತ್ರದಲ್ಲಿ ಇವಳ ಬಗ್ಗೆ ಕಾನ್ರಾಡಿನ ರಾಣಿ ಎಂದು ಉಲ್ಲೇಖವಿದೆ) (೧೬೧೦-೧೬೪೦) ಮತ್ತು ಇದೇ ವಂಶದ ಎರಡನೇ ಚೆನ್ನಮ್ಮ ದೇವಿ (೧೭೦೦), ಕಾರ್ಕಳ ಭೈರರಸ ವಂಶದ ಚಂದಲ ಮತ್ತು ಬೊಂಮಲ ದೇವಿ ೩ (೧೪೮೦-೯೦ ಮತ್ತು ೧೪೯೦-೧೫೧೦ ಅನುಕ್ರಮವಾಗಿ) ಹೊನ್ನಕಂಬಳಿಯ ಅಂಮಿದೇವಿಯಮ್ಮ (೧೫೬೦-೧೬೯೧) ಪಡುಬಿದ್ರೆಯ ಚಂದಲ ದೇವಿ (೧೫೪೩) ಮತ್ತು ಉಳ್ಳಾಲ ಚೌಟ ವಂಶದ ಹಿರಿಯ ಅಬ್ಬಕ್ಕ ದೇವಿ ",(೧೫೫೪-೧೫೮೪) ಪುತ್ತಿಗೆಯಲ್ಲಿ ಆಳಿಕೊಂಡಿದ್ದ ಇವಳ ಸಹೋದರಿ ಲೋಕಾದೇವಿ (೧೫೬೫-೧೫೭೪) ಕಿರಿಯ ಅಬ್ಬಕ್ಕ ದೇವಿ (೧೫೯೪-೧೬೪೦) ಮೂರನೇ

---

೨. ಆಡಳಿತ ವಿಭಾಗಗಳಾದ ನಾಡು, ಸೀಮೆ ಮಾಗಾಣೆ, ಇವುಗಳ ಮೇಲ್ವಿಚಾರಕರಾದ ಅರಸು ಬಲ್ಲಾಳ, ಭಾವ, ಬಾಳಿಕೆ, ಪರಾರಿ, ಗುರಿಕಾರ ಇತ್ಯಾದಿಗಳಿಗೆ ನೋಡಿ ಗಣಪತಿ ರಾವ್ ಐಗಳ್, ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ (ಮಂಗಳೂರು ೧೯೨೩) ಪುಪು 382-421 (ಇದು ದ. ಕ. ಪ್ರಾಚೀನ ಇತಿಹಾಸವೆಂದು ಪರಿಷ್ಕರಿಸಲಾಗಿ ಮುಂದೆ ತಿಳಿಸಿದೆ.

೩. ಇವರುಗಳು ರಾಜ್ಯವಾಳದಿದ್ದರೂ ರಾಜಕೀಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸಿದ್ದರು.

೪. ಗಣಪತಿರಾವ್ ಐಗಳ ಪ್ರಕಾರ ಕ್ರಿ. ಶ. ೧೨೮೩-೧೩೧೬ ರ ಅವಧಿಯಲ್ಲಿ ಅಬ್ಬಕ್ಕದೇವಿಯು ಪುತ್ತಿಗೆ ಸೀಮೆಯನ್ನು ಆಳಿಕೊಂಡಿದ್ದಳೆಂದು ತಿಳಿಸಿದ್ದಾರೆ. ಆಗಳ ಅದೇ ಗ್ರಂಥ ಪ, ೨೯೬-೩೧೨. ಆದರೆ ಆ ಕಾಲದಲ್ಲಿ ಇಲ್ಲಿ ಸಿಕ್ಕಿದ ಶಾಸನಗಳು ಇವಳ ಹೆಸರನ್ನೆ ಹೇಳದೆ ಆಳುಪರ ಆಳ್ವಿಕೆ ಮತ್ತು ಬಲ್ಲಾಳ ಸಾಲಿನಾಡುಗಳನ್ನು ಉಲ್ಲೇಖಿಸಿದೆ. ಇದರಿಂದಾಗಿ ಇವರ ಅಸ್ತಿತ್ವವು ಪ್ರಶ್ನಿಸುವಂತಾಗಿದೆ.

ಅಬ್ಬಕ್ಕ ದೇವಿ (೧೬೬೭-೧೬೭೬) ಮತ್ತು ನಾಲ್ಕನೆಯ ಅಬ್ಬಕ್ಕ ದೇವಿ (೧೭೧೯-೧೭೪೦) ಈ ಎಲ್ಲಾ ರಾಣಿಯರು ತುಳುನಾಡಿನ ಸಾಂಸ್ಕೃತಿಕ ಇತಿಹಾಸವನ್ನು ತಮ್ಮದ್ಮೇ ಆದ ರೀತಿಯಲ್ಲಿ ಶ್ರೀಮಂತಗೊಳಿಸಿದ್ದಾರೆ.

ಈ ಗ್ರಂಥದ ಮುಖ್ಯನಾಯಿಕೆಯರಾದ ಅಬ್ಬಕ್ಕದೇವಿಯರು ತುಳುನಾಡಿನ ಚರಿತ್ರೆಯಲ್ಲಿ ತಮ್ಮ ಪರಾಕ್ರಮ ಮತ್ತು ಶೌರ್ಯ ಧೈರ್ಯ ಮತ್ತು ಸ್ಥೈರ್ಯಗಳಿಂದ ಮಹತ್ವ ಪಡೆದಿದ್ದಾರೆ. ಮೊದಲನೆಯ ಅಬ್ಬಕ್ಕ ದೇವಿಯು ತನ್ನ ರಾಜ್ಯದಲ್ಲಿ ಜೈನಮತವನ್ನು ಪ್ರೋತ್ಸಾಹಿಸಿ ಮತೀಯ ಕಲಹವನ್ನು ಪರಿಹರಿಸಿದ್ದಲ್ಲದೆ ಉಳ್ಳಾಲದಲ್ಲಿ ಲೂಟಿಯುಕ್ತ ವ್ಯಾಪಾರ ನಡೆಸುತ್ತಿದ್ದ ಪೋರ್ತುಗೀಸರನ್ನು ಧೈರ್ಯದಿಂದ ಮೂರು ಸಲ ಪ್ರತಿಭಟಿಸಿದರು. ಇವಳ ಪರಾಕ್ರಮವನ್ನು ಸಮಕಾಲೀನ ಪೋರ್ಚುಗೀಸ್ ಬರಹಗಾರರಾದ ಫ್ರಾನ್ಸಿಸ್ಕೊ ಡಿಸೋಜಾ (Francisco,D'souza) ಕುಟೋ (Couto) ಮತ್ತು ಸಾಂತೋಸ (Santos) ಬಹಳ ಮೆಚ್ಚಿದ್ದಾರೆ. ಇವರ ಅಭಿಪ್ರಾಯದಂತೆ ಅಬ್ಬಕ್ಕದೇವಿಯು ವೀರರಾಣಿ ಮತ್ತು ಅತಿಭಲದ ಕೆಚ್ಚಿನ ರಾಣಿ. ಇವಳ ಮಗಳು ಕಿರಿಯ ಅಬ್ಬಕ್ಕಳು ಕೆಳದಿ ವೆಂಕಟಪ್ಪನ ಮೈತ್ರಿಯೊಂದಿಗೆ ಪೋರ್ತುಗೀಸ್ ಮತ್ತು ಅವರ ಮಿತ್ರರನ್ನು ಹೀನಾಯವಾಗಿ ಸೋಲಿಸಿದಳು. ಇದು ಆಗಿನ ಕಾಲದ ಅತ್ಯಂತ ರೋಮಾಂಚಕಾರಿ ಘಟನೆಗಳಲ್ಲಿ ಒಂದಾಗಿತ್ತೆಂದು ಸಮಕಾಲೀನ ಇತಿಹಾಸ ದಾಖಲೆಗಳಲ್ಲಿ ಉಲ್ಲೇಖಗೊಂಡಿದೆ. ಪರ್ಶಿಯಾ ದೇಶದ ಚಕ್ರವರ್ತಿ ಷಿಯಾ ಅಬ್ಬಾಸನು ಈ ಸಂಗತಿಯನ್ನು ತಿಳಿದು ಬಹಳ ಸಂತೋಷಪಟ್ಟನು. ಮತ್ತು ಇವಳ ಕುರಿತಾಗಿ ಹೆಚ್ಚಿನ ವಿವರ ತಿಳಿದುಕೊಳ್ಳಬೇಕೆಂಬ ಬಯಕೆಯನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಈ ಕಾಲದಲ್ಲಿ (೧೬೨೩) ಬಂದ ಇಟಲಿ ಪ್ರವಾಸಿ ಪಿತ್ರೊದೆಲ್ಲಾವೆಲ್ಲ ಮತ್ತು ಪೋರ್ಚುಗೀಸ್ ಇತಿಹಾಸಕಾರ ಅಂತೊನಿಯೊ ಬೊಕೆರೊ ಈ ರಾಣಿಯ ಕುರಿತಾಗಿ ಬಹಳ ಉಪಯುಕ್ತ ಸಂಗತಿಗಳ್ನು ಸಂಗ್ರಹಿಸಿ ತಿಳಿಸಿದ್ದಾರೆ. ಕಿರಿಯ ಅಬ್ಬಕ್ಕ ದೇವಿಯು ಯುದ್ಧರಂಗದಲ್ಲಿ ಎಷ್ಟು ಆಸಕ್ತಿ ವಹಿಸಿದ್ದಳೋ ಅಷ್ಟೇ ಆಸಕ್ತಿ ಪ್ರಜಾಹಿತ ಕಾರ್ಯದಲ್ಲಿ ವಹಿಸಿದ್ದಳು. ತುಳುನಾಡಿನ ಇತಿಹಾಸದಲ್ಲಿ ಈ ಇಬ್ಬರು ಅಬ್ಬಕ್ಕದೇವಿಯರು ಧೀರರಾಣಿಯರಾಗಿ ಮೆರೆದರು. ಇದೇ ವಂಶದ ಮೂರನೇ ಅಬ್ಬಕ್ಕ ದೇವಿಯು ಜೈನಮತದೊಂದಿಗೆ ಇನ್ನಿತರ ಮತಧರ್ಮಗಳನ್ನು ಆಸಕ್ತಿಯಿಂದ ಪ್ರೋತ್ಸಾಹಿಸಿದಳು. ಇವಳ ರಾಜಧಾನಿ ಪುತ್ತಿಗೆಯಾಗಿತ್ತು. ಇಲ್ಲಿಯೇ ಆಳಿದ ನಾಲ್ಕನೇ ಅಬ್ಬಕ್ಕದೇವಿ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹವನ್ನಿತ್ತಿದ್ದಳು. ಇವಳ ಆಸ್ಥಾನದಲ್ಲಿ ಪಟ್ಟಾಭಿರಾಮನೆಂಬ ಕವಿ ಇದ್ದನು. ಇವನು ಈ ರಾಣಿಯ ಪ್ರೋತ್ಸಾಹದಿಂದ ರತ್ನಶೇಖರ ಚರಿತ್ರೆಯನ್ನು ೧೭೨೫ರಲ್ಲಿ ರಚಿಸಿದನು.

ಈ ಚೌಟ ಅಬ್ಬಕ್ಕದೇವಿಯರ ಕುರಿತಾಗಿ ಮಹಿತಿಗಳು ಹಲವಾರು ಇದ್ದರೂ ಇವುಗಳ

ಸ್ಪಷ್ಟ ಚಿತ್ರಗಳು ಇನ್ನೂ ತಿಳಿಯಬೇಕಾಗಿದೆ. ಚೌಟ ಇತಿಹಾಸದ ಹಿನ್ನೆಲೆಯಲ್ಲಿ ಈ ಅಬ್ಬಕ್ಕದೇವಿಯರ ವೈವಿಧ್ಯಮಯ ಚಟುವಟಿಕೆಗಳನ್ನು ವೈಜ್ಞಾನಿಕವಾಗಿ ತಿಳಿಸುವುದು ಈ ಪುಸ್ತಿಕೆಯ ಉದ್ದೇಶ.

ಅಧ್ಯಾಯ ೨

ಆಕರಗಳ ಪರಿಚಯ ಮತ್ತು ಅಧ್ಯಯನ

ಇತಿಹಾಸದ ನಿಖರತೆಯ ಆಕರಗಳನ್ನು ಅವಲಂಭಿಸಿದೆ. 'ಆಕರಗಳ ಕೃಪೆಯಿಂದ ಇತಿಹಾಸವಿದೆ' ಎಂದು ಒಬ್ಬ ಇತಿಹಾಸಕಾರ ಹೇಳಿದ್ದನ್ನು ಇಲ್ಲಿ ಗಮನಿಸುವ ಅವಶ್ಯಕತೆ ಇದೆ. ಭಾರತದ ಇತಿಹಾಸ ರಚನೆಯಲ್ಲಿ ಹಲವಾರು ಆಕರಗಳು ಇದ್ದರೂ,[೧] ಇವುಗಳ ಸಮಗ್ರ ಅಧ್ಯಯನವು ಇನ್ನೂ ತೃಪ್ತಿಕರವಾಗಿ ನಡೆಯಲಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ. ಇದಕ್ಕೆ ಮುಖ್ಯ ಕಾರಣ ಈ ಆಕರಗಳು ಚದುರಿ ಚದುರಿ ಹೋಗಿರುವುದು. ಇನ್ನು ಕೆಲವು ಆಕರಗಳು ನಶಿಸಿ ಹೋಗುವ ಸ್ಥಿತಿಯಲ್ಲಿವೆ. ಈ ಆಕರಗಳ ವೈಜ್ಞಾನಿಕ ಅಧ್ಯಯನವು ನಡೆದದ್ದು ಕಳೆದ ಶತಮಾನದ ಅಂತ್ಯದಲ್ಲಿ.

ಚೌಟ ಅಬ್ಬಕ್ಕ ದೇವಿಯರ ಇತಿಹಾಸವನ್ನು ತಿಳಿಸುವ ಆಕರಗಳು ವೈವಿಧ್ಯಮಯವಾಗಿದ್ದು ಹಲವಾರು ಕಡೆಗಳಲ್ಲಿ ಚದುರಿ ಹೋಗಿವೆ. ಆದರೆ ಇವುಗಳ ಸಂಗ್ರಹ, ವಿಶ್ಲೇಷಣೆ ಮತ್ತು ಅಧ್ಯಯನ ನಡೆದದ್ದು ಬಹಳ ಕಡಿಮೆ. ಉಳ್ಳಾಲ ರಾಣಿ ಅಬ್ಬಕ್ಕ ದೇವಿಯರು ಧೀರ ಮತ್ತು ಶೌರ್ಯ ರಾಣಿಯರೆಂದು ಪೋರ್ತುಗೀಸ್ ಇತಿಹಾಸಕಾರರು ನಿಖರವಾಗಿ ತಿಳಿಸಿದರೂ ಇವುಗಳ ಪರಿಚಯ ನಮಗೆ ತಿಳಿದು ಬಂದದ್ದು ಕಳೆದ ಶತಮಾನದ ಅಂತ್ಯದಲ್ಲಿ. ಆದರೂ ಇವರುಗಳ ಇತಿಹಾಸವನ್ನು ತಿಳಿಸಿದ ಇತಿಹಾಸಕಾರರು ಉಳ್ಳಾಲದಲ್ಲಿ ಆಳಿದ ಅಬ್ಬಕ್ಕದೇವಿ ಒಬ್ಬಳೇ ಮತ್ತು ಇವಳು 90 ವರ್ಷ ಪ್ರಾಯದವರೆಗೆ ಆಳಿದ್ದಳು ಎಂದು ಹೇಳಿದ್ದಾರೆ. ಇಷ್ಟಲ್ಲದೆ ಈ ರಾಣಿಯ ಕುರಿತಾದ ಹಲವಾರು ದಂತ ಕತೆಗಳನ್ನು ಸತ್ಯವೆಂದು ನಂಬಿ ಇವಳ ವಿಚಾರ ಅಸ್ಪಷ್ಟ ಅಸಂಗತ ವಿವರಗಳನ್ನು ನೀಡಿದ್ದಾರೆ.[೨] ಆದರೆ ಪೋರ್ತುಗೀಸ್

---

೧ ಇವುಗಳ ವಿಮರ್ಶೆಯನ್ನು ಮುಂದೆ ತಿಳಿಸಲಾಗಿದೆ.

೨ ಇಂತಹ ವಿದ್ವಾಂಸರಲ್ಲಿ ಪ್ರಮುಖರಾದವರು ಡಾನ್‌ವರಸ್ (Danvers) ಸ್ಟರಕ್ (Sturrock) ವಾಲಸ (Wallance) ಸಿವೆಲ್ (Sewell) ಹೆರಾಸ್ (Heras) ಮೊರೈಯಸ್ (Moraes GM) ಮತ್ತು ವಾರ್ಕಿ (C Varky) ಇವರುಗಳ ಪೋರ್ತುಗೀಸ್ ದಾಖಲೆಯಲ್ಲಿ ಹಿನ್ನಲೆಯಲ್ಲಿ ಅಬ್ಬಕ್ಕದೇವಿಯ ಚಟುವಟಿಕೆಗಳನ್ನು ತಿಳಿಸಿದ್ದಾರೆ. ಮೆಂಕೆಂಜಿಯು ಸಂಗ್ರಹಿಸಿದ ದಾಖಲೆ ಮತ್ತು ಆಗ ಲಭ್ಯವಿದ್ದ (1923 ರಲ್ಲಿ) ದಾಖಲೆಗಳ ಆಧಾರದಿಂದ ಗಣಪತಿ ರಾವ್‌ಐಗಲ್ ಈ ರಾಣಿಯ ಚಟುವಟಿಕೆಗಳನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಆದರೆ ಇವರ ಗ್ರಂಥವು ಹೆಚ್ಚಾಗಿ ಮೆಕೆಂಜಿ ಮತ್ತು ಇನ್ನಿತರರು ಸಂಗ್ರಹಿಸಿದ ದಂತಕಥೆಗಳನ್ನು ಆಧಾರವಾಗಿಟ್ಟುಕೊಂಡಿದೆ. ಆದುದರಿಂದ ಕೆಲವು ಐತಿಹಾಸಿಕ ವಿರೋಧ ಸಂಗತಿಗಲು ಇಲ್ಲಿ ನುಸುಳಿಕೊಂಡಿವೆ.

ದಾಖಲೆಗಳ ಅಧ್ಯಯನ ಮಾಡಿದಾಗ ಇಬ್ಬರು ಅಬ್ಬಕ್ಕ ದೇವಿಯರು ಆಳಿದ್ದರೆಂದು ತಿಳಿದು ಬರುತ್ತದೆ. ಆದರೆ ಕೆಲವು ಕಡೆಗಳಲ್ಲಿ ಪೋರ್ತುಗೀಸರು ತಮಗೆ ಸಂಬಂಧವಿಲ್ಲದಿದ್ದಲ್ಲಿ ಈ ರಾಣಿಯರ ಕುರಿತಾಗಿ ಅಸ್ಪಷ್ಟತೆಯನ್ನು ಪ್ರಕಟಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ರಾಣಿಯರ ನಿಕಟ ಸಂಬಂಧಿಕರ ಹೆಸರನ್ನೇ ಹೇಳಿಲ್ಲ. ಉದಾ. ಕ್ರಿ.ಶ. ೧೫೪೪–೧೫೮೪ರ ವರೆಗೆ ಆಳಿದ ಹಿರಿಯ ಅಬ್ಬಕ್ಕದೇವಿಯ ಉತ್ತರಾಧಿಕಾರಿ ರಾಜನ ಹೆಸರನ್ನೇ ಹೇಳಿಲ್ಲ. ಆದರೆ ಇವನೊಡನೆ ಇವರು ಯುದ್ಧ ಮತ್ತು ಒಪ್ಪಂದ ಮಾಡಿಕೊಂಡಿದ್ದರು. ಇದೇ ರೀತಿ ಚೌಟರಾಣಿಯರು ಮತ್ತು ಅವರ ಪಕ್ಕದಲ್ಲಿದ್ದ ಬಂಗರಾಜರ ವೈಯಕ್ತಿಕ ಸಂಬಂಧಗಳ ವಿಚಾರ ಪೋರ್ತುಗೀಸರ ದಾಖಲೆಗಳು ಅಸ್ಪಷ್ಟ ಚಿತ್ರವನ್ನೇ ನೀಡಿವೆ.

ಅಬ್ಬಕ್ಕದೇವಿಯರ ಕುರಿತಾಗಿ ಅಧ್ಯಯನ ಮಾಡುವಾಗ ಬರುವ ಇನ್ನೊಂದು ಸಮಸ್ಯೆ ದೇಶೀಯ ಆಕರಗಳ ಕೊರತೆ. ಇಷ್ಟರವರೆಗೆ ಈ ರಾಣಿಯರ ಕುರಿತಾಗಿ ತಿಳಿಸಿದ ಮಾಹಿತಿಗಳು ಕಲ್ಪಿತ ಹೇಳಿಕೆಯಲ್ಲೇ (Legendary) ಹೆಣೆದುಕೊಂಡಿವೆ. ಲಭ್ಯವಿದ್ದ ಕೆಲವು ಶಾಸನಗಳನ್ನು ಇತಿಹಾಸಕಾರರು ಗಣನೆಗೆ ತೆಗೆದುಕೊಂಡಿಲ್ಲ. ಒಟ್ಟಿನಲ್ಲಿ ಅಬ್ಬಕ್ಕ ದೇವಿಯರು ತುಳುನಾಡಿನ ಇತಿಹಾಸದಲ್ಲಿ 'ಐತಿಹ್ಯ ವೀರರಾಣಿ'ಯಾಗಿ ಮೆರೆದಿದ್ದಾರೆ.

ಆದರೂ ಅಬ್ಬಕ್ಕದೇವಿಯರ ಕುರಿತಾಗಿ ಇತ್ತೀಚೆಗೆ ಕೆಲವು ಉಪಯುಕ್ತ ಆಕರಗಳು ಸಿಕ್ಕಿವೆ. ಇವುಗಳನ್ನು ಐತಿಹಾಸಿಕ ಸ್ಮಾರಕ ಶಾಸನಗಳು, ಅಪರೂಪಕ್ಕೆ ಸಿಕ್ಕಿದ ಕಡತಗಳು, ಕೆಲವು ಸಾಹಿತ್ಯ ಕೃತಿಗಳು ಮತ್ತು ವಿದೇಶೀ ದಾಖಲೆ ಪತ್ರಗಳೆಂದು ವಿಂಗಡಿಸಲಾಗಿದೆ.

ಈ ರಾಣಿಯರ ಕುರಿತು ಅಧ್ಯಯನ ನಡೆಸುವಾಗ ವಿದೇಶಿ ಆಕರಗಳು ಹೆಚ್ಚಿನ ನೆರವು ನೀಡುತ್ತವೆ. ಇದು ಇಲ್ಲಿನ ಚರಿತ್ರೆಯ ಅಧ್ಯಯನದಲ್ಲಿ ತೋರಿ ಬರುವ ಒಂದು ವಿಲಕ್ಷಣತೆ. ಈ ದಾಖಲೆಗಳನ್ನು ಅಧ್ಯಯನ ಮಾಡುವಾಗ ತಿಳಿದು ಬರುವ ಒಂದು ಹೊಸ ಸಂಗತಿಯೇನೆಂದರೆ ಈ ರಾಣಿಯರು ಪೋರ್ತುಗೀಸರೊಡನೆ ಪತ್ರ ವ್ಯವಹಾರ ನಡೆಸಿದ್ದರು. ವಿದೇಶದಿಂದ ಬಂದ ಪತ್ರಗಳನ್ನು ತರ್ಜುಮೆ ಮಾಡಲು ದುಭಾಷಿಗಳನ್ನು ನೇಮಿಸಿಕೊಂಡಿದ್ದರು. ಇಷ್ಟಲ್ಲದೆ ಪತ್ರ ವ್ಯವಹಾರಗಳನ್ನು ಜೋಪಾನವಾಗಿಟ್ಟುಕೊಳ್ಳಲು

---

೩ ಶಂಗೇರಿ ಮಠದಲ್ಲಿ ಸಿಕ್ಕಿದ ಅಪ್ರಕಟಿತ ಕಡತ ಪ್ರೊ. ಎ. ಕೆ. ಶಾಸ್ತ್ರಿ ಶಿರಸಿ ಇವರ ಕೃಪೆಯಿಂದ ಸಿಕ್ಕಿದೆ.

೪ ಅ. ಅನುಪಮ ನಿರಂಜನ ಮತ್ತು ನಂದಾ ಡಿ. ಎಸ್. ರು ಬರೆದ ಕಾದಂಬರಿ ದಿಟ್ಟೆ (ಮೈಸೂರು ೧೯೯೫) ಯಲ್ಲಿ ಅಬ್ಬಕ್ಕ ದೇವಿಯು ಪೋರ್ತುಗೀಸರು ಮತ್ತು ಬಂಗರಾಜರುಗಳೊಂದಿಗೆ ನಡೆಸಿದ ಪತ್ರ ವ್ಯವಹಾರಗಳನ್ನು ಉಲ್ಲೇಖಿಸಿದೆ. ಪು ೩೨, ೩೫, ೭೦, ೯೨-೩, ೧೧೫ ೧೬೧-೧೬೨ ೧೬೭. ಒಂದನೇ ಪತ್ರ ಹೊರತುಪಡಿಸಿ ಇನ್ನಾವ ಪತ್ರಗಳಿಗೆ ತಾರೀಕು ವರ್ಷಗಳು ಇಲ್ಲ. ಭಾಷಾದೃಷ್ಟಿಯಿಂದ ಇವುಗಳು ಆಧುನಿಕ ಕನ್ನಡಕ್ಕೆ ಬಾಗಿವೆ. ಆದುದರಿಂದ ಇವುಗಳ ಸತ್ಯಾಸತ್ಯತೆಗಳನ್ನು ಸಂಶಯಕ್ಕೆ ಎಡೆ ಮಾಡಿಕೊಟ್ಟಿವೆ.

ಪತ್ರಾಗಾರವನ್ನು ಹೊಂದಿದ್ದರು.ಇದನ್ನು ಕಡತ ಖಾತೆಯೆಂದು ಕರೆಯುತ್ತಿದ್ದ ಉಲ್ಲೇಖ ಕ್ರಿ.ಶ. ೧೬೭೮ರ ದಾಖಲೆ ಪತ್ರದಲ್ಲಿ ಬರುತ್ತದೆ.[೩] ಆದರೆ ಈ ರಾಣಿಯರು ಬರೆದ ಯಾವ ಪತ್ರವೂ ನಮಗೆ ಇನ್ನೂ ಸಿಕ್ಕಿಲ್ಲ.[೩೦] ಈ ಪತ್ರಗಳು ಚೌಟರ ಮನೆಯಲ್ಲೋ ಗೋವೆಯ ಅಥವಾ ಲಿಸ್ಬನ್ ಪತ್ರಾಗಾರದಲ್ಲೋ ಇರಬೇಕು ಎಂದು ವ್ಯಕ್ತವಾಗುತ್ತದೆ. ಇವುಗಳನ್ನು ಪತ್ತೆ ಹಚ್ಚುವ ಕೆಲಸ ನಡೆಯಬೇಕು.

ಈ ವಿದೇಶಿ ದಾಖಲೆಗಳು ಅಬ್ಬಕ್ಕದೇವಿಯರ ಪರಾಕ್ರಮವನ್ನು ತಿಳಿಸುವುದರೊಂದಿಗೆ ಉಳ್ಳಾಲ–ಮಂಗಳೂರು ಮತ್ತು ಸಮೀಪ ಪ್ರದೇಶಗಳ ವಾಣಿಜ್ಯ ಮತ್ತು ಕೆಲವು ಸಾಮಾಜಿಕ ಧಾರ್ಮಿಕ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಆದರೆ ಇವುಗಳ ಕುರಿತು ಇತಿಹಾಸಕಾರರು ಹೆಚ್ಚಿಗೆ ಗಮನ ಕೊಡಲಿಲ್ಲ.

ಈ ಚಿಕ್ಕಗ್ರಂಥದಲ್ಲಿ ಈವರೆಗೆ ಸಿಕ್ಕಿದ ಆಕರಗಳನ್ನು ಪರಿಚಯಿಸಿ ಇವುಗಳ ಅಧ್ಯಯನದಿಂದ ಅಬ್ಬಕ್ಕದೇವಿಯರ ವಿಚಾರಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಅಬ್ಬಕ್ಕದೇವಿಯರ ಕುರಿತಾಗಿ ತಿಳಿಸುವ ಆಕರಗಳನ್ನು ಐತಿಹಾಸಿಕ ಸ್ಮಾರಕಗಳು, ಶಾಸನಗಳು, ಸಾಹಿತ್ಯ ಕೃತಿಗಳು, ವಿದೇಶೀ ಆಕರಗಳೆಂದು ವಿಶ್ಲೇಷಿಸಲಾಗಿದೆ.

ಸ್ಮಾರಕಗಳು :

ಈ ರಾಣಿಯರ ಕುರಿತಾಗಿ ಇದ್ದ ಸ್ಮಾರಕಗಳು ಬಹಳ ಕಡಿಮೆ ಆದರೂ ಇವುಗಳು ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿಕೊಡುತ್ತವೆ. ಈ ಸ್ಮಾರಕಗಳು ಉಳ್ಳಾಲ–ಸೋಮೇಶ್ವರ, ಮಂಗಳೂರು, ಮಣೇಲ, ಮೂಡಬಿದ್ರೆ ಮತ್ತು ಪುತ್ತಿಗೆಗಳಲ್ಲಿವೆ. ಉಳ್ಳಾಲ ಸೋಮೇಶ್ವರದಲ್ಲಿರುವ ಸೋಮನಾಥ ದೇವಾಲಯ ಸಂಕೀರ್ಣದಲ್ಲಿರುವ ಸ್ಮಾರಕಗಳು ಆಗಿನ ಕಾಲದ ಕೆಲವು ಸಾಂಸ್ಕೃತಿಕ ಸಂಗತಿಗಳನ್ನು ಅಪ್ರತ್ಯಕ್ಷವಾಗಿ ತಿಳಿಸುತ್ತವೆ. ಈ ದೇವಾಲಯ ಹನ್ನೊಂದನೇ ಶತಮಾನದಲ್ಲಿ ರಚಿತವಾಗಿದ್ದರೂ, ಕಿರಿಯ ಅಬ್ಬಕ್ಕದೇವಿಯ ಕಾಲದಲ್ಲಿ ಇದು ಬಹಳ ಅಂದವಾಗಿ ಇದ್ದಿತ್ತೆಂದೂ ಬಹಳ ಭಕ್ತರು ಇಲ್ಲಿ ಬರುತ್ತಿದ್ದರೆಂದೂ ದೆಲ್ಲಾವೆಲ್ಲೆಯ ವರದಿಯಿಂದ ತಿಳಿದು ಬರುತ್ತದೆ[೪].

ಈ ದೇವಾಲಯದ ಆವರಣದಲ್ಲಿರುವ ವೀರಗಲ್ಲು, ಸತಿಗಲ್ಲು ಹಾಗೂ ಇದರ ಪಕ್ಕದಲ್ಲಿರುವ ದೇವ ದೇವಿ ಮತ್ತು ದೈವಗಳ ವಿಗ್ರಹಗಳು ಅಬ್ಬಕ್ಕದೇವಿಯರ ಕಾಲದ ಕೆಲವು ಸಾಂಸ್ಕೃತಿಕ ಜೀವನಗಳ ಮಾಹಿತಿಯನ್ನು ನೀಡುತ್ತವೆ. ಉದಾಃ ಇಲ್ಲಿರುವ ವೀರಗಲ್ಲು, ಹಿರಿಯ ಅಬ್ಬಕ್ಕದೇವಿಯ ಕಾಲದ್ದಾಗಿದೆ. ಕ್ರಿ.ಶ. ೧೫೫೬ರಲ್ಲಿ ಪೋರ್ತುಗೀಸ್ ಧಾಳಿಯನ್ನು ಧೈರ್ಯದಿಂದ ಎದುರಿಸಿ ಅಸುನೀಗಿದ ನಾಯಕರ ಸ್ಮಾರಕ ಇದಾಗಿದೆ. ಇಲ್ಲಿ ಬರುವ ಮುಖ್ಯ

೪ The Travels Pietro Della Valla in india cTrg havers Ed noli Ed ward Grey (AES Madras 1991) Vol II ಪು. 303-4

ಸಂಗತಿಯೇನೆಂದರೆ ಈ ರಾಣಿಯ ಕಾಲದಲ್ಲಿ ಕೋವಿಯನ್ನು ಉಪಯೋಗಿಸುತ್ತಿದ್ದರು. ಇದರ ಪಕ್ಕದಲ್ಲಿರುವ ಸತಿಗಲ್ಲು ಆಗಿನ ಕಾಲದಲ್ಲಿ ಸತಿ ಪದ್ಧತಿ ರೂಢಿಯಲ್ಲಿತ್ತು ಎಂಬುದನ್ನು ರುಜುಪಡಿಸುತ್ತದೆ. ಈ ಎರಡು ಸ್ಮಾರಕಗಳಲ್ಲಿ ಸ್ತ್ರೀ ಮತ್ತು ಪುರುಷರ ವೇಷ–ಭೂಷಣಗಳ ಮಾಹಿತಿಗಳು ಮೂಡಿಬಂದಿವೆ. ಸೋಮನಾಥ (ಸೋಮೇಶ್ವರ) ದೇವಾಲಯದ ಎದುರು ಇರುವ ಬಲಿಕಲ್ಲು ಮತ್ತು ಇದರಲ್ಲಿರುವ ಶಿಲ್ಪಕಲಾಚಾತುರ್ಯ ಸಾಂಸ್ಕೃತಿಕ ದೃಷ್ಟಿಯಲ್ಲಿ ಗಮನಿಸುವಂಥಾದ್ದೆ. ಮುಖ್ಯವಾಗಿ ಇದರಲ್ಲಿರುವ ಸಮುದ್ರ ಕುದುರೆ ಉಳ್ಳಾಲದ ಸಾಗರೋತ್ತರ ಸಂಪರ್ಕವನ್ನು ತಿಳಿಸುವ ದ್ಯೋತಕವಾಗಿದೆ. ಈ ಸೋಮನಾಥ ದೇವಾಲಯದ ಅಂಗಣವನ್ನು ಒಳಗೊಂಡ ಗರ್ಭಗೃಹವು ಚೌಕಾಕಾರದ ಗುಡಿ. ಇದು ಶಿಲೆಯಿಂದ ನಿರ್ಮಿತವಾದದ್ದು. ಈ ಗರ್ಭಗುಡಿಯ ಆನೆಕಲ್ಲುಗಳು ಆನೆ ಮುಖದ ಮತ್ತು ಮುಂದಣ ಎರಡು ಕಾಲುಗಳ ಶಿಲ್ಪವನ್ನೊಳಗೊಂಡಿವೆ. ಇಂತಹ ಶಿಲ್ಪ ದಕ್ಷಿಣಕನ್ನಡ ಜಿಲ್ಲೆಯ ಯಾವ ದೇವಾಲಯದಲ್ಲೂ ಇಲ್ಲ.[೫] ಇದನ್ನು ಇಲ್ಲಿ ಗಮನಿಸುವ ಅವಶ್ಯಕತೆ ಇದೆ. ಇದೇ ದೇವಾಲಯದ ಹೊರಾಂಗಣ ವಾಯುವ್ಯ ದಿಕ್ಕಿನಲ್ಲಿರುವ ಪಾರ್ಥಸಾರಥಿ ಗುಡಿಯ ಹೊರ ಮೈಯಲ್ಲಿ ಕೆತ್ತಿದ ಶಿಲ್ಪಗಳು. ಆಗಿನ ಕಾಲದ ಜನಜೀವನವನ್ನು ತಿಳಿಸುತ್ತವೆ. ಇದರಲ್ಲಿರುವ ನೃತ್ಯ ಭಂಗಿಗಳು ಇಲ್ಲಿ ನೃತ್ಯಶಾಸ್ತ್ರಕ್ಕೆ ಪ್ರೋತ್ಸಾಹವಿದ್ದಿತೆಂದು ಖಚಿತಪಡಿಸುವ ಸಾಧನಗಳಾಗಿವೆ. ಈ ದೇವಾಲಯದ ಪೂರ್ವ ಭಾಗದಲ್ಲಿ ಕೆಳಗಡೆ ಸರಿ ಇದಿರಾಗಿ ಪಂಚ ದುರ್ಗಾಲಯವಿದೆ. ಇಲ್ಲಿ ಗಮನಿಸುವ ಮುಖ್ಯ ಸಂಗತಿಯೇನೆಂದರೆ ಈ ದುರ್ಗೆಯರನ್ನು ನಿರ್ದೇಶಿಸುವ ಐದು ಲಿಂಗಗಳು ಒಂದೇ ಪಾಣಿಪೀಠದಲ್ಲಿವೆ. ಉಳ್ಳಾಲದ ಚಿರುಂಬಾ ಭಗವತಿ, ರಕ್ತೇಶ್ವರಿ, ಮಲೆಯಾಳಿ ಚಾಮುಂಡಿ ದೇವಾಲಯಗಳಿಗೂ ಕಿರಿಯ ಅಬ್ಬಕ್ಕದೇವಿಗೂ ನಿಕಟ ಸಂಪರ್ಕವಿದ್ದಿತ್ತೆಂದು ದೆಲ್ಲಾವೆಲ್ಲಿಯ ವರದಿಯಲ್ಲಿ ನಮೂದಿಸಿದೆ. ಒಟ್ಟಿನಲ್ಲಿ ಮೇಲೆ ತಿಳಿಸಿದ ದೇವಾಲಯ ಸಂಕೀರ್ಣದ ಶಿಲ್ಪಗಳು ಆಗಿನ ಕಾಲದ ಧಾರ್ಮಿಕ ಚಿತ್ರಣವನ್ನು ನೀಡುತ್ತವೆ.

ಉಳ್ಳಾಲದಲ್ಲಿ ಈ ರಾಣಿಯರ ಅರಮನೆ ಮತ್ತು ಕೋಟೆಗಳಿದ್ದವು. ಆದರೆ ಇವುಗಳು ಸಂಪೂರ್ಣ ನಾಶವಾಗಿ ಅಲ್ಲಲ್ಲಿ ಇವುಗಳ ಕೆಲವು ಕುರುಹುಗಳು ನೋಡ ಸಿಗುತ್ತವೆ. ಇಲ್ಲಿ ಪ್ರಾಕ್ತನ ಅಗೆತ ನಡೆಸಿದರೆ ಇನ್ನೂ ಹೆಚ್ಚಿನ ಮಾಹಿತಿಗಳು ಸಿಗುವ ಸಾಧ್ಯತೆ ಇವೆ. ಅಳಿದುಳಿದ ಕೋಟೆಯ ಕುರುಹುಗಳು ಈ ರಾಣಿಯರ ರಕ್ಷಣಾ ಕ್ರಮವನ್ನು ಅಸ್ಪಷ್ಟವಾಗಿ ತಿಳಿಸುತ್ತವೆ.

ಮೂಡಬಿದ್ರೆ ಸಮೀಪದಲ್ಲಿರುವ ಪುತ್ತಿಗೆಯು ಚೌಟರಸರ ಮೂಲ ಸ್ಥಳ ಹಾಗೂ ಪ್ರಥಮ ರಾಜಧಾನಿ. ಇಲ್ಲಿ ಸೋಮನಾಥ ದೇವಾಲಯ ಮತ್ತು ಅರಮನೆಯ ಕುರುಹುಗಳಿವೆ.

---

೫. ಪಿ. ಗುರುರಾಜಭಟ್ಟರ "ಸೋಮನಾಥ ದೇವಾಲಯ" ಶ್ರೀ ಕ್ಷೇತ್ರ ಸೋಮನಾಥೇಶ್ವರ (ಕವಿ ಅಮ್ಮೆಂಬಳ) ಪು. ೩೬-೩೯

೬ ಡೆಲ್ಲಾ ವೆಲ್ಲೆ - ಅದೆ ಗ್ರಂಥ । ಪ್ರ 303

ಈ ಸೋಮನಾಥ ಅಬ್ಬಕ್ಕದೇವಿಯ ಕುಲದೇವತೆ[೧]. ಈ ದೇವಾಲಯದ ಶಿಲ್ಪ ರಚನೆ ವಿಜಯನಗರದ ಆರಂಭದ ಕಾಲದ್ದಾಗಿದೆ. ಇದರ ಪರಿಸರದಲ್ಲಿರುವ ದೇವ, ದೇವಿ ಮತ್ತು ದೈವಗಳನ್ನು ವೀಕ್ಷಿಸಿದಾಗ ಇವುಗಳು ಇಲ್ಲಿನ ಧಾರ್ಮಿಕ ಪದ್ಧತಿಗಳನ್ನು ತಿಳಿಸುತ್ತವೆ. ಇವುಗಳಿಗೆ ಚೌಟರಸರು ಭಕ್ತಿಪೂರ್ವಕವಾಗಿ ಮನ್ನಣೆ ಸಲ್ಲಿಸುತ್ತಿದ್ದರೆಂದು ಇಲ್ಲಿರುವ ಸ್ಮಾರಕಗಳು ಸೂಚಿಸುತ್ತವೆ. ಈ ದೇವಾಲಯದ ಆವರಣದಲ್ಲಿರುವ ರಥವನ್ನು ರಾಜಮಂಡಲವೆಂದು ಕರೆಯುತ್ತಾರೆ. ಇದರ ವೈಶಿಷ್ಟ್ಯವೆಂದರೆ ಇಲ್ಲಿ ಭೂಮಿಯಲ್ಲಿರುವ ಅನೇಕ ಪ್ರಾಣಿಗಳ ೧೧ ಚಿತ್ರಗಳ ಕೆತ್ತನೆ ಇದೆ. ಇದರಿಂದಾಗಿ ಇಲ್ಲಿಯ ಜನರಿಗೆ ಎಷ್ಟು ಪ್ರಾಣಿಗಳ ಪರಿಚಯವಿದ್ದಿತ್ತೆಂದು ತಿಳಿಯುತ್ತದೆ. ಈ ದೇವಾಲಯದ ಪೂರ್ವಕ್ಕೆ ಸುಮಾರು ಅರ್ಧಮೈಲು ದೂರದಲ್ಲಿ ನೆಲ್ಲಿಗುಡ್ಡೆಯಲ್ಲಿ ಪಂಚ ಧೂಮಾವತಿಯ ಸ್ಥಾನವಿದೆ. ಸ್ವಲ್ಪ ದೂರದಲ್ಲಿ ಸಾಸ್ತವು ಎಂಬ ಜಾಗ ಇದೆ. ಇದರ ಬಳಿಯಲ್ಲಿ ಉಮೆಗುಂಡಿ ಬ್ರಹ್ಮ ಸ್ಥಾನವಿದೆ. ಚೌಟರಸರ ಅರಮನೆಯ ಕುರುಹುಗಳು ಪರಾರಿ ಎಂಬಲ್ಲಿ ಜೋಳೆಗೆರು ಗದ್ದೆಯ ಸಮೀಪದಲ್ಲಿವೆ. ಒಟ್ಟಿನಲ್ಲಿ ಪುತ್ತಿಗೆಯಲ್ಲಿರುವ ಸ್ಮಾರಕಗಳು[೨] ಚೌಟರಸರ ಕಾಲದ ಸಾಮಾಜಿಕ ಧಾರ್ಮಿಕ ಮತ್ತು ಕಲೆಗಳ ಸ್ವರೂಪ ತಿಳಿಯುವಲ್ಲಿ ಪ್ರಮುಖ ಆಕರಗಳಾಗಿವೆ. ಚೌಟರ ಅಂತ್ಯಕಾಲದ ರಾಜಧಾನಿಯಾಗಿದ್ದ ಮೂಡಬಿದ್ರೆಯಲ್ಲಿ ಕೆಲವು ಐತಿಹಾಸಿಕ ಸ್ಮಾರಕಗಳಿವೆ. ಉಳ್ಳಾಲದಲ್ಲಿ ಅಬ್ಬಕ್ಕದೇವಿಯರು ಆಳಿಕೊಂಡಿದ್ದಾಗ ಇವರ ದಾಯಾದಿಗಳಾದ ಲೋಕಾದೇವಿ ಮತ್ತು ಅವಳ ಸಂತತಿಯವರು ಇಲ್ಲಿ ಪ್ರಭಾವಿಶಾಲಿಗಳಾಗಿದ್ದರು. ಇವರ ಒಬ್ಬ ಚೌಟರಸ–ಕ್ರಿ. ೧೬೪೩ರಲ್ಲಿ ಮೂಡಬಿದ್ರೆಯಲ್ಲಿ ಕಲಾತ್ಮಕವಾದ ಅರಮನೆಯನ್ನು ಕಟ್ಟಿದ್ದಾನೆ. ಇಲ್ಲಿರುವ ಕಲಾಕೌಶಲ್ಯಗಳು–ಅರಮನೆಯ ಜಾಲಂದರಲ್ಲಿ ಕಿಟಕಿ, ಕಂಬದ ಮೇಲಿರುವ ಪಂಚನಾರಿ ತುರಗ (ಐದು ಹೆಂಗಸರು ಹೆಣೆದು ಕೊಂಡು ಆದ ಕುದುರೆ), ನವನಾರಿ ಕುಂಜರ, (ಒಂಭತ್ತು ಮಹಿಳೆಯರು ಹೆಣೆದು ಕೊಂಡು ಆದ ಆನೆ), ಮರದ ಕೆತ್ತನೆಯ ಹುಲಿಮುಖದ ಚಾವಡಿ, ಒಳಗಿರುವ ಚತ್ತುರಸದ ಒಡ್ಡೋಲಗ ಮತ್ತು ಅಂತಃಪುರದ ಚಾವಡಿ ಮತ್ತು ಸ್ನಾನದ ಕೊಳ. ಈ ಎಲ್ಲಾ ಸ್ಮಾರಕಗಳು ಚೌಟರಸರ ಪ್ರೋತ್ಸಾಹದಿಂದ ರಚಿತವಾದವುಗಳು. ಇವುಗಳು ಇಲ್ಲಿನ ಜನಜೀವನದ ಸ್ವರೂಪಗಳನ್ನು ತಿಳಿಸುವ ದ್ಯೋತಕಗಳಾಗಿವೆ.

ಇಲ್ಲಿರುವ ತ್ರಿಭುವನ ತಿಲಕ ಚೂಡಾಮಣಿ ಬಸದಿ (ಸಾವಿರ ಕಂಬದ ಬಸದಿ)ಯಲ್ಲಿರುವ ಭೈರಾದೇವಿ ಮಂಟಪದ ಅಡಿಗಲ್ಲಿನಲ್ಲಿ ಜಿರಾಫೆ ಮತ್ತು ಚೀನಡ್ರೆಗಾನ್ ಚಿತ್ರಗಳನ್ನು ಕೆತ್ತಲಾಗಿದೆ. ಇವುಗಳು ಈ ಪ್ರದೇಶಕ್ಕೆ ಚಿನ್ನಾ ಮತ್ತು ಆಫ್ರಿಕಾದೊಂದಿಗೆ ಇರುವ ಸಂಬಂಧವನ್ನು ತಿಳಿಸುವ ಆಕರಗಳು. ಈ ಬಸದಿಯಲ್ಲಿರುವ ಚಿತ್ರಾದೇವಿ ಭೈರಾದೇವಿ

---

೨ ಯಸ್. ಯು. ಪುತ್ತಿಗೆ ಪುತ್ತಿಗೆ ಸೋಮೇಶ್ವರ ಇತಿಹಾಸ ಪುತ್ತಿಗೆ 1965 ವಿಭಾಗ ೧.

ಮಂಟಪಗಳ ಕಲ್ಲ ಕಂಬಗಳಲ್ಲಿ ವೈದಿಕ ದೇವ ದೇವಿಯರ ಚಿತ್ರಗಳಿವೆ. ಇದು ಇಲ್ಲಿನ ಧಾರ್ಮಿಕ ಸಮನ್ವಯದ ಹೆಗ್ಗುರುತಾಗಿದೆಯೆಂದು ಅಭಿಪ್ರಾಯ ಪಡಬಹುದು. [೮]

ಶಾಸನಗಳು

ಪುತ್ತಿಗೆ, ಮೂಡಬಿದ್ರೆ, ಉಳ್ಳಾಲ ಮತ್ತು ಇತರೆಡೆ ಚೌಟರಸರ ಕುರಿತಾದ ಶಾಸನಗಳು ಇವೆ. ಆದರೆ ಇವುಗಳಲ್ಲಿ ಕೆಲವೇ ಕೆಲವು ಶಾಸನಗಳ ಪಾಠಗಳು **ದಕ್ಷಿಣ ಭಾರತ ಶಾಸಕ ೭ ಸಂಚಿಕೆಯಲ್ಲಿ** ಪ್ರಕಟವಾಗಿವೆ. ಇನ್ನೂ ಕೆಲವು ಶಾಸನಗಳು ದಕ್ಷಿಣ ಭಾರತದ ಶಾಸನ ಖಾತೆಯ ವರದಿಯಲ್ಲಿ ಗುರುತಿಸಲ್ಪಟ್ಟಿವೆ. ಅಪ್ರಕಟಿತ ಶಾಸನಗಳನ್ನು ಮೂಡಬಿದ್ರೆಯ ಬಸದಿಯಲ್ಲಿ ಜೋಪಾನವಾಗಿ ಇಟ್ಟಿದ್ದಾರೆ. ಇವುಗಳನ್ನು ಕೆಲವನ್ನು ದಿ. ಗುರುರಾಜ ಭಟ್ಟ, ಡಾ. ಪಿ.ಎನ್. ನರಸಿಂಹಮೂರ್ತಿ, ದಿ. ವಸಂತಶೆಟ್ಟಿ ಮತ್ತು ಉಮಾನಾಥ ಶೆಣೈಯವರು ಪರಿಶೀಲಿಸಿ ಇವುಗಳ ಪಾಠಗಳನ್ನು ನಿಯಮಿತ ಸಂಚಿಕೆಗಳಲ್ಲಿ ಬೆಳಕು ಕಾಣಿಸಿದ್ದಾರೆ.

ಆದರೆ ಅಬ್ಬಕ್ಕ ದೇವಿಯರ ವಿಚಾರ ತಿಳಿಸುವ ಶಾಸನಗಳು ಬಹಳ ವಿರಳ. ಸಿಕ್ಕಿದ ಶಾಸನಗಳು ತಾಮ್ರ ಶಾಸನಗಳೇ. ಒಂದನೇ ಅಬ್ಬಕ್ಕದೇವಿಯು ಉಳ್ಳಾಲದಲ್ಲಿ ಆಳಿಕೊಂಡಿದ್ದಳು ಮತ್ತು ದಾಯಾದಿ ಲೋಕಾದೇವಿ ಪುತ್ತಿಗೆಯಲ್ಲಿ ಏಕಕಾಲದಲ್ಲಿ ಆಳಿಕೊಂಡಿದ್ದಳೆಂಬ ಸಂಗತಿಯು ಮೂಡಬಿದ್ರೆಯ ಗುರುಗಳ ಬಸದಿಯಲ್ಲಿದ್ದ ಒಂದು ಶಾಸನದಿಂದ ತಿಳಿಯುತ್ತದೆ. ಈ ಶಾಸನದ ಕಾಲ ಶಾ. ಶಕ ೧೪೯೩, ಕ್ರಿ. ಶ. ೧೫೭೨ ಇದರ ಮುಖ್ಯ ಉದ್ದೇಶ ಆಹಾರ ದಾನವನ್ನು ತಿಳಿಸುವುದಾದರೂ, ಇದರಲ್ಲಿ ಆ ಕಾಲದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳು ಅಡಕವಾಗಿವೆ.[೯] ಇದನ್ನು ಸಮರ್ಥಿಸುವ ದಾಖಲೆ ಮೂಡಬಿದ್ರೆ ಹೊಸಬಸ್ತಿಯಲ್ಲಿದೆ. ಇದು ಶಿಲಾಶಾಸನ ಮತ್ತು ಇದು ಹಿಂದೆ ತಿಳಿಸಿದ ಶಾಸನದ ಕಾಲದ್ದೇ ಆಗಿದೆ.[೧೦]

ಇತ್ತೀಚೆಗೆ ಧರ್ಮಸ್ಥಳ ಮಂಜೂಷ ವಸ್ತು ಸಂಗ್ರಹಾಲಯದಲ್ಲಿ ಇದ್ದ ಒಂದು ತಾಮ್ರ ಶಾಸನವು ಹಿರಿಯ ಅಬ್ಬಕ್ಕಳ ವಿಚಾರ, ಮುಖ್ಯವಾಗಿ ಇವಳ ಕಾಲ ನಿರ್ಣಯಿಸುವಲ್ಲಿ

---

೮. ಪಂಡಿತ ಕೆ. ಭುಜಬಲಶಾಸ್ತ್ರಿ ಮೂಡಬಿದಿರೆ (ಬೆಂಗಳೂರು 197) ಪುಟ ೨೦ ೨೩, ೩೩-೩೭ ಹೇಳಲಾಗಿದೆ. 1941 of A No 3 ಶಾಸನದ ಪಾಠವನ್ನ ಶ್ರೀ ಉಮನಾಥ ಶೆಣೈಯವರು ಪತ್ತೆಹಚ್ಚಿ ಕೆಲವು ಮಾಹಿತಿಗಳನ್ನು ತಿಳಿಸಿದ್ದಾರೆ. ಮಿಥಿಕ ಸೊಸೈಟಿ (ಇದನ್ನು ಮಿ.ಸೂ. ಎಂದು ಪರಿಷ್ಕರಿಸಲಾಗಿದೆ. 1965- No1-2) ೧೭೧-೨

೯ ದಕ್ಷಿಣ ಭಾರತ ಶಾಸನ ವಾರ್ಷಿಕ ವರದಿ (ಇದನ್ನು ARSIE ಎಂದು ಪರುಷ್ಕರಿಸಿ ಮುಂದೆ ಹೇಳಲಾಗಿದೆ. 1941 of No 3 ಶಾಸನದ ಪಾಠವನ್ನು ಶ್ರೀ ಉಮನಾಥ ಶೆಣೈಯವರು ಪತ್ತೆ ಹಚ್ಚಿ ಕೆಲವು ಮಾಹಿತಿಗಳನ್ನು ತಿಳಿಸಿದ್ದಾರೆ. ಮಿಥಿಕ ಸೊಸೈಟಿ (ಇದನ್ನು ಮಿ. ಸೂ. ಎಂದು ಪರಿಷ್ಕರಿಸಲಾಗಿದೆ. 1965- No 1 -2) ೧೭೧೨

೧೦ ದಕ್ಷಿಣ ಭಾರತ ಶಾಸನ ಸಂಪುಟ (ಇದನ್ನು ದಭಾಶಾ VII No. ೨೧೦

ಮಹತ್ವದ ಸ್ಥಾನವನ್ನು ಪಡೆದಿದೆ. ಈ ಶಾಸನವು ಶಕ ೧೪೬೬ ಕ್ರಿ. ಶ. ೧೫೭೪ಳ ವರ್ಷದ್ದು. ಅಬ್ಬಕ್ಕ ದೇವಿಯು ಜಾತಿ ಕಲಹಗಳನ್ನು ತೀರ್ಮಾನಿಸಿದ ಕ್ರಮ, ಇವಳ ಸಮಕಾಲೀನ ಅಕ್ಕಪಕ್ಕದ ರಾಜರುಗಳು, ಇವಳೊಂದಿಗೆ ಈ ಮತೀಯ ಕಲಹವನ್ನು ತೀರ್ಮಾನಿಸಲು ಸಹಕರಿಸಿದ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳ ಹೆಸರುಗಳನ್ನು ಈ ಶಾಸನದಲ್ಲಿ ಹೇಳಿದೆ. ಒಟ್ಟಿನಲ್ಲಿ ಈ ಶಾಸನವು ಈ ರಾಣಿಯು ಅಕ್ಕಪಕ್ಕದ ರಾಜರುಗಳೊಂದಿಗೆ ಇಟ್ಟುಕೊಂಡ ಸಂಪರ್ಕ ನೀತಿ ಮತ್ತು ಧಾರ್ಮಿಕ ಸ್ಥಿತಿಗಳನ್ನು ತಿಳಿಯುವಲ್ಲಿ ಅತ್ಯಂತ ಉಪಕಾರಿಯಾಗಿದೆ. ಈ ಶಾಸನದ ಆಧಾರದಿಂದ ಇವಳು ೧೫೭೪ ರ ವರೆಗೆ ಜೀವಿಸಿದ್ದಳೆಂದು ಖಚಿತವಾಗಿ ಹೇಳಬಹುದು. ೧೧ ಇಷ್ಟಲ್ಲದೆ ಅಂದಿನ ಕಾಲದ ನ್ಯಾಯ ತೀರ್ಮಾನದ ವ್ಯವಸ್ಥೆಯ ನಿರೂಪಣೆಗೆ ಈ ಶಾಸನವು ಉತ್ತಮ ದಾಖಲೆಯಾಗಿದೆ. ಮುಮ್ಮಡಿ ಅಬ್ಬಕ್ಕದೇವಿಯು ಮೂಡಬಿದ್ರೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ಜೈನಧಾಮಿಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿದ್ದಳೆಂಬುದನ್ನು ತಿಳಿಸುವ ಶಕ ೧೫೪೪ ಕ್ರಿ.ಶ. ೧೬೭೭ರ ತಾಮ್ರ ಶಾಸನವು ಮೂಡಬಿದ್ರೆಯಲ್ಲಿ ಸಿಕ್ಕಿದೆ. ಈ ಶಾಸನವು ಅಂದಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ತಿಳಿಸುತ್ತದೆ. ೧೨

ಕಡತ ೧೩

ಈ ಅಬ್ಬಕ್ಕದೇವಿಯ ಆಳ್ವಿಕೆ ಕ್ರಿ.ಶ. ೧೬೦೧ ರಲ್ಲಿ ಅಂತ್ಯವಾಯಿತೆಂದು ಇವಳ ನಂತರ ಇವಳ ಮಗಳು 'ಚೆಂನಂಮ' ಪಟ್ಟಕ್ಕೆ ಬಂದಳೆಂಬುದನ್ನು ಶೃಂಗೇರಿ ಮಠದಲ್ಲಿರುವ ಅಪ್ರಕಟಿತ ಕಡತದಲ್ಲಿ ನಮೂದಿಸಿದೆ. ಆಗಿನ ಕಾಲದ ಧಾರ್ಮಿಕ ನಂಬಿಕೆ, ಕೃಷಿ ಪದ್ಧತಿ, ರೂಢಿಯಲ್ಲಿರುವ ಅಳತೆ ಮಾನ ಮತ್ತು ಇವುಗಳನ್ನು ದಾಖಲಿಸುವ ಪದ್ಧತಿಗಳ ವಿಚಾರ ಅರಿತುಕೊಳ್ಳಲು ಈ ಕಡತ ಅತ್ಯಂತ ಉಪಯುಕ್ತವಾಗಿದೆ. ಇಷ್ಟಲ್ಲದೆ ಪುತ್ತಿಗೆ, ಮೂಡಬಿದ್ರೆ, ಉಳ್ಳಾಲದಲ್ಲಿ ಚರಿತ್ರೆಯ ಅಂಶಗಳು ಕೆಲವು ಶಾಸನಗಳಲ್ಲಿವೆ. ಈ ಶಾಸನಗಳು ಅಲ್ಲಲ್ಲಿ ಅಂದಿನ ಭಾಷೆ ಮತ್ತು ಸಾಹಿತ್ಯಗಳ ಮಾಹಿತಿಗಳನ್ನು ಕೊಟ್ಟಿವೆ.

ಸಾಹಿತ್ಯ ಕೃತಿಗಳು

ಅಬ್ಬಕ್ಕ ದೇವಿಯರ ವಿಚಾರ ತಿಳಿಸುವ ಸಾಹಿತ್ಯ ಕೃತಿಗಳು ಬಹಳ ವಿರಳವಾಗಿದ್ದರೂ

---

೧೧ ಈ ಶಾಸನವು ಎಸ್. ಡಿ. ಶೆಟ್ಟಿ ಉಜಿರೆ ಮತ್ತು ಪಿ. ಶ್ರೀನಿವಾಸ ಭಟ್ಟ ಕಟೀಲ್ ಇವರ ಸಹಕಾರದಿಂದ ದೊರಕಿದೆ.

೧೨ ARSIE 1941 Ap No. A 13 ಇದರ ಪಾಠ ಮೂಡಬಿದ್ರೆ ಶ್ರೀ ದೇವ ಕುಮಾರ ಜೈನರಿಂದ ಸಿಕ್ಕಿದೆ.

೧೩ ಕಪ್ಪು ಬಟ್ಟೆಯ ಮೇಲೆ ಬಳಪದಿಂದ ಬರೆದ ಬರಹಕ್ಕೆ ಕಡತವೆನ್ನುತ್ತಾರೆ. ಇಂತಹ ಕಡತಗಳು ಶೃಂಗೇರಿ ಮಠ, ಮಂಜೇಶ್ವರ ದೇವಸ್ಥಾನ ಮತ್ತು ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿವೆ.

ಇವರ ಕಾಲದ ರಾಜಕೀಯ ಮತ್ತು ಧಾರ್ಮಿಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುವ ಕನ್ನಡ ಭಾಷೆಯ ಕೆಲವು ಕೃತಿಗಳು ಇವೆ. ಇವುಗಳಲ್ಲಿ ಮುಖ್ಯವಾದವು ಚದುರ ಚಂದ್ರಮನು ರಚಿಸಿದ **ಕಾರ್ಕಳ ಗೋಮಟೇಶ್ವರ ಚರಿತ್ರೆ** (೧೬೪೬) ಮತ್ತು ಲಿಂಗಣ್ಣ ಕವಿ ಬರೆದ ಕೆಳದಿ ನೃಪ ವಿಜಯ (೧೭೬೮) ಮೊದಲನೆಯ ಸಾಹಿತ್ಯ ಕೃತಿಯಲ್ಲಿ ಚೌಟರಸರು ಕಾರ್ಕಳ ಗೊಮ್ಮಟೇಶ್ವರನ ಅಭಿಷೇಕಕ್ಕೆ ಸಹಕರಿಸಿದ್ದು ತಿಳಿಯುತ್ತದೆ.[೧೪] ಎರಡನೆಯ ಕಾವ್ಯದಲ್ಲಿ ಚೌಟರಸ ಮತ್ತು ಕೆಳದಿ ನಾಯಕರ ರಾಜಕೀಯ ಸಂಬಂಧವನ್ನು ಅಲ್ಲಲ್ಲಿ ಹೇಳಿದೆ. ಇಷ್ಟಲ್ಲದೆ ಮೂಡಬಿದ್ರೆ ಮತ್ತು ಉಳ್ಳಾಲದಲ್ಲಿ ಕೆಳದಿ ನಾಯಕರು ನಡೆಸಿದ ಸೈನಿಕ ವ್ಯವಸ್ಥೆಯ ಮಾಹಿತಿಗಳ ಸ್ವಲ್ಪ ವಿವರಗಳೂ ಇದೇ ಕಾವ್ಯದಿಂದ ತಿಳಿದು ಬರುತ್ತದೆ. ೧೫ ಆದರೆ ಪಟ್ಟಾಭಿರಾಮನು ೧೬ ಬರೆದ **ರತ್ನ ಶೇಖರ ಚರಿತ್ರೆ**ಯಲ್ಲಿ ನಾಲ್ಕನೇ ಅಬ್ಬಕ್ಕದೇವಿಯ ವಿಚಾರ ಸ್ವಲ್ಪ ಮಾಹಿತಿ ಇದ್ದು ಇವಳು ಸಾಹಿತ್ಯಕ್ಕೆ ಪ್ರೋತ್ಸಾಹಿಸಿದಳೆಂದು ಹೇಳಿದ್ದು ಗಮನಾರ್ಹ.

ವಿದೇಶಿ ಆಕರಗಳು

ಈ ಹಿಂದೆ ತಿಳಿಸಿದಂತೆ ಉಳ್ಳಾಲ ಚೌಟ ಅಬ್ಬಕ್ಕ ದೇವಿಯರ ವಿಚಾರ ಅಧ್ಯಯನ ಮಾಡುವಲ್ಲಿ ವಿದೇಶೀ ಆಕರಗಳ ಪ್ರಾಮುಖ್ಯ ಎದ್ದು ತೋರುತ್ತದೆ. ಇದಕ್ಕೆ ಕಾರಣ ಈ ರಾಣಿಯರ ಆಳ್ವಿಕೆಯ ಅವಧಿಗಳಲ್ಲಿ (೧೫೫೪-೧೬೪೦) ಪೋರ್ಚುಗೀಸರು ಕನ್ನಡ ಕರಾವಳಿಯಲ್ಲಿ ವಾಣಿಜ್ಯ ಮತ್ತು ರಾಜಕೀಯ ಶಕ್ತಿಗಳಾಗಿದ್ದರು. ವ್ಯಾಪಾರನಿರತರಾದ ಪೋರ್ತುಗೀಸರು ಅಬ್ಬಕ್ಕದೇವಿಯರ ಕೇಂದ್ರ ಸ್ಥಳ ಸಮುದ್ರಕಿನಾರೆಯಲ್ಲಿರುವ ಉಳ್ಳಾಲದೊಡನೆ ವ್ಯಾಪಾರ ಸಂಪರ್ಕಕ್ಕೆ ಬಂದರು. ಇಷ್ಟಲ್ಲದೆ ಡಚ್ಚರು ಇಟೆಲಿಯನ್‌ರು ಮತ್ತು ಫ್ರೆಂಚರು ಒಂದಲ್ಲ ಒಂದು ರೀತಿಯಲ್ಲಿ ಉಳ್ಳಾಲದೊಡನೆ ಸಂಪರ್ಕಕ್ಕೆ ಬಂದರು. ಈ ವಿದೇಶೀಯರಲ್ಲಿ ಅಧಿಕಾರಿಗಳು, ನುರಿತ ಬರಹಗಾರರು ಮತ್ತು ಪ್ರವಾಸಿಗರು ಇದ್ದರು. ಇವರು ಅಬ್ಬಕ್ಕದೇವಿಯರ ಕುರಿತಾಗಿ ಅತ್ಯಂತ ಕುತೂಹಲಕಾರ ಸಂಗತಿಗಳನ್ನು ತಿಳಿಸಿದ್ದಾರೆ. ಹೆಚ್ಚಿನ ವಿದೇಶಿಯರ ಬರಹಗಳು ಸಮಕಾಲೀನವಾಗಿದ್ದುದರಿಂದ ಇವುಗಳನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳುವ ಅವಶ್ಯಕತೆ ಇದೆ. ಇನ್ನೊಂದು ಸಂಗತಿ, ಈ ವಿದೇಶೀ ದಾಖಲೆಗಳಲ್ಲಿ ತಿಳಿದು ಬರುವ ಸಂಗತಿ, ನಡೆದ ಘಟನೆಗಳನ್ನು ಕಾಲಾನುಕ್ರಮ ಪಟ್ಟಿಗಳ ಆಧಾರದಲ್ಲಿ ಬರೆದಿಟ್ಟಿದ್ದು, ಇದು ವೈಜ್ಞಾನಿಕ ಇತಿಹಾಸ ಅಧ್ಯಯನಕ್ಕೆ ಇರಬೇಕಾದ ಉತ್ತಮ ಯೋಗ್ಯತೆ.

---

೧೪ ಚಂದ್ರಮ ಕಾರ್ಕಳ ಗೋಮಟೇಶ್ವರ ಚರಿತೆ (ಸಂ ಚಿ ಚಂದ್ರಶೇಖರ ಮದ್ರಾಸ) 1953 ಪದ್ಯ ೭೮ ಪು ೧೨೬

೧೫ ಕೆಳದಿನೃಪ ವಿಜಯಂ (ಕೆ ನ ಪ ಎಂದು ಪರಿಷ್ಕರಿಸಲಾಗಿದೆ) ಆಶ್ವಾಸ ೫ ಪು ೭೧ ಪು ೧೧೨

೧೬ ಆರ್. ನರಸಿಂಹಾಚಾರ್ಯ ಕರ್ನಾಟಕ ಕವಿ ಚರಿತ್ರೆ (ಮೂರನೇ ಭಾಗ1 ಬೆಂಗಳೂರು 1973 ಪು ೨೨- ೨೬

ಈ ವಿದೇಶೀ ಆಕರಗಳನ್ನು ಪತ್ರ ವ್ಯವಹಾರಗಳು, ಸಮಕಾಲೀನ ಇತಿಹಾಸಕಾರರ ಬರಹಗಳು ಮತ್ತು ವಿದೇಶೀ ಪ್ರವಾಸಿಗರ ವರದಿಗಳು ಎಂದು ವಿಂಗಡಿಸಬಹುದು. ವಿದೇಶೀಯ ಪತ್ರ ವ್ಯವಹಾರಗಳು ಹೆಚ್ಚಾಗಿ ಪೋರ್ತುಗೀಸ್ ಭಾಷೆಯಲ್ಲಿವೆ. ಇವುಗಳು ಹೆಚ್ಚಾಗಿ ಗೋವೆಯ ವೈಸ್‌ರಾಯಿಗಳು ತಮ್ಮ ಅರಸ ಸ್ಪೈನಿನ ರಾಜರುಗಳೊಂದಿಗೆ ನಡೆಸಿದ ಪತ್ರ ವ್ಯವಹಾರಗಳು, ಇವುಗಳಿಗೆ ರಾಜರುಗಳು ನೀಡಿದ ಉತ್ತರ, ಪೋರ್ಚುಗೀಸ್ ಅಧಿಕಾರಿಗಳೊಡನೆ ಅಬ್ಬಕ್ಕ ದೇವಿಯರು ನಡೆಸಿದ ಪತ್ರ ವ್ಯವಹಾರಗಳು ಮತ್ತು ಪೋರ್ಚುಗೀಸ್ ಅಧಿಕಾರಿಗಲು ಈ ರಾಣಿಯರೊಂದಿಗೆ ನಡೆಸಿದ ಪತ್ರ ವ್ಯವಹಾರಗಳು ಇತ್ಯಾದಿಗಳನ್ನು ಒಳಗೊಂಡಿವೆ. ಈ ದಾಖಲೆ ಪತ್ರಗಳು ಹೆಚ್ಚಾಗಿ ಅಪ್ರಕಟಿತವಾಗಿದ್ದು ಇಂತಹವುಗಳಲ್ಲಿ ಕೆಲವು ಪತ್ರಗಳು ಗೋವಾ ಪತ್ರಾಗಾರದಲ್ಲಿವೆ. ಇವುಗಳನ್ನು ಕೆಲವನ್ನು ಕೆಲವು ವಿದ್ವಾಂಸರು ಮುಖ್ಯವಾಗಿ ಡಾ ಕುನ್ಹಾ (Da cunha), ಡಾನವರಸ್ (Danvers), ವೈಟವೆ (whiteway), ಹೆರಾಸ ಆಂಗ್ಲ ಭಾಷೆಗೆ ಭಾಷಾಂತರಿಸಿದ್ದಾರೆ[೧೭]. ಇವುಗಳ ಹಿನ್ನೆಲೆಯಲ್ಲಿ ಈ ವಿದ್ವಾಂಸರುಗಳು ಅಬ್ಬಕ್ಕ ದೇವಿಯ ಕುರಿತಾಗಿ ಕೆಲವು ಸಂಗತಿಗಳನ್ನು ತಿಳಿಸಿದ್ದಾರೆ. ಕನ್ನಡ ಕರಾವಳಿಯ ನಿಕಟ ಸಂಪರ್ಕವನ್ನು ಹೊಂದಿದ್ದ ಜಿ.ಎಂ. ಮೊರೈಯಸ್[೧೮] ಪೋರ್ತುಗೀಸ್ ಕೆಲವು ದಾಖಲೆಗಳನ್ನು ಅಧ್ಯಯನ ಮಾಡಿ ಅಬ್ಬಕ್ಕ ದೇವಿಯ ಕುರಿತಾಗಿ ಕೆಲವು ಸಂಗತಿಗಳನ್ನು ತಿಳಿಸಿದ್ದಾರೆ. ಈ ರಾಣಿಯರನ್ನು ಉಲ್ಲೇಖಿಸುವ ಕೆಲವು ದಾಖಲೆಗಳು ಡೊಕ್ಯುಮೆಂಟೊಸ್ ರೆಮಿಟೆ ಡೊಸ್ (Documentos Remittados Da India) ದಲ್ಲೂ ಮತ್ತು ಅರ್ಕಿವೊ ಪೋರ್ತುಗೀಸ್ ಒರಿಯಂಟಲ್ ಸಂಚಿಕೆಯಲ್ಲೂ ಇವೆ. ಇವುಗಳಲ್ಲಿ ಮೊದಲನೆಯದನ್ನು ಪೋರ್ತುಗೀಸ್ ರಾಯಲ್ ಅಕಾಡೆಮಿ ಮತ್ತು ಕುನ್ಹಾರಿವಾರ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ದಾಖಲೆಗಳಲ್ಲಿ ಕೆಲವು ಅಬ್ಬಕ್ಕ ದೇವಿಯರು ಪೋರ್ತುಗೀಸರೊಡನೆ ವಾಣಿಜ್ಯ ಮತ್ತು ರಾಜಕೀಯ ಸಂಪರ್ಕ ಹೊಂದಿದ ಮಾಹಿತಿಗಳಿವೆ. ಇವುಗಳನ್ನು ಆಧರಿಸಿ ದಕ್ಷಿಣ ಕನ್ನಡ ಜಿಲ್ಲೆಯವರೇ ಆದ ದಿ| ಬಿ.ಎಸ್. ಶಾಸ್ತ್ರಿಯವರು ಈ ರಾಣಿಯರ ಕುರಿತಾಗಿ

---

೧೭ Da Cunha, The Portuguise in South Kanara "Journal of Bombay Branch of the Royal Asiatic society" XIX (Bombay 1895-97 pp 249-62)

Danvers F. C. The Portuguese in india Vol I II London 1898). Henry Heras. Aravidu Dynasty of Vijayananda Madras 1927 Patna.

Heras, "The expansio Wars of Venkatappa Nayaka of Ikkeri " Proceedings of Indian Historical Records Commision XI. PP 108-113 whiteway R. S. The Rise of the Portuguese Power in India Reprint 1979 Patna.

೧೮ Magalore-A Historical Sketch (Mangalore 1927 Second Ed 1991 Delhi pp) 5-14

ವಿಮರ್ಶಾತ್ಮಕ ಅಧ್ಯಯನ[೧೯] ನಡೆಸಿದ್ದಾರೆ. ಈ ದಾಖಲೆಗಳು ಈವರೆಗೆ ತಿಳಿಯದಿದ್ದ ಕೆಲವು ಸಂಗತಿಗಳನ್ನು ಬೆಳಕಿಗೆ ತಂದಿವೆ. ಮುಖ್ಯವಾಗಿ ಕುನ್ಹಾರಿವಾರ ಸಂಪಾದಿಸಿದ ಆರ್ಕಿವೊ ಪೋರ್ತುಗೀಸ ಒರಿಯಂಟಲಿನ ಒಂದು ದಾಖಲೆ ಕ್ರಿ. ಶಕ ೨೦ ೧೫೪೮ ರಲ್ಲಿ ಉಳ್ಳಾಲದಲ್ಲಿ ರಾಜನು ಆಳುತ್ತಿದ್ದನೆಂದು ಉಲ್ಲೇಖಿಸಿ, ಇವನು ಬಂಗರಾಜನೊಡನೆ ಘರ್ಷಣೆಗೆ ಬಂದನೆಂದು ತಿಳಿಸಿದ್ದು ಅಬ್ಬಕ್ಕ ದೇವಿಯರ ವಂಶಾವಳಿಯ ಅಧ್ಯಯನದಲ್ಲಿ ಗಮನಿಸಬೇಕಾದದ್ದು. ಡೊಕ್ಯುಮೆಂಟೊಸ (Documentos)ನಲ್ಲಿರುವ ಕೆಲವು ದಾಖಲೆಗಳು ಅಬ್ಬಕ್ಕ ದೇವಿ, ಬಂಗರಾಜ ಮತ್ತು ಪೋರ್ತುಗೀಸರೊಳಗಾದ ಯುದ್ಧದ ಮಾಹಿತಿಗಳನ್ನು ಕಾಲಾನುಕ್ರಮ ಪಟ್ಟಿಯಂತೆ ಹೇಳಿವೆ. ಈ ದಾಖಲೆಗಳ ಅಧ್ಯಯನವು ಅಬ್ಬಕ್ಕದೇವಿಯರ ವಿಚಾರ ತಿಳಿಯಲು ಉಪಯುಕ್ತವಾಗಿದೆ. ಈ ಇಬ್ಬರು ಅಬ್ಬಕ್ಕದೇವಿಯರ ರಾಜಕೀಯ ಚಟುವಟಿಕೆಗಳನ್ನು ತಿಳಿಸುವ ದಾಖಲೆಗಳು ಪೋರ್ತುಗೀಸ ಪತ್ರಾಗಾರದಲ್ಲಿವೆ (ಲಿಸ್ಬನ್). ಕಿರಿಯ ಅಬ್ಬಕ್ಕದೇವಿ ಮತ್ತು ಪೋರ್ತುಗೀಸರ ರಾಜಕೀಯ ಮತ್ತು ವಾಣಿಜ್ಯ ವ್ಯವಹಾರಗಳ ಕುರಿತಾಗಿ ತಿಳಿಸುವ ಪೋರ್ತುಗೀಸ್ ಭಾಷೆಯ ಕೆಲವು ದಾಖಲೆಗಳನ್ನು ಪಿಸ್ಸುಲೇನಖರ (Pissurlencar) ಸಂಪಾದಿಸಿದ್ದಾರೆ. ಇದರ ಶಿರೋನಾಮೆ ಅಸ್ಸೆಂಟೋಸ್ (Assentos do consello do Estado). ಈ ಎಲ್ಲಾ ಪೋರ್ತುಗೀಸ್ ಭಾಷೆಯ ದಾಖಲೆಗಳು ದಿನಾಂಕ, ಮಾಸಾಂಕ ಮತ್ತು ವರ್ಷಾಂಕಗಳನ್ನು ನಮೂದಿಸಿ ಬರೆಯಲ್ಪಟ್ಟಿವೆ.

ದಾಖಲೆಗಳಲ್ಲದೆ ಸಮಕಾಲೀನ ಕೆಲವು ಪೋರ್ತುಗೀಸ್ ಇತಿಹಾಸಕಾರರು ಅಬ್ಬಕ್ಕದೇವಿಯರ ಕುರಿತಾಗಿ ತಮ್ಮ ಗ್ರಂಥದಲ್ಲಿ ನಿಷ್ಪಕ್ಷಪಾತ ವರದಿಗಳನ್ನು ನೀಡಿದ್ದಾರೆ. ಇಂತಹವರಲ್ಲಿ ಪ್ರಮುಖರಾದವರು ಫ್ರಾನ್ಸಿಸ್ಕೊ ಡಿ'ಸೋಜಾ (Francisco D`Souza) ಕುಟೊ (Couto Diogo) ಮತ್ತು ಅಂತೋನಿಯೊ ಬೊಕೆರೊ (Anotonio Bocarro) ಫ್ರಾನ್ಸಿಸ್ಕೊ ಡಿ'ಸೋಜಾರ ಗ್ರಂಥ ಒರಿಯಂಟಲ್ ಕಾಂಕ್ವೆಸ್ಟೊ (Oriental Conquistado). ದಲ್ಲಿ ಕ್ರಿ. ಶ. ೧೫೭೭ರಲ್ಲಿ ಹಿರಿಯ ಅಬ್ಬಕ್ಕ ದೇವಿ ಮತ್ತು ಪೋರ್ಚುಗೀಸರೊಳಗಾದ ಯುದ್ಧ ಉಳ್ಳಾಲದ

---

೧೯. The Portuguese in Kanaar 1498-1763 ಅಪ್ರಕಟಿತ Ph. D ಪ್ರಬಂಧ ಬೊಂಬಾಯಿ ವಿಶ್ವವಿದ್ಯಾಲಯ 1969. ಕೆಳದಿಯ ಅರಸರೂ ಹಾಗೂ ಪೋರ್ತುಗೀಸರೂ (ಧಾರಾವಾಡ 1972 Studies Indo Portuguese History (ಬೆಂಗಳೂರು 1961 ಈ ಪುಸ್ತಿಕೆಯಲ್ಲಿ ತಿಳಿಸಿದ ಪೋರ್ತುಗೀಸ್ ದಾಖಲೆಗಳು ಮುಖ್ಯವಾಗಿ ಡಾ. ಶಾಸ್ತ್ರಿಯವರ ಬರಹಗಳನ್ನು ಅವಲಂಬಿಸಿವೆ.)

೨೦ Archivo Portuguese Oriental III P224

ವರ್ಣನೆ ಮತ್ತು ಇದನ್ನು ಪೋರ್ಚುಗೀಸರು ಮುತ್ತಿಗೆ ಹಾಕಿದ ವಿವರಗಳನೆಲ್ಲಾ ಒಳಗೊಂಡಿವೆ. ಕುಟೊ ಕ್ರಿ. ಶ. ೧೫೫೭ ರಲ್ಲಿ ಭಾರತಕ್ಕೆ ಬಂದು, ೧೫೯೫ ಬಂದು, ೧೫೯೫ರಲ್ಲಿ ಗೋವಾ ಪತ್ರಗಾರ ಖಾತೆಯ ಪ್ರಥಮ ನಿರ್ದೇಶಕರಾಗಿ ಕ್ರಿ. ಶ. ೧೬೧೬ರಲ್ಲಿ ನಿಧನಹೊಂದಿದ. ಇವನು ನಿಷ್ಠಾವಂತ ಇತಿಹಾಸಕಾರ. ಪೊರ್ತುಗೀಸರು ಭಾರತದಲ್ಲಿ ನಡೆಸಿದ ಚಟುವಟಿಕೆಗಳನ್ನು ನಿಷ್ಪಕ್ಷಪಾತವಾಗಿ ಸ್ಪಷ್ಟವಾಗಿ ತಿಳಿಸಿದ್ದಾನೆ. ಇವನ ಗ್ರಂಥವಾದ ಡಿ ಕೆದಾ ಡಾ. ಏಸ್ಯ(Decada Da Asia - 13 Valumes)ವು ಹಿರಿಯ ಅಬ್ಬಕ್ಕ ಮತ್ತು ಕಿರಿಯ ಅಬ್ಬಕ್ಕಳ ಮತ್ತು ಪೋರ್ತುಗೀಸರ ಸಂಬಂಧಗಳ (೧೯೦೦ರ ವರೆಗೆ) ವಿವರಗಳನ್ನು ಒಳಗೊಂಡಿದೆ. ಇಲ್ಲಿ ತಿಳಿಸಿದ ವಿಷಯಗಳು ಆಧಾರಯುಕ್ತವಾಗಿವೆ.

ಅಂತೋನಿಯೋ ಬೊಕೊರೊ ಕಿರಿಯ ಅಬ್ಬಕ್ಕದೇವಿಯ ಸಮಕಾಲೀನ ಕ್ರಿ. ಶ. ೧೯೧೫ರಲ್ಲಿ ಇವನು ಭಾರತಕ್ಕೆ ಬಂದು ಹದಿಮೂರು ವರ್ಷ ಪೋರ್ತುಗೀಸ್ ಸೈನ್ಯದಲ್ಲಿ ಕೆಲಸ ಮಾಡಿ ೧೯೩೧ರಲ್ಲಿ ಗೋವಾ ಪತ್ರಾಗಾರ ಇಲಾಖೆಯ ಮುಖ್ಯಸ್ಥನಾಗಿ ೧೯೪೩ರ ವರೆಗೆ ಸೇವೆ ಸಲ್ಲಿಸಿದ್ದಾನೆ. ಇವನು ತನ್ನ ಅಧಿಕಾರದ ಅವಧಿಯಲ್ಲಿ ಕ್ರಿ. ಶ.೧೯೧೨-೧೯೧೭ರ ವರೆಗಿನ ಪೋರ್ತುಗೀಸ್ ಚಟುವಟಿಕೆ ಕುರಿತಾಗಿ ವೈಜ್ಞಾನಿಕ ರೀತಿಯ ಒಂದು ಇತಿಹಾಸ ಗ್ರಂಥವನ್ನು ಬರೆದನು. ಈ ಗ್ರಂಥದ ಶೀರ್ಷಿಕೆ ಡಿ ಕೆಡಾ 13 ಡಾ ಹಿಸ್ಟೋರಿಯಾ ಡಾ ಇಂಡಿಯಾ ಇದು ಎರಡು ಸಂಚಿಕೆಯಲ್ಲಿದೆ. (Decada 13 Da Historia Da India in two Volumes). ಈ ಗ್ರಂಥದಲ್ಲಿ ಕಿರಿಯ ಅಬ್ಬಕ್ಕ ದೇವಿ, ಬಂಗರಾಜ, ಕೆಳದಿ ವೆಂಕಟಪ್ಪ ನಾಯಕ ಮತ್ತು ಪೋರ್ತುಗೀಸರ ರಾಜಕೀಯ ಮತ್ತು ಮಿಲಿಟರಿ ಚಟುವಟಿಕೆಗಳ ವಿವರಗಳು ಇವೆ. ಈ ರಾಣಿ ಮತ್ತು ಕೆಳದಿ ವೆಂಕಟಪ್ಪ ನಾಯಕರ ಸೈನ್ಯಗಳು ಪೋರ್ತುಗೀಸರನ್ನು ಮತ್ತು ಬಂಗರಾಜರನ್ನು ಧೈರ್ಯವಾಗಿ ಎದುರಿಸಿ ಹೀನಾಯವಾಗಿ ಸೋಲಿಸಿದ್ದು ಮತ್ತು ಈ ರಾಣಿಯ ಸೈನಿಕರ ರಾಜಕೀಯ ವ್ಯವಹಾರಗಳ ಚಾತುರ್ಯಗಳ ವಿವರಗಳು ಇದೇ ಗ್ರಂಥದಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ಮೇಲೆ ತಿಳಿಸಿದ ಇತಿಹಾಸಕಾರರ ಗ್ರಂಥಗಳು ಅಬ್ಬಕ್ಕದೇವಿಯರ ಚಟುವಟಿಕೆಗಳನ್ನು ತಿಳಿಯಲು ಉತ್ತಮ ಆಕರಗಳಾಗಿವೆ[೨೧].

ಇನ್ನೊಬ್ಬ ಪೋರ್ತುಗೀಸರ ಇತಿಹಾಸಕಾರ ಸೋಜಾ ಪೆರಿಯಾ (Souza Faria) ತನ್ನ ಗ್ರಂಥವಾದ ಏಸ್ಯಾ ಪೊರ್ತುಗೀಸ್ (Asia Portuguiso)ದಲ್ಲಿ ಉಳ್ಳಾಲದ ಅಬ್ಬಕ್ಕದೇವಿಯರು

---

೨೧ ಹೆಚ್ಚಿನ ವಿವರ ನೋಡಿ : ಮೊರೈಯಿಸ್-ಅದೇ ಗ್ರಂಥ ಪು 814 ಬಿ. ಎಸ್ ಶಾಸ್ತ್ರಿ - The Portuguese in Kanara - Studies in Indo-Portugues History ಪುಟ ೨೭-೩೭ Portuguese Sources on the History of Karnataka - ಮಿಸ್ತ್ರೊ -ಜನವರಿ Dec. 1981 ಪುಟ ೫೨-೫೬

ಪೋರ್ತುಗೀಸರ ದುಂಡಾವೃತ್ತಿಯ (Predatory) ವ್ಯಾಪಾರ ಕ್ರಮವನ್ನು ಪ್ರತಿಭಟಿಸಿದ್ದು, ಇವರ ಸೈನಿಕರ ಕ್ರಮ ಬಂಗರಾಜರು ಈ ರಾಣಿಯರಿಗೆ ವಿರುದ್ಧವಾಗಿ ಪೋರ್ತುಗೀಸರಿಗೆ ಸಹಾಯ ಮಾಡಿರುವುದನ್ನು ತಿಳಿಸಿದೆ. ಇದನ್ನೇ ಆಧರಿಸಿ ಡಾನ್‌ವರಸ್, ದಾ ಕುನ್ಯ ಮತ್ತು ಮೊರೈಯಿಸರು ಅಬ್ಬಕ್ಕ ದೇವಿಯರ ಚಟುವಟಿಕೆಗಳನ್ನು ತಿಳಿಸಿದ್ದಾರೆ. ಆದರೆ ವಸ್ತುನಿಷ್ಠೆ ಮತ್ತು ನಿಷ್ಪಕ್ಷಪಾತ ದೃಷ್ಟಿಯಲ್ಲಿ ಈ ಗ್ರಂಥವು ಕಿಟೊ ಮತ್ತು ಅಂತೋನಿಯೊ ಬೊಕೊರೊ ಗ್ರಂಥಗಳಿಗಿಂತ ಕಡಿಮೆ ಮೌಲ್ಯದ್ದಾಗಿದೆ.[೨೨]

ವಿದೇಶಿ ಪ್ರವಾಸಿಗರು

ಉಳ್ಳಾಲ ಚೌಟರ ಆಳ್ವಿಕೆಯ ಅವಧಿಯಲ್ಲಿ ೧೫೫೪ರಲ್ಲಿ ಕೆಲವು ವಿದೇಶಿ ಪ್ರವಾಸಿಗರು ಉಳ್ಳಾಲ ಮತ್ತು ಮಂಗಳೂರನ್ನು ಸಂದರ್ಶಿಸಿದ್ದರು. ಇವರು ತಾವು ನೋಡಿದ ಮತ್ತು ಕೇಳಿದ ಅಬ್ಬಕ್ಕ ದೇವಿಯರ ಮತ್ತು ಇವರು ಆಳುತ್ತಿದ್ದ ರಾಜ್ಯದ ಕುರಿತಾಗಿ ಕೆಲವು ಮಾಹಿತಿಗಳನ್ನು ತಮ್ಮ ವರದಿಗಳಲ್ಲಿ ಸಂಗ್ರಹಿಸಿ ಬರೆದಿಟ್ಟಿದ್ದರು. ಈ ಪ್ರವಾಸಿಗರ ಉದ್ದೇಶಗಳು ವಿವಧವಾಗಿದ್ದರೂ ಇವರು ಸಂಗ್ರಹಿಸಿದ ಮಾಹಿತಿಗಳು ಅಬ್ಬಕ್ಕ ದೇವಿಯರ ಕುರಿತಾಗಿ ತಿಳಿಯಲು ಆಕರಗಳಾಗಿ ಪರಿಣಮಿಸಿವೆ. ಇಟೇಲಿ, ಪ್ರಾನ್ಸ್, ಹೋಲ್ಲೆಂಡ್ ದೇಶಗಳಿಂದ ಬಂದ ಪ್ರವಾಸಿಗರು ಅಬ್ಬಕ್ಕ ದೇವಿಯರ ರಾಜ್ಯದ ಪೋರ್ತುಗೀಸರ ಲೂಟಿಯುಕ್ತ ವ್ಯಾಪಾರ ಕ್ರಮ, ಇದಕ್ಕೆ ಈ ರಾಣಿಯರ ಪ್ರಕ್ರಿಯೆಗಳು ಮತ್ತು ಈ ರಾಣಿಯರ ವ್ಯಕ್ತಿತ್ವಗಳು ಇವುಗಳ ಮೇಲೆ ಹೆಚ್ಚಿನ ಬೆಳಕನ್ನು ಬೀರಿದ್ದಾರೆ. ಉದಾ : ಕ್ರಿ. ಶ.೧೫೬೭ರಲ್ಲಿ ಬಂದ ಇಟೆಲಿ ಪ್ರವಾಸಿಗ ಸೀಜರ್ ಫ್ರೆಡರಿಕ್ (Ceasar Frederick) ಪೋರ್ತುಗೀಸರ ಲೂಟಿಯುಕ್ತ ವ್ಯಾಪಾರದಿಂದ ಉಳ್ಳಾಲ ಮತ್ತು ಮಂಗಳೂರಿನಲ್ಲಿ ಅಕ್ಕಿ ವ್ಯಾಪಾರ ಇಳಿಮುಖವಾದುದನ್ನು ಹೇಲಿದ್ದಾನೆ. ಆದರೆ ರಾಣಿಯು (ಹಿರಿಯ ಅಬ್ಬಕ್ಕ) ಇದನ್ನು ಪುನಃ ಚೇತರಿಸಲು ಕೈಗೊಂಡ ಕ್ರಮಗಳನ್ನು ಉಲ್ಲೇಖಿಸಿದ್ದಾನೆ. ಇವನ ವರದಿಯನ್ನು ಪರ್ಚಾಸ್(Purchase) ಕಂಪೆನಿಯವರು ೧೬೨೫ರಲ್ಲಿ ಪ್ರಕಟಿಸಿದ್ದಾನೆ. ಕ್ರಿ. ಶ. ೧೬೦೦ರಲ್ಲಿ ಬಂದ ಪ್ರೆಂಚ್ ಪ್ರವಾಸಿ ಫೈರಾರ್ಡ್ ದೆಲವ್ (Francois Pyard) ತನ್ನ ದೀರ್ಘವಾದ ಪ್ರವಾಸ ವರದಿಯಲ್ಲಿ ಪೋರ್ತುಗೀಸರ ವ್ಯಾಪಾರ ಇಳಿಮುಖವಾದುದು, ಇದಕ್ಕೆ ಇವರು ಸ್ಥಳೀಯ ರಾಜರುಗಳಾದ

---

೨೨ ಇತ್ತೀಚಿನ ಸಂಶೋಧನೆ ಪ್ರಕಾರ ಪೆರಿಯಾ ಸೋಜಾನ ಗ್ರಂಥವು ಹೆಚ್ಚಾಗಿ ಅನುಷಂಗಿಕ (Secondary) ಆಧಾರಗಳನ್ನು ಅವಲಂಭಿಸಿವೆ. ವಿಷಯಗಳನ್ನು ಸರಿಯಾಗಿ ಇವನು ವಿಮರ್ಶಿಸಿಲ್ಲ. ಆದುದರಿಂದ ಇವನ ಗ್ರಂಥದಲ್ಲಿ ತಿಲಿಸಿದ ಕೆಲವು ಸಂಗತಿಗಳು ಸಂದೇಹಾಸ್ಪದವಾಗಿದೆ. ನೋಡಿ ಬಿ. ಎಸ್. ಶಾಸ್ತ್ರಿ The Portuguese in Kanara ಪುಟ ೩೮ ನೋಡಿ ಈ ವಿದ್ವಾಂಸರ ಇನ್ನೊಂದು ಗ್ರಂಥ

Goa-Kanara Portuguese Relations 1498-1763 (New Delhi) ಪು 320

ಬಂಗ, ಉಳ್ಳಾಲ ಚೌಟ ರಾಣಿಯರ (ಕಿರಿಯ ಅಬ್ಬಕ್ಕ) ಮೈತ್ರಿ ಹೊಂದುವ ಆಕಾಂಕ್ಷೆ ಹೊಂದಿದ್ದು ಮತ್ತು ಮಂಗಳೂರು ಉಳ್ಳಾಲಗಳ ವ್ಯಾಪಾರವು ಅರೇಬಿಯಾ ಮತ್ತು ಮಾಲ್ಡೀವ್ಸ್‌ವರೆಗೆ ವಿಸ್ತರಿಸಿದ ಮಾಹಿತಿಗಳನ್ನು ಕೊಟ್ಟಿದ್ದಾನೆ. ಈ ಪ್ರವಾಸ ವರದಿ ಆಗಿನ ಕಾಲದ ಮಂಗಳೂರು ಉಳ್ಳಾಲ ಪರಿಸರಗಳ ರಾಜಕೀಯ ಮತ್ತು ವಾಣಿಜ್ಯ ಇತಿಹಾಸ ತಿಳಿಯಲು ಉತ್ತಮ ಆಕರಗಳಲ್ಲಿ ಒಂದಾಗಿದೆ.

ಕಿರಿಯ ಅಬ್ಬಕ್ಕ ದೇವಿಯ ಕುರಿತಾಗಿ ಸವಿಸ್ತಾರವಾದ ಮತ್ತು ಚಿತ್ರಮಯ ವಿವರಗಳು ಕ್ರಿ. ಶ. ೧೬೨೩ ರಲ್ಲಿ ಬಂದ ಇಟಲಿ ಪ್ರವಾಸಿ ಪಿಯತೊ ದೆಲ್ಲಾವೆಲ್ಲೆ (Pietro Dalla valle) ವರದಿಯಿಂದ ತಿಳಿದು ಬರುತ್ತದೆ. ಈ ಪ್ರವಾಸಿ ದ. ಕ. ಜಿಲ್ಲೆಯ ಬಗ್ಗೆ ಬೇರೆಯವರು ಹೇಳಿದುದಕ್ಕಿಂತ ಹೆಚ್ಚು ಹೇಳಿದ್ದಾನೆ. ೧೫೮೬ರಲ್ಲಿ ರೋಮಿನಲ್ಲಿ ಜನಿಸಿದ ಪಿಯತ್ರೊ ಬಾಲ್ಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಹೊಂದಿ ಸ್ಪೇನ್ ದೇಶದ ನೌಕಾದಳದಲ್ಲಿ ಸ್ವಲ್ಪ ಕಾಲ ಸೇವೆ ಸಲ್ಲಿಸಿ ನಂತರ ಇವನು ಜಗತ್ತನ್ನು ನೋಡಬೇಕೆಂಬ ಲವಲವಿಕೆಯಿಂದ ಕ್ರಿ. ಶ. ೧೬೧೨ರಲ್ಲಿ ಸಂಚಾರವನ್ನು ಆರಂಭಿಸಿದನು. ಸಂಚಾರಿಯಾಗಿ ಬಂದ ದೆಲ್ಲಾವೆಲ್ಲೆ (Della valle) ಏಸ್ಯಾ ಖಂಡಕ್ಕೆ ಬಂದು ಪರ್ಶಿಯಾ ದೊರೆಯನ್ನು ಸಂದರ್ಶಿಸಿದನು. ಪೋರ್ತುಗೀಸರು ಮಂಗಳೂರಿನಲ್ಲಿ ಹೀನಾಯವಾಗಿ ಸೋತ ವಿಚಾರ ಇವನಲ್ಲಿ ಇಲ್ಲಿ ತಿಳಿಯಿತು. ಇಷ್ಟವಿಲ್ಲದೆ. ಈ ರಾಣಿಯ ವ್ಯಾಪಾರ ಕ್ಷೇತ್ರ ಪರ್ಶಿಯಾದ ಲರೆಗೆ ಹಬ್ಬಿತ್ತೆಂಬ ಸಂಗತಿಯೂ ತಿಳಿಯಿತು. ಈ ಎರಡು ವಿಚಾರಗಳಿಂದ ಸಂತಸಗೊಂಡದ್ದಲ್ಲದೆ ದೆಲ್ಲಾವಲ್ಲೆ ಈ ರಾಣಿಯನ್ನು ಸಂದರ್ಶಿಸಬೇಕೆಂದು ನಿರ್ಧಾರದಿಂದ ಭಾರತಕ್ಕೆ ಬಂದನು. ಮಂಗಳೂರು, ಬಂಗೇಲ, ಉಳ್ಳಾಲವನ್ನು ಸಂದರ್ಶಿಸಿದ ಈ ಪ್ರವಾಸಿಯು ಅಬ್ಬಕ್ಕಳ ವ್ಯಕ್ತಿತ್ವ, ಇವಳು ಪೋರ್ತುಗೀಸ, ಬಂಗರಸ ಮತ್ತು ಕೆಳದಿ ನಾಯಕರೊಂದಿಗೆ ಹೊಂದಿದ ರಾಜಕೀಯ ವ್ಯವಹಾರಗಳ ಸ್ವರೂಪವನ್ನು ಚಿತ್ರಮಯವಾಗಿ ತನ್ನ ವರದಿಯಲ್ಲಿ ಬರೆದಿದ್ದಾನೆ. ಇಷ್ಟವಿಲ್ಲದೆ ದೆಲ್ಲಾವಲ್ಲೆಯ ವರದಿಯ ಆಗಿನ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಇತಿಹಾಸ ತಿಳಿಯುವಲ್ಲಿ ಪ್ರಮುಖ ಆಕರವಾಗಿದೆ. ಈ ವರದಿಯು ಮೂಲತಃ ಇಟಲಿಯನ್

---

೨೩. ಇದನ್ನು ಭಾಷಾಂತರಿಸಿದವರು ಹ್ಯಾವರಸ್ (Havers). ಇದಕ್ಕೆ ಟಿಪ್ಪಣಿ ಬರೆದವರು ಎಡವಡಗ್ರೇ (Edward Grey). ಇದರ ಶಿರೋನಾಮೆ The Travels of Pietro della valla in india Vol I & II (London) ಇದು ೧೯೯೧ರಲ್ಲಿ ಪುನರ್ ಮುದ್ರಣ ಹೊಂದಿದೆ. ಎಚ್. ಎಲ್. ನಾಗೇಗೌಡ ಈ ಪ್ರವಾಸ ಕಥನವನ್ನು ಕನ್ನಡಕ್ಕಾ ಭಾಷಾಂತರಿಸಿದ್ದಾರೆ. ಇದು ಇವರ ಪ್ರವಾಸಿ ಕಂಡ ಇಂಡಿಯಾ ಸಂಪುಟ ೪ ಮೈಸೂರು (೧೯೭೨) ಪುಪ ೨೬೦-೮೩ ರಲ್ಲಿದೆ.

ಭಾಷೆಯಲ್ಲಿದ್ದು ೧೬೬೪ರಲ್ಲಿ ಆಂಗ್ಲ ಭಾಷೆಗೆ ತರ್ಜುಮೆ ಮಾಡಿದ್ದನ್ನು ಹೆಕಲ್ಯೂಟ್(Hakluyt) ಸಂಸ್ಥೆಯವರು ೧೮೯೨ರಲ್ಲಿ ಪ್ರಕಟಿಸಿದರು. ಅಬ್ಬಕ್ಕದೇವಿಯ ವಿಚಾರ ಈ ಗ್ರಂಥದ ಎರಡನೇ ವಿಭಾಗದಲ್ಲಿದೆ.

ಉಳ್ಳಾಲದಲ್ಲಿ ಅಬ್ಬಕ್ಕ ದೇವಿಯ ಸಂತತಿಯವರು ಕ್ರಿ. ಶ. ೧೬೬೪ವರೆಗೆ ಆಳಿದ್ದರೆಂಬ ಸಂಗತಿಯು ಇನ್ನೊಬ್ಬ ಫ್ರೆಂಚ್ ಪ್ರವಾಸಿ ಟೆವನೊಟಿನ ಪ್ರವಾಸ ವರದಿಯಲ್ಲಿ ನಮೂದಿತವಾಗಿದೆ. ಈ ಪ್ರವಾಸ ವರದಿಯು ಉಳ್ಳಾಲದ ವರದಿಯು ಉಳ್ಳಾಲದ ರಾಜಕೀಯ ಚರಿತ್ರೆ ತಿಳಿಯುವಲ್ಲಿ ಒಂದು ಆಕರವಾಗಿದೆ.[೨೪]

ಜನಜನಿತ ಹೇಳಿಕೆಗಳು

ಇಂತಹ ಆಕರಗಳು ಅಬ್ಬಕ್ಕ ದೇವಿಯರ ಕುರಿತಾಗಿ ಹಲವಾರು ಇವೆ. ಆದರೆ ಇವುಗಳಲ್ಲಿ ಹೆಚ್ಚಿನವು ಇತಿಹಾಸ ಸತ್ಯಕ್ಕೆ ದೂರವಾಗಿದೆ. ಕೆಲವು ಸಂದರ್ಭಗಳಲ್ಲಿ ಉತ್ಪ್ರೇಕ್ಷೆ ಮತ್ತು ಕಲ್ಪನೆಯುಳ್ಳ ಸಂಗತಿಗಳು ಇವೆ. ಪ್ರತ್ಯಕ್ಷ ಇತಿಹಾಸ ದಾಖಲೆಗಳ ಹಿನ್ನೆಲೆಯಲ್ಲಿ ಜನ ಜನಿತ ಹೇಳಿಕೆಗಳನ್ನು ಪರೀಕ್ಷಿಸಿ ಇವುಗಳನ್ನು ಅಧ್ಯಯನ ಮಾಡಿದಾಗ ಕೆಲವು ನೈಜ ಮಾಹಿತಿಗಳು ಈ ರಾಣಿಯರ ಕುರಿತಾಗಿ ಸಿಗುವ ಸಾಧ್ಯತೆ ಇದೆ. ಈ ಯತ್ನವನ್ನು ಈ ಮಾಹಿತಿಗಳು ಈ ರಾಣಿಯರ ಕುರಿತಾಗಿ ಸಿಗುವ ಸಾಧ್ಯತೆ ಇದೆ. ಈ ಯತ್ನವನ್ನು ಈ ಗ್ರಂಥದಲ್ಲಿ ಮಾಡಲಾಗಿದೆ. ಇಷ್ಟೆಲ್ಲಾ ಕುಂದು ಕೊರತೆಗಳು ಈ ಆಕರಗಳಲ್ಲಿದ್ದರೂ, ಇವುಗಳು ಈ ರಾಣಿಯರ ಕಾಲದ ಸಾಂಸ್ಕೃತಿಕ ಸತ್ಯವನ್ನು ತಿಳಿಯಲು ಸಹಕಾರಿಗಳಾಗಿವೆ.

---

೨೪ Third Psrt of the Travels of Mr de Thevenot Ed SNsen New Delhi ಪು ೧೨೫

ಅಧ್ಯಾಯ ೩

ಅಬ್ಬಕ್ಕ ದೇವಿಯರ ಐತಿಹಾಸಿಕ ಹಿನ್ನೆಲೆ

ಅಬ್ಬಕ್ಕದೇವಿಯರು ತುಳುನಾಡಿನಲ್ಲಿ ಆಳಿಕೊಂಡಿದ್ದ ಚೌಟ ವಂಶಕ್ಕೆ ಸೇರಿರುವರು. ಈ ಮನೆತನದವರು ಸೋಮವಂಶದವರೆಂದೂ, ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯರೆಂದು ಹೇಳಿಕೊಂಡು ಪುತ್ತಿಗೆ, ಉಳ್ಳಾಲಗಳನ್ನು ಕೇಂದ್ರವನ್ನಾಗಿ ಮಾಡಿ ಆಳಿದರು. ಇವರು ಜೈನಮತದವರಾಗಿದ್ದರೂ, ಚೌಟರು ಪುತ್ತಿಗೆ ಸೋಮನಾಥನ ಪರಮಭಕ್ತರು. ಇವರ ಆಳ್ವಿಕೆಯಲ್ಲಿ ಕೆಲವು ಸೀಮೆಗಳಿದ್ದವು. ಜನಜನಿತ ಹೇಳಿಕೆಗಳು, ಚೌಟರು ಪುತ್ತಿಗೆಯಲ್ಲಿ ೧೨ನೇ ಶತಮಾನದ ಅಂತ್ಯದಲ್ಲಿ ಆಳಿದರೆಂದು ತಿಳಿಸಿದರೂ,[೧] ಇವರ ಆಳ್ವಿಕೆಯ ಸ್ಪಷ್ಟ ದಾಖಲೆಯು ಸಿಗುವುದು ಹದಿನಾಲ್ಕನೇ ಶತಮಾನದ ಅಂತ್ಯದಲ್ಲಿಯೆ. ಇದರ ಪೂರ್ವದಲ್ಲಿ ಮೂಡಬಿದ್ರೆ ಪರಿಸರಗಳಲ್ಲಿ ಹೊಯ್ಸಳರ ಮತ್ತು ಆಳುಪರಸರ ಆಳ್ವಿಕೆ ಇದ್ದದ್ದನ್ನು ಈ ಪ್ರದೇಶದಲ್ಲಿ ಸಿಕ್ಕಿದ ಶಾಸನಗಳಿಂದ ತಿಳಿಯಬಹುದು.[೨]

ಪುತ್ತಿಗೆ ಪರಿಸರದಲ್ಲಿ (ಪ್ರವಾಸಿ ಬಂಗಲೆಯ ಹತ್ತಿರ) ಸಿಕ್ಕಿದ ಶಿಲಾಶಾಸನವು ಪ್ರಪ್ರಥಮವಾಗಿ ಚೌಟರ ಹೆಸರನ್ನು ಉಲ್ಲೇಖಿಸುತ್ತದೆ. ಈ ಶಾಸನದ ಕಾಲ ೧೪೯೦.[೩] ಇಲ್ಲಿ ಉಲ್ಲೇಖಿಸಿದ ಚೌಟರಸ ವಿಕ್ರುಚೌಟ. ಇವನ ಆಳ್ವಿಕೆಯಲ್ಲಿ ಬಿದಿರೆಯ ಗುರುಬಸ್ತಿಯ ಚಂದ್ರೋಗ್ಯ ಪಾರ್ಶ್ವನಾಥ ತೀರ್ಥಂಕರರಿಗೆ ದಾನ ಮಾಡಿದ್ದು ಈ ಶಾಸನದಲ್ಲಿ ಹೇಳಿದೆ.

---

೧ ಈ ಜನಜನಿತ ಹೇಳಿಕೆಯಂತೆ ಘಟ್ಟದಿಂದ ವಲಸೆ ಬಂದ ತಿರುಮಲರಾಯ ಚೌಟ ಕಿ.ಶ. ೨೨೬೦ರಲ್ಲಿ ಚೌಟ ರಾಜ್ಯವನ್ನು ಸ್ಥಾಪಿಸಿದ. ಇವರ ರಾಜಕೀಯ ಕೇಂದ್ರ ಉಳ್ಳಾಲವಾಗಿತ್ತು. ನಂತರ ಇವನ ಅಳಿಯ ಚೆನ್ನರಾಯ ಚೌಟ ಪುತ್ತಿಗೆಗೆ ತನ್ನ ಕೇಂದ್ರವನ್ನು ಬದಲಾಯಿಸಿ ಇಲ್ಲಿಯೇ ಅರಮನೆ ಕಟ್ಟಿ ಆಳಿದನು. ಕ್ರಿಶ. ೧೨೫೫ರಲ್ಲಿ ಚೌಟರಸ ಎರಡನೇ ತಿರುಮಲನು ಪುತ್ತಿಗೆಯಲ್ಲಿ ಸೋಮನಾಥ ದೇವಾಲಯವನ್ನು ಕಟ್ಟಿ ಇದಕ್ಕೆ ಪಂಚ ದೈವಸ್ಥಾನದ ಸಂಪರ್ಕವನ್ನು ಸ್ಥಾಪಿಸಿದನು. ಇವನ ನಂತರ ಅಬ್ಬಕ್ಕದೇವಿ (೧೨೮೩- ೧೩೧೬) ಭೋಜರಾಜ ಚೌಟ (೧೩೧೬-೧೩೩೪) ಭೋಜರಾಜ II (೧೪೭೦-೧೫೧೦) ತಿರುಮಲರಾಯ III (೧೫೧೦-೧೫೪೪) ವರೆಗೆ ಆಳಿದರು. ನಂತರ ಅಬ್ಬಕ್ಕದೇವಿ ಉಳ್ಳಾಲದಲ್ಲಿ ಪಟ್ಟಕ್ಕೆ ಬಂದಳು. ನೋಡಿ ಐಗಳ ದ.ಕ. ಪ್ರಾಚೀನ ಇತಿಹಾಸ ಪು. ೨೮೬-೩೧೨ ಯುಸ್‌ಯು ಪುತ್ತಿಗೆ ಅಧೇ ವಿಭಾಗ ೨. ಆದರೆ ಸಮಕಾಲೀನ ದಾಖಲೆಗಳಾದ ಶಾಸನಗಳು ಮತ್ತು ಇನ್ನಿತರ ದಾಖಲೆಗಳು ಮೇಲೆ ತಿಳಿಸಿದ ಸಂಗತಿಗಳನ್ನು ದೃಢೀಕರಿಸುವುದಿಲ್ಲ. ವ್ಯತಿರಿಕ್ತವಾಗಿ ಹೊಸವಂಶಾವಳಿಯನ್ನು ನೀಡುತ್ತವೆ. ಆದುದರಿಂದ ಸಾಂಪ್ರದಾಯಕ ಚೌಟದ ವಂಶಾವಳಿಯು ನಂಬಲರ್ಹವಲ್ಲ.

೨ರ ಭಾಸ VII No ೨೧೩, ೨೨೧, ೨೨೨ ವಿವರ ನೋಡಿ ರಮೇಶ ಕೆ. ವಿ. History of South Kanara ಪು. ೧೨೭ - ೧೩೬.

೩ ದ ಭಾ. ಶ. ನಂಬ್ರ ೨೨೯.

ಮೂಡಬಿದ್ರೆಯಲ್ಲಿ ಮಂಜಣ್ಣನು ಅಧಿಕಾರ ನಡೆಸುತ್ತಿದ್ದನೆಂದೂ ಹೇಳಿದೆ. ಇವನ ನಂತರ ಬೆಳಕಿಗೆ ಬಂದವನು ಚೌಟ ಶಾಂತಯ್ಯ. ಇವನ ಉಲ್ಲೇಖವು ಕ್ರಿ. ೧೪೩೧ರ ಪುತ್ತೂರಿನಲ್ಲಿ ಸಿಕ್ಕಿದ ಶಾಸನದಲ್ಲಿದೆ. ಇವನೊಂದಿಗೆ ಬಂಗರಾಜ ಪಾಂಡ್ಯಪ್ಪನ ಉಲ್ಲೇಖವು ಇದೇ ಶಾಸನದಲ್ಲಿ ದಾಖಲಾಗಿದೆ.[೧] ಇಲ್ಲಿಂದ ಒಂದನೇ ಅಬ್ಬಕ್ಕದೇವಿಯ ಆಳ್ವಿಕೆಯವರೆಗಿನ ಶಾಸನಗಳಿಂದ ತಿಳಿದು ಬರುವ ಚೌಟರ ವಂಶಾವಳಿ ಈ ಕೆಳಗಿನಂತಿವೆ. ಅಲ್ಲಪ್ಪಶೇಖರ (೧೪೬೫) ದೇವರ ಶೇಖರ, ಭೀಮಣ್ಣ ಶೇಖರ, (೧೪೬೫-೧೫೪೦), ಎರಡನೇ ತಿರುಮಲರಸ ಚೌಟ [೫] (೧೫೪೦-೧೫೫೩). ಇವನ ನಂತರ ಸೊಸೆ ಅಬ್ಬಕ್ಕ ದೇವಿಯು ಪಟ್ಟಕ್ಕೆ ಬಂದಳು. ಈ ಅರಸರೆಲ್ಲಾ ಅಳಿಯ ಸಂತಾನ ಕ್ರಮದಂತೆ ಪಟ್ಟಕ್ಕೆ ಬಂದರೆಂದು ಶಾಸನಗಳ ಅಧ್ಯಯನವು ಸೂಚಿಸುತ್ತದೆ.

ಚೌಟರಸರ ಸಾಧನೆಗಳು

ಕ್ರಿ.ಶ. ೧೪೯೦ - ೧೫೫೪ರ ವರೆಗೆ ಚೌಟರಸರು ತುಳುನಾಡಿನ ರಾಜಕೀಯದಲ್ಲಿ ಪ್ರಮುಖ ರಾಜಕೀಯ ಶಕ್ತಿಗಳಾಗಿದ್ದರು. ಇವರ ಆಳ್ವಿಕೆಯಲ್ಲಿ ಉಳ್ಳಾಲ, ಮಿಜಾರ್, ಅಕುರ್ಲ ಮಾಗಣೆಗಳೂ ಪುತ್ತಿಗೆ, ಪೇಜಾವರ ಮೇಲ ಮತ್ತು ಮುಂಡ ಕೂರಸೀಮೆಗಳೆಂಬ ಸೀಮೆಗಳೂ ಇದ್ದವು[೬]. ಈ ಅರಸರು ವಿಜಯನಗರ ಅರಸುಗಳ ಸಾರ್ವಭೌಮತೆಯನ್ನು ಮನ್ನಿಸಿ ತಮ್ಮ ರಾಜ್ಯವನ್ನು ಆಳಿಕೊಂಡಿದ್ದರು. ಇಷ್ಟಲ್ಲದೆ ವಿಜಯನಗರದ ರಾಜ್ಯಪಾಲರುಗಳ ಆಡಳಿತದಲ್ಲಿ ಸಹಭಾಗಿಗಳಾಗಿದ್ದರು. ಅಕ್ಕಪಕ್ಕದಲ್ಲಿರುವ ರಾಜರುಗಳೊಡನೆ ಆಗಿಂದಾಗ್ಗೆ ಯುದ್ಧ ಮತ್ತು ಒಪ್ಪಂದಗಳನ್ನು ಮಾಡಿಕೊಂಡಿದ್ದರು. ಒಪ್ಪಂದ ಮತ್ತು ಇನ್ನಿತರ ವ್ಯವಹಾರಗಳನ್ನು ನಡೆಸುವಾಗ ವಿಜಯನಗರ ಚಕ್ರವರ್ತಿಗಳ ಹೆಸರುಗಳನ್ನು ದಾಖಲಿಸುತ್ತಿದ್ದರು[೭]. ಇವರುಗಳ ಇನ್ನೊಂದು ಸಾಂಸ್ಕೃತಿಕ ಸಾಧನೆ ಯಾವುದೆಂದರೆ ಜೈನಮತ ಮತ್ತು ಇದರ ಕಲೆಯ ಪ್ರಗತಿ. ಮೂಡಬಿದ್ರೆ ಪ್ರಮುಖ ಜೈನ ಕೇಂದ್ರವಾಗಿ ಪರಿಣಮಿಸಿತು. ಜೈನರ ಪ್ರಮುಖ ಬಸದಿ ತ್ರಿಭುವನ ತಿಲಕ ಚೂಡಾಮಣಿ (ಸಾವಿರಕಂಬದ ಬಸದಿ). ನಿರ್ಮಾಣವಾಗಲು ಚೌಟರಸರು ಸಹಕರಿಸಿದರು. ಈ ಬಸದಿಯ

---

೧ ARSIE 193D- 31 No.೩೪೪.

೫ ಶ್ರೀ ಪಿ. ಗುರುರಾಜಭಟ್ಟ Studies in Tuluva History and Culture ಪು ೭೯ ಕೆ. ವಿ. ತುಳುನಾಡಿನ ಇತಿಹಾಸ ಪು. ೧೨೩. ಈ ವಿದ್ವಾಂಸರು ತಿಳಿಸಿದ ಚೌಟ ವಂಶಾವಳಿಯನ್ನು ಇತ್ತೀಚೆಗೆ ಸಿಕ್ಕಿದ ಶಾಸನಗಳ ಆಧಾರದಿಂದ ಪರಿಸ್ಕರಿಸಿ ಇಲ್ಲಿ ತಿಳಿಸಲಾಗಿದೆ.

೬ ಐ ಗಳ ಅದೇ ಗ್ರಂಥ ಪು ೩೦೩

೭ ದ ಭಾ ಶಾ VII ನಂಬ್ರ ೧೮೭, ೨೨೮ ARSIE 1928-29 Nos ೪೭೨ ಅದೇ - 1930-31 ನಂಬ್ರ ೩೪೦.

ನಿರ್ಮಾಣ ಪೂರ್ಣಗೊಂಡದ್ದು ಕ್ರಿ.ಶ. ೧೪೬೨ರಲ್ಲಿ. ಇದರ ನೇತೃತ್ವವನ್ನು ಚಾರುಕೀರ್ತಿ ಪಂಡತರು ವಹಿಸಿದ್ದರು. ಇದರೊಂದಿಗೆ ಚೌಟರಸರ ರಾಜ್ಯದಲ್ಲಿ ಶೈವ ಮತ್ತು ವೈಷ್ಣವ ಪಂಥಗಳು ಬೆಳೆದುಬಂದವು.

ಇಷ್ಟಲ್ಲದೆ ವಿದೇಶೀಯ ಮತಗಳಾದ ಇಸ್ಲಾಂ ಮತ್ತು ಕ್ರೈಸ್ತ ಮತಗಳು ಇಲ್ಲಿ ಪ್ರಚಾರವಾಗಿ ಸ್ಥಳೀಯ ಪದ್ಧತಿಗಳನ್ನು ಅನುಕರಿಸಿಕೊಂಡು ಬಾಲಿ ಬಂದವು ಎಂದು ಕೆಲವು ಸಮಕಾಲೀನ ದಾಖಲೆಗಳ ಅಧ್ಯಯನವು ಸೂಚಿಸುತ್ತದೆ.[೯]

ಚೌಟರಸರು ಅಕ್ಕಪಕ್ಕದ ರಾಜರುಗಳೊಂದಿಗೆ ಸಮರ ಸಂಧಾನ ನಡೆಸಿ ಪ್ರಾಬಲ್ಯ ಹೊಂದುತ್ತಿರುವ ವೇಳೆಯಲ್ಲೇ ಕೆಲವು ತುಳು ಅರಸುಮನೆತನದವರು ಇವರ ಪ್ರಾಬಲ್ಯವನ್ನು ತಗ್ಗಿಸುವ ಪ್ರಯತ್ನ ಮಾಡುತ್ತಿದ್ದರು. ಇವರಲ್ಲಿ ಪ್ರಮುಖರು ಕಳಸ ಕಾರ್ಕಳದ ಭೈರರಸ ಒಡೆಯರು ಮತ್ತು ಕುಂದ ಹೆಗ್ಗಡೆಯವರು. ಚೌಟರಿಗೆ ಮಿತ್ರರು ಬಂಗರಸ ಒಡೆಯರು. ಆದರೆ ಭೈರಸರ ಒಡೆಯರು ಒಳ ಸಂಧಾನ ಮತ್ತು ಕುಯುಕ್ತಿ ನಡೆಸಿ ಬಂಗರಸರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುತ್ತಾರೆ. ಇದು ಕ್ರಿ.ಶ. ೧೫೨೮ರ ತಾಮ್ರ ಶಾಸನದಲ್ಲಿ ವ್ಯಕ್ತವಾಗಿದೆ. ಆದರೆ ಯುದ್ಧಗಳು ಇನ್ನೊಬ್ಬ ಪ್ರಮುಖರ ಮಧ್ಯಸ್ಥಿಕೆಯಿಂದ ತೀರ್ಮಾನವಾಗುತ್ತಿದ್ದವು. ಹೊರಗಿನ ಶಕ್ತಿಯ ಅಪಾಯವನ್ನು ತಿಳಿದ ಇಮ್ಮಡಿ ತಿರುಮಲರಾಯ ಚೌಟರಸ ಕ್ರಿ.ಶ. ೧೫೪೩ರಲ್ಲಿ ಭೈರರಸ ಒಡೆಯ ಪಾಂಡ್ಯಪ್ಪನೊಂದಿಗೆ ಒಪ್ಪಂದ ಮಾಡಿಕೊಂಡನೆಂದು ಕಾರ್ಕಳದಲ್ಲಿ ಸಿಕ್ಕಿದ ಶಾಸನವು ತಿಳಿಸುತ್ತದೆ. ಈ ಒಪ್ಪಂದ ಎಮಾರ್ಳ ಮಾರಮ್ಮ ಹೆಗ್ಗಡೆ

---

೮. ಇದೇ VII ನಂಬ್ರಗಳು ೧೯೯. ೨೦೨, ೨೦೪, ೨೦೬ ವಿವರಗಳಿಗೆ ನೋಡಿ. ಗುರುರಾಜ ಭಟ್ಟ ಅದೇ ಗ್ರಂಥ ಪು ೭೬.

೯. ಕ್ರಿ.ಶ. ೧೧೭೫ರಲ್ಲಿ ಇಸ್ಲಾಂ ಮತವು ಕಾಡಾಲಿ (ಮಂಗಳೂರು) ಮತ್ತು ಮಣೇಲಗಳಲ್ಲಿ ಪ್ರಚಾರವಿದ್ದಿತ್ತೆಂದು ಪ್ರವಾಸಿ ಇಬ್ಬನ್ ಮಸೂದಿ ಹೇಳಿದ್ದಾರೆ. ಇದನ್ನು ದೃಢೀಕರಿಸುವ ದಾಖಲೆಗಳು ಇವೆ. ಉದಾ : ಕನ್ನಾನೂರು ಜಿಲ್ಲೆಯ ಮಾಡಾಯ (ಪಯ್ಯಂಗಾಡಿ) ಯ ಜುಮ್ಮಾ ಮಸೀದಿಯಲ್ಲಿರುವ ಕ್ರಿ.ಶ. ೧೨೭೪ರ ಅರೇಬಿಕ್ ಭಾಷೆಯ ಶಾಸನವು ಇದನ್ನು ಸಮರ್ಥಿಸುತ್ತದೆ. ನೋಡಿ Annal Report of Indian Epigraph 1985-66 APD No 66. ಉಳ್ಳಾಲದ ದರ್ಗದಲ್ಲಿದ್ದ ಶಾಸನ ಶಕ ೧೪೯೬ ಕಿ.ಶ. ೧೪೭೪ರಂತೆ ಇಲ್ಲಿ ಇಸ್ಲಾಂ ಧರ್ಮವು ಜನಾದರಣೀಯವಾಗಿತ್ತೆಂದು ಧ್ವನಿತವಾಗಿದೆ. ARSIE 1929-30 No. ೩೨೮. ಹೆಚ್ಚಿನ ವಿವರ ನೋಡಿ Ibrahim Kunje "Spreed of Islam in Kerala". South Indian History Congress 1981 Vol II PP ೨೧೮. ಕ್ರಿ.ಶ. ೧೫೦೨ರ ಪೋರ್ಚುಗೀಸ್ ದಾಖಲೆಯ ಪ್ರಕಾರ ವಾಸ್ಕೋಡಿಗಾಮ ಕೊಚ್ಚಿಯಲ್ಲಿದ್ದಾಗ ಉಳ್ಳಾಲ - ಮಂಗಳೂರಿನ ಪರಿಸರದಲ್ಲಿರುವ ಕ್ರೈಸ್ತರು ಇವನನ್ನು ಭೇಟಿಯಾಗಿ ತಾವು ಕ್ರೈಸ್ತರೆಂದು ತಮಗೆ ಬಿಶಪ್‌ರಿದ್ದರೆಂದು ಹೇಳಿದ್ದಾರೆ. ಆದರೆ ಇವರು ಕೆಥೋಲಿಕ್ ಪಂಥದವರಲ್ಲ. ನೋಡಿ ಬಿ.ಎಸ್. ಶಾಸ್ತ್ರಿ - The Goa - Kanara, ಪು. ೨೫೪ - ೨೫೫ ಅಬ್ಬಕ್ಕದೇವಿಯ ಆಳ್ವಿಕೆಯ ಕಾಲದ ಸ್ವಲ್ಪ ಪೂರ್ವದಲ್ಲಿ ಮಂಗಳೂರು ಮತ್ತು ಇದರ ಪರಿಸರದಲ್ಲಿ ಕ್ರೈಸ್ತ ಮತ ಪ್ರಚಾರದಲ್ಲಿದ್ದಿತು.

ಮಧ್ಯಸ್ಥಿಕೆಯಲ್ಲಿ ಇಲ್ಲಿನ ಜನಾರ್ದನ ದೇವಾಲಯದಲ್ಲಿ ನಡೆಯಿತು. ಈ ಒಪ್ಪಂದದಿಂದ ತಿಳಿದುಬರುವ ಮುಖ್ಯ ಸಂಗತಿಯೆಂದರೆ ಕಳಸ - ಕಾರ್ಕಳ ಭೈರಸರಂತೆ ಸೇನೆಯಲ್ಲಿ ಕುದುರೆಗಳ ದಳವನ್ನು ಕಟ್ಟಿ ಇರಿಸಿಕೊಳ್ಳುವಷ್ಟು ಪ್ರಾಬಲ್ಯ ಚೌಟರಿಗಿರಲಿಲ್ಲ. ಆದರೆ ಮಂದಿ ಬಲದಲ್ಲಿ ಇವರು (ಚೌಟರು) ಮೇಲುಗೈಯಾಗಿದ್ದರು. [೧೦]

ತಮ್ಮ ಸೀಮೆಯಲ್ಲಿ ಚೌಟರಸರು ಉತ್ತಮ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದ್ದರು. ತಮ್ಮ ಕೈಕಳಗಿರುವ ಅಧಿಕಾರಿಗಳ ಕರ್ತವ್ಯಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದರು. ಉದಾ : ಚೌಟರಸರಿಗೆ ಪಟ್ಟವಾಗುವಾಗ ಸೋಮನಾಥ ಗುತ್ತಿವರು ಕೈಹಿಡಿದು ರಾಜನನ್ನು ಸಿಂಹಾಸನದಲ್ಲಿ ಕುಳ್ಳಿರಿಸಬೇಕು. ಅಮ್ಮನೂರು ಗುತ್ತಿನವರು ರಾಜರಿಗೆ ಪಟ್ಟದ ಉಂಗುರವನ್ನು ಎಲ್ಲಾ ಪ್ರಜೆಗಳ ಅನುಮತಿಯಿಂದ ಬೆರಳಿಗೆ ಇಡಬೇಕು. ರಾಜನಿಗೆ ಪಟ್ಟದ ಕತ್ತಿಯನ್ನು ಎಲ್ಲರ ಒಪ್ಪಿಗೆಯಿಂದ ಕೊಡುವವರು ಇನ್ನ ಗುತ್ತಿನವರು. ತುಳುವರಸ ಚೌಟರಾಜ ಒಡೆಯನೆಂದು ಮೂರುಸಾರಿ ಘೋಷಿಸುವ ಹಕ್ಕು ತೋಕೂರು ಗುತ್ತಿನವರು. ತುಳುವರಸಿ ಚೌಟರಾಜ ಒಡೆಯನೆಂದು ಮೂರು ಸಾರಿ ಘೋಷಿಸುವ ಹಕ್ಕು ತೊಕೂರು ಗುತ್ತಿನವರದ್ದು. ಮತ್ತು ಇವರು ಕಪ್ಪಕಾಣಿಕೆಯನ್ನು ಸಲ್ಲಿಸಬೇಕು. ಇಷ್ಟಲ್ಲದೇ ಎಲ್ಲಾ ಸೀಮೆಗುತ್ತಿನವರು ಕಾಣಿಕೆಯನ್ನು ಚೌಟರಸರಿಗೆ ಪಟ್ಟಾಭಿಷೇಕ ಕಾಲದಲ್ಲಿ ಒಪ್ಪಿಸಬೇಕೆಂಬ ಪದ್ಧತಿ ರೂಢಿಯಲ್ಲಿ ಬಂತು[೧೧].

ಅಧ್ಯಾಯ ೪

ಹಿರಿಯ ಅಬ್ಬಕ್ಕದೇವಿ ೧೫೫೪ - ೧೫೮೮

ಅಬ್ಬಕ್ಕದೇವಿ ಚೌಟರ ಅರಸುಮನೆತನದಲ್ಲಿ ಆಳಿದವರಲ್ಲಿ ಪ್ರಮುಖಳು. ಈ ಅರಸುಮನೆತನದಲ್ಲಿ ಇದೇ ಹೆಸರಿನವರು ನಾಲ್ಕು ಸಲ ಆಳಿದ್ದ ದಾಖಲೆಗಳು ಸಿಕ್ಕಿರುವುದರಿಂದ ಈ ರಾಣಿಯನ್ನು ಹಿರಿಯ ಅಬ್ಬಕ್ಕಳೆಂದು ಇಲ್ಲಿ ತಿಳಿಸಲಾಗುವುದು. ಇವಳ ವಿಚಾರ ಹೆಚ್ಚಿನ ಮಾಹಿತಿಗಳು ಸಿಗುವುದು ಪೋರ್ತುಗೀಸ್ ದಾಖಲೆಗಳಲ್ಲಿ ಮತ್ತು ಇದೇ ಭಾಷೆಯಲ್ಲಿ ಬರೆದ ಐತಿಹಾಸಿಕ ಕೃತಿಗಳಲ್ಲಿ. ಇತ್ತೀಚೆಗೆ ಇವಳ ಔದಾರ್ಯ ದಾನಶೀಲತೆ ಮತ್ತು ನ್ಯಾಯಪಾಲನೆಯ ರೀತಿಗಳನ್ನು ತಿಳಿಸುವ ಎರಡು ಶಾಸನಗಳು ಸಿಕ್ಕಿವೆ.

---

೧೦ ARSIE 1921 -22 Ap. a Nos 4, 5, 6, 7

ಹೆಚ್ಚಿನ ವಿವರ ಕೆಜಿ ವಸಂತಮಾಧವ : "ಚೌಟ ಮತ್ತು ಕಾರ್ಕಳ ಭೈರರಸ, ಒಡೆಯರ ರಾಜಕೀಯ ಸಂಬಂಧ" ಕರ್ನಾಟಕ ಭಾರತಿ ೧೯೭೩ ಮೇ ಸಂಚಿಕೆ Nx ೪. PP ೫೨-೬೧.

೧೧ ಶೀನಪ್ಪ ಹೆಗ್ಗಡೆಯರ ಸಾಹಿತ್ಯ (ಉಡುಪಿ ೧೯೯೧) ಪು ೨೭೪.

ಈ ಕೆಚ್ಚೆದೆಯ ಅಬ್ಬಕ್ಕ ರಾಣಿಯ ಪ್ರಥಮ ಉಲ್ಲೇಖ ಬರುವುದು ಕ್ರಿ.ಶ. ೧೫೫೫ರ ೧ ಪೋರ್ಚುಗೀಸ್ ದಾಖಲೆಯಲ್ಲಿ. ಈ ದಾಖಲೆ ಇವಳನ್ನು ಬುಕ್ಕರಾಣಿ ಬಲ್ಲಾಲ (Bukkorani of Ballalla) ಎಂದು ನಮೂದಿಸಿದೆ. ಇವಳು ಉಳ್ಳಾಲದಲ್ಲಿ ಬಲಿಷ್ಠ ಕೋಟೆಯನ್ನು ಕಟ್ಟಿ ಆಳುತ್ತಿದ್ದಳೆಂದು ಇದರಲ್ಲಿಯೇ ಹೇಳಿದೆ. ಈ ಕೋಟೆಯ ಪೋರ್ತುಗೀಸರ ಹಿತಾಸಕ್ತಿಗೆ ಅಡ್ಡಿಯಾಗಿತ್ತು. ಆದರೆ ಈ ರಾಣಿ ಯಾವಾಗ ಪಟ್ಟಕ್ಕೆ ಬಂದಳು ಮತ್ತು ಇವಳಿಗಿಂತ ಹಿಂದೆ ಉಳ್ಳಾಲದಲ್ಲಿ ಯಾರು ಆಳುತ್ತಿದ್ದರೆಂಬುದನ್ನು ಈ ದಾಖಲೆ ತಿಳಿಸಿಲ್ಲ. ಇವುಗಳ ಬಗ್ಗೆ ತಿಳಿಸುವ ಇನ್ನಿತರ ಖಚಿತ ದಾಖಲೆಗಳು ಇನ್ನೂ ಸಿಕ್ಕಿಲ್ಲ. ಈ ರಾಣಿಯ ಆಳ್ವಿಕೆಯ ದಶಕದ ಹಿಂದೆ ಎರಡನೇ ತಿರುಮಲರಾಯ ಚೌಟನು ಆಳಿಕೊಂಡಿದ್ದನೆಂದು ಕಾರ್ಕಳದಲ್ಲಿ ಸಿಕ್ಕಿದ ಶಾಸನದಿಂದ ಗೊತ್ತಾಗಿದೆ. [೨]

ಈ ತಿರುಮಲರಾಯ ಚೌಟನ ಆಳ್ವಿಕೆಯ ನಂತರ (೧೫೫೪) ಅಬ್ಬಕ್ಕದೇವಿಯು ಪಟ್ಟಕ್ಕೆ ಬಂದಿರಬೇಕು ಎಂದು ಅಭಿಪ್ರಾಯಪಡಬಹುದು. ಆದರೆ ಇವಳ ರಾಜಕೀಯ ಕೇಂದ್ರ ಪುತ್ತಿಗೆಯಾಗಿರದೆ ಉಳ್ಳಾಲವಾಗಿತ್ತು. ಈ ರಾಣಿಯ ಕುರಿತಾದ ಇನ್ನೊಂದು ಸಮಸ್ಯೆಯೆಂದರೆ ಇವಳಿಗೂ ತಿರುಮಲರಾಯನಿಗೂ ಯಾವ ರೀತಿಯ ಸಂಬಂಧವಿದ್ದಿತ್ತು ಎಂಬುದನ್ನು ನಿಖರವಾಗಿ ತಿಳಿಸುವ ದಾಖಲೆ ಇನ್ನೂ ಸಿಕ್ಕಿಲ್ಲ. ಜನಾದರಣೀಯ ಹೇಳಿಕೆಯಂತೆ ಇವಳು ಇಮ್ಮಡಿ ತಿರುಮಲ ಚೌಟರಾಯನ ತಂಗಿಯ ಮಗಳು.[೩] ಇದನ್ನು ಐತಿಹಾಸಿಕ ದಾಖಲೆಗಳು ಅಲ್ಲಗಳೆಯದ ಕಾರಣ ಈ ಹೇಳಿಕೆಯನ್ನು ಒಪ್ಪಬಹುದು.

ಅಬ್ಬಕ್ಕದೇವಿಯು ರಾಜಕೀಯದಲ್ಲೂ ಆಡಳಿತ ನಡೆಸುವುದರಲ್ಲೂ ಸೈನ್ಯ ನಿರ್ವಹಣೆಯಲ್ಲೂ ಚೆನ್ನಾಗಿ ಪಳಗಿದ್ದಳೆಂದು ಪೋರ್ತುಗೀಸ್ ಬರಹಗಾರರಾದ ಬೆರೋಸ್, ಕುಟೊ, ಸಾಂತೋಷ್ (Santos) ಮೊದಲಾದವರು ತಮ್ಮ ಗ್ರಂಥಗಳಲ್ಲಿ ಹೇಳಿದ್ದನ್ನು ಗಮನಿಸಿದಾಗ ಈ ರಾಣಿಯು ಪಟ್ಟಕ್ಕೆ ಬರುವ ಮೊದಲು ಚೆನ್ನಾಗಿ ರಾಜಕೀಯದಲ್ಲಿ ತರಬೇತಿ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟರೆ ತಪ್ಪಾಗಲಿಕ್ಕಿಲ್ಲ. ಇವಳು ಇದನ್ನೆಲ್ಲಾ ತನ್ನ ಮಾವನಿಂದ ತರಬೇತಿ ಹೊಂದಿದ್ದಳೆಂದು ಪ್ರತೀತಿ ಇದೆ. ೩೮ ಇದರೊಂದಿಗೆ ಜೈನಗುರುಗಳ ಮುಖಾಂತರ ಶಾಸ್ತ್ರಗಳನ್ನು ಅಭ್ಯಾಸ ಮಾಡಿದಳು. ಇಷ್ಟಲ್ಲದೆ ಸಂಗೀತ ಮತ್ತು ಸಾಹಿತ್ಯ ಕಲೆಗಳಲ್ಲೂ ಆಕೆಗೆ ಅಭಿರುಚಿ ಇದ್ದಿತ್ತು. ಇದನ್ನು ಉಳ್ಳಾಲ ಸೋಮೇಶ್ವರ ದೇವಾಲಯದ

---

೧. ಹೆರಾಸ್ - Aravidu Dyrasty pp ೧೮೯

೨. ARISIE 1921- 22 AP.A Nos 6, 5, ಈ ಶಾಸನದ ಕಾಲ 1543.

೩. ಕುದ್ಯಾಡಿ ವಿಶ್ವನಾಥ ರೈ ಅಬ್ಬಕ್ಕ (ಬೆಂಗಳೂರು ೧೯೭೮) P ೫

೩೮ ಅದೇ.

ಆವರಣದಲ್ಲಿರುವ ಗಣಪತಿ ದೇವಸ್ಥಾನ ಗೋಡೆಯಲ್ಲಿರುವ ಶಿಲ್ಪಗಳು ದೃಢೀಕರಿಸುತ್ತವೆ. ಇವಳಿಗೆ ಪದುಮಲ ಮತ್ತುಲೋಕಾದೇವಿಯರೆಂಬ ಸಹೋದರಿಯರು ಇದ್ದರೆಂದು ಮೂಡಬಿದ್ರೆಯಲ್ಲಿ ಸಿಕ್ಕಿದ ಶಾಸನಗಳು ಹೇಳಿವೆ.[೪]

ಹಿರಿಯ ಅಬ್ಬಕ್ಕದೇವಿಯ ಆಳವಿಕೆಯ ಪೂರ್ವಾರ್ಧದ ಅವಧಿಯಲ್ಲಿ ಕೆಲವು ಪ್ರಮುಖ ರಾಜಕೀಯ ಘಟನೆಗಳು ನಡೆದವು. ಇವುಗಳಲ್ಲಿ ಮುಖ್ಯವಾದುದು ಪೋರ್ತುಗೀಸರ ಆಗಮನ ಹಾಗೂ ಅವರ ದರೋಡೆಯುಕ್ತ ವ್ಯಾಪಾರ ಕ್ರಮ ಮತ್ತು ರಕ್ಕಸ ತಂಗಡಿಯ ಯುದ್ಧದ ನಂತರ ಕನ್ನಡ ಕರಾವಳಿಯಲ್ಲಿ ವಿಜಯನಗರದ ಆಳ್ವಿಕೆಯ ಇಳಿಮುಖ. ಈ ಎರಡು ಘಟನೆಗಳು ರಾಣಿಯ ರಾಜಕೀಯ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದ್ದವು. ವ್ಯಾಪಾರಕ್ಕೆಂದು ಬಂದ ಪೋರ್ತುಗೀಸರು ಕರಾವಳಿಯ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿ ಇಲ್ಲಿನ ರೇವುಗಳಲ್ಲಿ ಮಳಿಗೆ ಸ್ಥಾಪಿಸಿದರು. ಕ್ರಮೇಣ ಇವರ ವ್ಯಾಪಾರವು ಲೂಟಿಯುಕ್ತವಾಗಿ ಪರಿಣಮಿಸಿತು. ತಮ್ಮ ವ್ಯಾಪಾರ ಕ್ರಮವನ್ನು ಒಪ್ಪದವರ ಮೇಲೆ ಪೋರ್ತುಗೀಸರು ಕ್ರೂರ ರೀತಿಯಲ್ಲಿ ವರ್ತಿಸಿದರು. ಇದರಿಂದಾಗಿ ಕರಾವಳಿಯ ರೇವುಗಳು ಇವರ ಆಕ್ರಮಣಕ್ಕೆ ತುತ್ತಾದುವು. ಬಸ್ರೂರು, ಬಾರಕೂರು ಮತ್ತು ಕೆಲವು ಸಂದರ್ಭಗಳಲ್ಲಿ ಮಂಗಳೂರು ರೇವುಗಳು ಪೋರ್ತುಗೀಸರಿಂದ ಸುಡಲ್ಪಟ್ಟವು. ಸ್ಥಳೀಯ ವ್ಯಾಪಾರ ಕ್ರಮವು ತೊಡಕಿನಲ್ಲಿ ಸಿಕ್ಕಿಕೊಂಡಿತು. ಉದಾ ೧೫೩೧ರಲ್ಲಿ ಮಂಗಳೂರು ಪೋರ್ತುಗೀಸರ ಲೂಟಿಯುಕ್ತ ವ್ಯಾಪಾರಕ್ಕೆ ಬಲಿಯಾಯಿತು. ಇದಕ್ಕೆ ಮುಖ್ಯ ಕಾರಣ ಸ್ಥಳೀಯ ವರ್ತಕರಿಂದ ಅರಬರೂ (ಮಾಪಿಳ್ಳೆ ಮುಸ್ಲಿಂರು) ಮತ್ತು ಸೆಟ್ಟಿಯರು ಮಲಬಾರಿನ ಜಾಮೋರಿನ ರಾಜ್ಯದೊಡನೆ ವ್ಯಾಪಾರ ಮಾಡಿದ್ದು. ಇದನ್ನು ಸಹಿಸದ ಪೋರ್ತುಗೀಸರು ಕುಪಿತರಾಗಿ ಇಲ್ಲಿನ ನಿವಾಸಿಗಳನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಹಿಂಸಿಸಿ ಕೊಂದರು. ಹಲವಾರು ಅಂಗಡಿ ಮತ್ತು ಮನೆಗಳಿಗೆ ಬೆಂಕಿ ಇಟ್ಟರು. ಇಲ್ಲಿನ ತೆಂಗಿನ ತೋಟ ಇವರ ಕ್ರೂರ ದಾಳಿಗೆ ಒಳಗಾಗಿ ನಾಶವಾಯಿತು. ಇವರು ಮಂಗಳೂರಿನಿಂದ ತಾಮ್ರ, ಬೆಲೆ ಬಾಳುವ ಮಣಿಗಳು, ಪಾದರಸ ಮತ್ತು ದವಸ ಧಾನ್ಯಗಳನ್ನು ದೋಚಿಕೊಂಡು ಹೋದರು. ಕೊನೆಯದಾಗಿ ಇಲ್ಲಿನ ರೇವಿನಲ್ಲಿ ತಂಗಿದ್ದ ಹಲವಾರು ಹಡಗುಗಳನ್ನು ಮುಳುಗಿಸಿದರೆಂದು ಸಮಕಾಲೀನ ಪೋರ್ತುಗೀಸ್ ಇತಿಹಾಸಕಾರ

---

೪ ದಭಾ ಶಾ VII No. ೨೧೦, APSIE 1940 - 41, Ap.A.No. 3, ಈ ಶಾಸನಗಳ ವಿವರ ಮುಂದೆ ತಿಳಿಸಲಾಗುವುದು. ಡಾ. ಸೂರ್ಯನಾಥ ಕಾಮತ್‌ರ ಅಭಿಪ್ರಾಯದಂತೆ ಉಳ್ಳಾಲದಲ್ಲಿ ಅಬ್ಬಕ್ಕಳು ಆಳಿಕೊಂಡಿರುವಾಗ ಇವಳ ಸಹೋದರಿ ಪದುಮಲದೇವಿಯು ಕ್ರಿ.ಶ. ೧೫೭೨ರ ವರೆಗೆ ಪುತ್ತಿಗೆಯಲ್ಲಿ ಆಳಿದ್ದಳು. ನೋಡಿ ಇವರ ಅಪ್ರಕಟಿತ ಗ್ರಂಥ Tuluvas in Vijayanagar Times ಪಿಎಚ್‌ಡಿ ಪ್ರಬಂಧ ಬೊಂಬಾಯಿ ವಿಶ್ವವಿದ್ಯಾಲಯ ೧೯೬೫.

ಕೆಸ್ಟೆಂಡಹ (Castanheda) ತನ್ನ ಗ್ರಂಥದಲ್ಲಿ ವಿವರಿಸಿ ಹೇಳಿದ್ದಾನೆ.[೫] ಕ್ರಿ.ಶ. ೧೫೫೪ರಲ್ಲಿ ಪೋರ್ತುಗೀಸರ ದರೋಡೆಯುಕ್ತ ವ್ಯಾಪಾರ ಕರಾವಳಿಯ ಬಾರಕೂರು, ಬಸ್ರೂರು ಮತ್ತು ಭಟ್ಕಳದವರೆಗೆ ಹಬ್ಬಿತ್ತು. ಈ ರೇವುಗಳಲ್ಲಿ ಇವರು ತಮ್ಮ ವ್ಯಾಪಾರದ ಏಕಸಾಮ್ಯವನ್ನು ಸ್ಥಾಪಿಸಿ ಸುಂಕಗಳನ್ನು ಹೇರಳ ಪ್ರಮಾಣದಲ್ಲಿ ದೇಶೀಯ ವರ್ತಕರಿಂದ ವಸೂಲಿ ಮಾಡುತ್ತಿದ್ದರೆಂದು ಪೋರ್ಚುಗೀಸ್ ಬರಹಗಾರರಾದ ಅಂತೋನಿಯೊನ್ಯೂನಜ (Antono Nune) ಮತ್ತು ಸೀಮೊ ಬೊಥೆಲೊರ ಗ್ರಂಥಗಳಲ್ಲಿ ಉಲ್ಲೇಖವಿದೆ.[೬] ಕ್ರಿ.ಶ. ೧೫೪೭ರಲ್ಲಿ ಈ ವಿದೇಶಿಯುವರು ವಿಜಯನಗರ ಚಕ್ರವರ್ತಿಯೊಡನೆ ವ್ಯಾಪಾರ ಒಪ್ಪಂದ ಮಾಡಿಕೊಂಡರು.[೭] ಈ ಒಪ್ಪಂದದಿಂದಾಗಿ ಪೋರ್ತುಗೀಸರು ಶೀಘ್ರದಲ್ಲಿ ಇಲ್ಲಿನ ವ್ಯಾಪಾರ ವಹಿವಾಟುಗಳಲ್ಲಿ ನಿಯಂತ್ರಣ ಹೊಂದಿದರು. ಇಷ್ಟಲ್ಲದೆ ಇವರ ದರೋಡೆ ವ್ಯಾಪಾರಕ್ಕೆ ಕಾನೂನು ಸಮ್ಮತಿ ಸಿಕ್ಕಿದಂತಾಯಿತು. ಈ ದರೋಡೆ ವ್ಯಾಪಾರದಿಂದ ಕೂಡಿದ ಪೋರ್ತುಗೀಸರ ವ್ಯಾಪಾರದ ಬಿಸಿ ಅಬ್ಬಕ್ಕಳ ರಾಜಕೀಯ ಕೇಂದ್ರವಾಗಿದ್ದ ಉಳ್ಳಾಲಕ್ಕೂ ತಟ್ಟಿತು. ಅಬ್ಬಕ್ಕ ದೇವಿಯ ಆಳ್ವಿಕೆಯ ಮಧ್ಯಕಾಲದ ಅವಧಿಯಲ್ಲಿ ಇನ್ನೊಂದು ರಾಜಕೀಯ ಘಟನೆ ಉಂಟಾಯಿತು. ಇದೇ ರಕ್ಕಸತಂಗಡಿಯ ಕದನ. ಇದು ಕ್ರಿ.ಶ. ೧೫೬೫ರಲ್ಲಿ ನಡೆದು ಈ ಕದನದಲ್ಲಿ ದಕ್ಷಿಣದ ನಾಲ್ಕು ಸುಲ್ತಾನರು ವಿಜಯನಗರದ ಸೈನ್ಯವನ್ನು ಸೋಲಿಸಿದ್ದರು. ಇದರ ಪರಿಣಾಮವಾಗಿ ಕರಾವಳಿ ಕರ್ನಾಟಕದಲ್ಲಿ ವಿಜಯನಗರದ ವರ್ಚಸ್ಸು ಮತ್ತು ಪ್ರಭಾವ ಇಳಿಮುಖವಾಯಿತು. ಇದರ ಲಾಭ ಪಡೆದು ದಕ್ಷಿಣಕನ್ನಡದಲ್ಲಿ ಆಳಿಕೊಂಡಿದ್ದ ಆಶ್ರಿತ ಅರಸು ಮನೆತನದವರು ತಮ್ಮ - ತಮ್ಮೊಳಗೆ ಕಾದಾಡಿಕೊಂಡು ಇಲ್ಲಿನ ರಾಜಕೀಯ

---

೫. Historia do Discobrimento, I Conquista Do India Peilos (Hisotry of the Discovery and conquest of India by the Portuguese) ನೋಡಿ ಬಿ. ಎಸ್. ಶಾಸ್ತ್ರಿ Studies in indo Portuguese History ಪು. ೫೪. ಕೈಸ್ಪೆಂಡಹ್ ವಿಜಯನಗರ ಅರಸ ಕೃಷ್ಣದೇವರಾಯನ ಸಮಕಲೀನನು. ಇವನು ಕ್ರಿ.ಶ. ೧೫೨೮ರಲ್ಲಿ ಗೋವಾಕ್ಕೆ ಬಂದು ಪೋರ್ತುಗೀಸರು ಭಾರತದಲ್ಲಿ ನಡೆಸಿದ ಚಟುವಟಿಕೆಗಳ ಆಕರಗಳನ್ನು ಸಂಗ್ರಹಿಸಿ, ಇವುಗಳನ್ನು ಉತ್ತಮ ರೀತಿಯಲ್ಲಿ ವಿಮರ್ಶಿಸಿ ತನ್ನದೇ ಆದ ರೀತಿಯಲ್ಲಿ ಟಿಪ್ಪಣಿ ನೀಡಿದ್ದಾರೆ. ಇವುಗಳನ್ನು ಸಂಗ್ರಹಿಸಿ ಬರೆಯಲು ಹೆಚ್ಚು ಕಡಿಮೆ ಹತ್ತು ವರ್ಷ ಶ್ರಮಿಸಿದ್ದರು. ಇವನು ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ಎಷ್ಟು ಸಮದೃಷ್ಟಿ ಇದ್ದಿತ್ತೆಂದರೆ ಇವುಗಳನ್ನು ಪ್ರಕಟಿಸದಂತೆ ಪೋರ್ತುಗೀಸ್ ಸರಕಾರ ನಿಷೇಧ ಹಾಕಿತು. ಕೆಸ್ಟೆಂಡಹ್ ಕರಾವಳಿ ಕರ್ನಾಟಕದ (Topography) ಸರಿಯಾಗಿ ತಿಳಿದುಕೊಂಡಿದ್ದಾನೆ.

೬. ಇವರಿಬ್ಬರ ಗ್ರಂಥ Nume3 : Book of Weights and Measure and Coins Simao Bothelo Tomlo De Estado da India (The Inventory of the State in State in India ಈ ಎರಡು ಗ್ರಂಥಗಳು 1554 ಬರೆದುದಾಗಿದೆ. ಇವರ ಗ್ರಂಥಗಳು ಪೋರ್ತುಗೀಸರು ಕರಾವಳಿಯಲ್ಲಿ ಕ್ರಿ.ಶ. ೧೫೫೪ರ ವರೆಗೆ ನಡೆಸಿದ ಚಟುವಟಿಕೆಗಳನ್ನು ನಿಷ್ಪಕ್ಷಪಾತ ರೀತಿಯಲ್ಲಿ ವಿವರಿಸುತ್ತವೆ. ಹೆಚ್ಚಿನ ವಿವರ ಶಾಸ್ತ್ರಿ ಬಿ. ಎಸ್. The Portuguese sources on Karnataka History ಮಿ.ಸೋ. 1981 ಪು. 58 Kanara (1884) II ಪು 144.

ಭದ್ರತೆಯನ್ನು ಭಂಗಪಡಿಸಿದರು. ಇದೂ, ಅಬ್ಬಕ್ಕಳ ರಾಜಕೀಯ ಚಟುವಟಿಕೆಗಳ ಮೇಲೆ ಪರಿಣಾಮವನ್ನುಂಟು ಮಾಡಿತು. ಪೊರ್ತುಗೀಸರು ಯಾವ ಹೆದರಿಕೆಯೂ ಇಲ್ಲದೆ ತಮ್ಮ ಲೂಟಿವ್ಯಾಪಾರ ಕ್ರಮವನ್ನು ಕೈಕೊಂಡರು. ಈ ಎಲ್ಲಾ ರಾಜಕೀಯ ಪರಿಸ್ಥಿತಿಗಳು ಅಬ್ಬಕ್ಕಳ ರಾಜಕೀಯ ವ್ಯಕ್ತಿತ್ವ ನಿರ್ಣಯಿಸುವಲ್ಲಿ ಮುಖ್ಯ ಪಾತ್ರ ವಹಿಸಿದವು.

ಅಬ್ಬಕ್ಕ -ಪೋರ್ತುಗೀಸ್‌ರ ಒಂದನೆಯ ಯುದ್ಧ : ೧೫೫೬

ಹಿರಿಯ ಅಬ್ಬಕ್ಕಳ ಅತ್ಯಂತ ಪ್ರಮುಖ ಸಾಧನೆಯೆಂದರೆ ಧೈರ್ಯವಾಗಿ ಪೋರ್ತುಗೀಸರ ದುಂಡಾವರ್ತಿಯನ್ನು ಎದುರಿಸಿದ್ದು. ಇವಳು ಪ್ರಥಮವಾಗಿ ಪೋರ್ತುಗೀಸರೊಡನೆ ಘರ್ಷಣೆಗೆ ಬಂದದ್ದು ಕ್ರಿ.ಶ. ೧೫೫೬ರಲ್ಲಿ. ಈ ಹಿಂದಿನ ವರ್ಷದ ಪೋರ್ತುಗೀಸರ ದಾಖಲೆಯಂತೆ ಈ ರಾಣಿಯು ಉಳ್ಳಾಲದಲ್ಲಿ ಅಭೇದ್ಯವಾದ ಕೋಟೆ ರಚಿಸಿ ಇದರ ಮೇಲೆ ಫಿರಂಗಿಗಳನ್ನು ಇಟ್ಟಿದ್ದಳು. ಇದನ್ನು ಮಂಗಳೂರಿನಲ್ಲಿದ್ದ ಪೋರ್ತುಗೀಸರು ಸಹಿಸಲಿಲ್ಲ. ವಾರ್ಷಿಕವಾಗಿ ಇವರಿಗೆ ಈ ಹಿಂದೆ ಸಲ್ಲಿಸುತ್ತಿದ್ದ ಕಪ್ಪ ಕಾಣಿಕೆಗಳನ್ನು ಕೊಡಲು ಈ ರಾಣಿಯು ನಿರಾಕರಿಸಿದಳು. ತನ್ನ ರಾಜ್ಯದಲ್ಲಿ ಬೆಳೆಯುವ ಆಹಾರ ಸಾಮಗ್ರಿಗಳನ್ನು ಪೋರ್ತುಗೀಸರು ಹೇಳಿದ ಕ್ರಯಕ್ಕೆ ಮಾರಬೇಕೆಂಬ ಕರಾರನ್ನು ಇವಳು ಧಿಕ್ಕರಿಸಿದಳು. ಆದರೆ ಇವಳ ಈ ಸ್ವಾಭಿಮಾನದ ಕ್ರಮಗಳಿಗೆ ಅಕ್ಕಪಕ್ಕದ ರಾಜರು ಸಹಕರಿಸಲಿಲ್ಲ. ಕುಪಿತರಾದ ಪೋರ್ತುಗೀಸರು ಉಳ್ಳಾಲ ಕೋಟೆಯನ್ನು ನಾಶಮಾಡುವಂತೆಯೂ, ವಾರ್ಷಿಕ ಕಪ್ಪಕಾಣಿಕೆಗಳನ್ನು ಸಲ್ಲಿಸುವಂತೆಯೂ ಎಚ್ಚರಿಕೆಯನ್ನು ಈ ರಾಣಿಗೆ ಕೊಟ್ಟರು. ಆದರೆ ಇವಳು ಇದನ್ನು ಧಿಕ್ಕರಿಸಿದಳು. ಇದರ ಪರಿಣಾಮವಾಗಿ ಅಬ್ಬಕ್ಕಳಿಗೂ ಪೋರ್ತುಗೀಸರಿಗೂ ಯುದ್ಧವಾಯಿತು.[೭] ಗೋವೆಯಲ್ಲಿದ್ದ ಪೋರ್ತುಗೀಸರು ಡಾಂ ಅಲವಾರೊ ಡಾ. ಸಿಲ್ವೇರ (Dom Alvaro Da silveria) ನೇತೃತ್ವದಲ್ಲಿ ೨೧ ನೌಕೆಗಳನ್ನು ಉಳ್ಳಾಲಕ್ಕೆ ಕಳುಹಿಸಿದರು. ಈ ನೌಕೆಗಳು ಅಬ್ಬಕ್ಕಳ ರಾಜ್ಯದ ಮೇಲೆ ಕ್ರೂರ ರೀತಿಯಲ್ಲಿ ದಾಳಿ ಮಾಡಿದುವು. ಈ ನೌಕಾ ಸೈನ್ಯದ ದಾಳಿಗೆ ಮಂಗಳೂರು ಬಲಿಯಾಯಿತು.[೮] (Sic ಉಳ್ಳಾಲ) ಅವರು ಊರನ್ನು ಸುಟ್ಟು ಹಾಕಿದರು. ಇಲ್ಲಿರುವ ಹಲವಾರು ಮುಗ್ಧ ಜನರನ್ನು ನಿರ್ದಾಕ್ಷಿಣವಾಗಿ ಕೊಂದು

---

೭. ಹರಾಸ್ - ಅದೇ ಗ್ರಂಥ ಪು. ೬೩ ಎ.

೮. ಹೆರಾಸ್ ಅದೇ ಗ್ರಂಥವು ೧೮೯ ಮೊರೈಯಿಸ್ (Marais GM), Mangalore ಪು. ೭.

೯. ಹೆರಾಸ್ ಮತ್ತು ಇವರ ಶಿಷ್ಯ ಮೊರೈಯಿಸ್ ಕ್ರಿ.ಶ. ೧೫೫೬ರ ಪೋರ್ತುಗೀಸರ ದಾಳಿ ಮಂಗಳೂರಿನಲ್ಲಿ ಆಯಿತು ಎಂದು ತಪ್ಪಾಗಿ ತಿಳಿಸಿದ್ದಾರೆ. ಆದರೆ ಪೋರ್ತುಗೀಸ ದಾಖಲೆಯು ಮಂಗಳೂರು ಸಮೀಪದಲ್ಲಿ ದಾಳಿ ನಡೆಸಿದ್ದೇವೆ ಎಂದು ತಿಳಿಸಿದೆ. ಮಂಗಳೂರು ಸಮೀಪ ಉಳ್ಳಾಲವಿದ್ದುದರಿಂದ ದಾಳಿಗೆ ತುತ್ತಾದದ್ದು ಉಳ್ಳಾಲವೇ. ಮಂಗಳೂರು ಅಬ್ಬಕ್ಕಳ ರಾಜ್ಯದ ಹೊರಗೆ ಇತ್ತು.

ಹಾಕಿದರು. ಅತ್ಯಂತ ಶ್ರೀಮಂತ ದೇವಾಲಯವನ್ನು (ಉಳ್ಳಾಲ ಸೋಮೇಶ್ವರ)[೧೦] ಪುಡಿಗೈಯಲು ಆರಂಭಿಸಿದರು. ಆದರೆ ಇದನ್ನು ಅಬ್ಬಕ್ಕಳ ಸೈನ್ಯದಲ್ಲಿದ ನಾಯಕನು ತಡೆಹಿಡಿದನು. ಮುನ್ನುಗ್ಗಿ ಬರುತ್ತಿದ್ದ ಪೋರ್ತುಗೀಸರ ಸೈನ್ಯವನ್ನು ಅಲ್ಲಲ್ಲಿ ಎದುರಿಸಿ ಅವರಿಗೆ ಅಲ್ಲಲ್ಲಿ ಹೊಡೆತವನ್ನು ಕೊಟ್ಟರು. ಅಂತ್ಯದಲ್ಲಿ ಈ ನಾಯಕರು ಪೋರ್ತುಗೀಸರೊಡನೆ ಹೋರಾಡುತ್ತಾ ಅಸುನೀಗಿದರು. ಇನ್ನು ಹೆಚ್ಚಿನ ಅನಾಹುತಗಳು ಆಗದಂತೆ ಕಲ್ಲಿಕೋಟೆಯರಸ ಜಾಮೋರಿನ್‌ನು ಮಧ್ಯಸ್ಥಿಕೆ ವಹಿಸಿ ವಳ್ಳಾಲದ ಅಬ್ಬಕ್ಕಳಿಗೂ ಪೋರ್ತುಗೀಸರಿಗೂ ಒಪ್ಪಂದ ಮಾಡಿಸಿದನು. ಈ ಒಪ್ಪಂದದಂತೆ ನಿರ್ದಿಷ್ಟ ಪ್ರಮಾಣದಲ್ಲಿ ಸುಂಕವನ್ನು ಪೋರ್ತುಗೀಸರಿಗೆ ಕೊಡಲು ಈ ರಾಣಿ ಒಪ್ಪಬೇಕಾಗಿ ಬಂತು. ನಂತರ ಈ ರಾಣಿಯು ಉಳ್ಳಾಲ ದೇವಸ್ಥಾನದ ಜೀರ್ಣೋದ್ಧಾರ ಮಾಡಿ ಸತ್ತ ನಾಯಕನ ಸ್ಮರಣೆಗಾಗಿ ವೀರಗಲ್ಲನ್ನು ಕೆತ್ತಿ ಈ ದೇವಾಲಯದ ಮುಂಬಾಗಿನಲ್ಲಿ ನೆಟ್ಟಳು. ಈ ಕದನದಲ್ಲಿ ರಾಣಿ ಕಪ್ಪ ಕೊಡಬೇಕಾಗಿ ಬಂದರೂ, ಪೋರ್ತುಗೀಸ್ ಇತಿಹಾಸಕಾರ ಪರಿಯಾಸೋಣ ಈ ರಾಣಿ ಈ ಯುದ್ಧದಲ್ಲಿ ತೋರಿಸಿದ ಶೌರ್ಯವನ್ನು ಬಹಳ ಕೊಂಡಾಡಿದ್ದಾನೆ.[೧೧]

ಅಬ್ಬಕ್ಕ ಪೋರ್ತುಗೀಸರ ಎರಡನೇ ಯುದ್ಧ : ೧೫೫೮

ಈ ಘಟನೆಯಾದ ಎರಡೇ ವರ್ಷಗಳಲ್ಲಿ ಕ್ರಿ.ಶ. ೧೫೫೮ರಲ್ಲಿ ಅಬ್ಬಕ್ಕದೇವಿ ಇನ್ನೊಮ್ಮೆ ಪೋರ್ತುಗೀಸರೊಡನೆ ಘರ್ಷಣೆಗೆ ಬಂದದ್ದನ್ನು ಪೋರ್ತುಗೀಸ್ ಇತಿಹಾಸಕಾರ ಕುಟೋ ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ರಾಣಿ ಅಬ್ಬಕ್ಕಳು ಪೋರ್ತುಗೀಸರ ವಿರೋಧಿಯಾಗಿದ್ದ ಮುಲಬಾರಿನ ನೌಕೆಗೆ ಆಶ್ರಯ ಕೊಟ್ಟದ್ದು ಈ ಘರ್ಷಣೆಗೆ ಕಾರಣ. ಇಷ್ಟಲ್ಲದೆ ಇವಳು ತನ್ನ ರಾಜ್ಯದ ವ್ಯಾಪಾರ ವಹಿವಾಟುಗಳನ್ನು ಸ್ವತಂತ್ರವಾಗಿ ನಡೆಸುತ್ತಿದ್ದುದು ಈ ವಿದೇಶಿ ವರ್ತಕರಿಗೆ ಒಂದು ದೊಡ್ಡ ಸವಾಲು ಆಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಗೋವಾದ ಪೋರ್ತುಗೀಸ್ ಅಧಿಕಾರಿಗಳು ಲೂಯಿಷ ಡಿಮೆಲ್ಲೊ (Levis De mello) ನೇತೃತ್ವದಲ್ಲಿ ಯುದ್ಧ ನೌಕೆಗಳನ್ನು ಉಳ್ಳಾಲದ ಕಡೆಗೆ ಕಳುಹಿಸಿದರು. ರಾಣಿ ಅಬ್ಬಕ್ಕ ಪೋರ್ತುಗೀಸರ ಲೂಟಿಯ ಆಕ್ರಮಣವನ್ನು ಕೆಚ್ಚೆದೆಯಿಂದ ಎದುರಿಸಿದಳು. ಅವರ ಯುದ್ಧ ನೌಕೆ ಮುಂದೆ ಹೋಗದಂತೆ ಇವಳ ಸೈನಿಕರು ಅಲ್ಲಲ್ಲಿ ತಡೆಗಟ್ಟಿ ತೊಂದರೆಗಳನ್ನು ಕೊಟ್ಟರು. ಈ ಕಾರ್ಯಕ್ಕೆ ಇಲ್ಲಿನ ಅರಬಿ ಮೂರರು, ಮಲಬಾರಿನ ಮಾಪಿಳ್ಳೆಯವರು ಬೆಸ್ತರು ಮತ್ತು ಮೊಗೇರರು

---

೧೦. ದೇವಾಲಯ ಚೌಟರಸ ಕುಲದೇವತೆ. ಇದರ ಉಲ್ಲೇಖ ೧೧೧೭ರ ತ್ರಿಶಕ ಇಲ್ಲಿರುವ ಶಿಲಾಶಾಸನದಲ್ಲಿದೆ. ಇದು ೧೪೪೩ರಲ್ಲಿ ಜೀರ್ಣೋದ್ಧಾರವಾಯಿತೆಂದು ಇಲ್ಲಿರುವ ಇನ್ನೊಂದು ಶಾಸನವು ತಿಳಿಸುತ್ತದೆ. ನೋಡಿ APSHE 1929 Nos 467 - 468

೧೧. Asia Portuguesa II ಪು ೩೧೧-೨

ಬಹಳ ಸಹಕರಿಸಿದ್ದರು. ಈ ಪ್ರಶ್ಯಾಘಾತವನ್ನು ನೋಡಿದ ಡಿಮೆಲ್ಲೊ ಸಿಟ್ಟುಗೊಂಡು ಉಳ್ಳಾಲದ ಮೇಲೆ ತೀವ್ರ ರೀತಿಯ ದಾಳಿ ಮಾಡಿ, ನಗರಕ್ಕೆ ಬೆಂಕಿ ಇಟ್ಟು ಕೈಗೆ ಸಿಕ್ಕಿದ ಜನರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆ ಮಾಡಿ ಮತ್ತು ಕೆಲವು ಹಡಗುಗಳಿಗೆ ಬೆಂಕಿ ಇಟ್ಟಿದ್ದನ್ನು ಕುಟೊ ಮತ್ತು ಪೆರಿಯಾಸೋಜಾ ಸವಿವರವಾಗಿ ವರ್ಣಿಸಿದ್ದಾರೆ. ಈ ಸಂಗ್ರಾಮದಲ್ಲಿ ರಾಣಿ ಅಬ್ಬಕ್ಕದೇವಿಯು ವ್ಯಕ್ತಪಡಿಸಿದ ಯುದ್ಧ ಕೌಶಲಗಳು ಪೋರ್ತುಗೀಸರಿಗೆ ದಂಗುಪಡಿಸಿತ್ತೆಂದು ಇತಿಹಾಸಕಾರರ ಬರಹಗಳಿಂದ ತಿಳಿದುಬರುತ್ತದೆ.[೧೨] ಈ ಸಮರ ಒಂದು ರೀತಿಯ ಒಪ್ಪಂದದಲ್ಲಿ ಅಂತ್ಯವಾಯಿತು.

ಅಬ್ಬಕ್ಕ ಪೋರ್ತುಗೀಸರ ಮೂರನೇ ಯುದ್ಧ : ೧೫೬೭

ಅಬ್ಬಕ್ಕಳು ಇನ್ನೊಮ್ಮೆ ಪೋರ್ತುಗೀಸರೊಡನೆ ಘರ್ಷಣೆಗೆ ಬಂದದ್ದು ಕ್ರಿ.ಶ. ೧೫೯೭ರಲ್ಲಿ ಎಂದು ಪೋರ್ತುಗೀಸ್ ದಾಖಲೆಯು ತಿಳಿಸುತ್ತದೆ. ಈ ಘರ್ಷಣೆಗೆ ಮುಖ್ಯ ಕಾರಣ ಈ ರಾಣಿಯು ಪೋರ್ತುಗೀಸರಿಗೆ ಸಲ್ಲಿಸುತ್ತಿದ್ದ ಕಪ್ಪ ಕಾಣಿಕೆಗಳನ್ನು ನಿಲ್ಲಿಸಿದ್ದು. ಹಿಂದಿನ ಯುದ್ಧದಲ್ಲಿ ಫಿರಂಗಿಗಳು ನಾಶ ಮಾಡಿದ್ದ ಕೋಟೆಯನ್ನು ಆಕೆ ಮತ್ತೆ ಕಟ್ಟಿದಳು. ಇದರ ಮೇಲೆ ಫಿರಂಗಿಗಳನ್ನು ಈ ರಾಣಿಯು ಇರಿಸಿದಳು. ಕಲ್ಲಿಕೋಟೆ ದೊರೆ ಜಾಮೋರಿನ್ ಸಂಗಡ ಸ್ನೇಹ ಬೆಳೆಸಿ ಅವನ ಹಡಗುಗಳ ಜೊತೆ ಪರ್ಶಿಯಾ, ಅರೇಬಿಯಾ ಮತ್ತು ಕೆಲವು ಸಮುದ್ರದ ಕಡೆ ತನ್ನ ನಾಡಿನ ಅಕ್ಕಿ, ಮೆಣಸು, ಬಟ್ಟೆ, ಯಾಲಕ್ಕಿ ತುಂಬಿದ್ದ ತನ್ನ ಹಡಗುಗಳನ್ನು ಕಳುಹಿಸಿದಳು. ಇದಕ್ಕೆ ಇವರು ಪೋರ್ತುಗೀಸರ ಪರವಾನೆ ಪತ್ರಗಳನ್ನು (Cartas) ತೆಗೆದುಕೊಂಡಿರಲಿಲ್ಲ. ಈ ವ್ಯಾಪಾರ ಈ ರಾಣಿಗೆ ಹೆಚ್ಚಿನ ಲಾಭ ತಂದಿತು. ಇಷ್ಟಲ್ಲದೆ ಪೋರ್ತುಗೀಸರ ಕಡು ವೈರಿಯಾಗಿದ್ದ ಕಲ್ಲಿಕೋಟೆಯ ಜಾಮೋರಿನೊಡನೆ ಸ್ನೇಹಮಾಡಿ ಇವನ ನಾವಿಕ ಕುಞ್ಞಾಲಿಗೆ ಪ್ರತ್ಯಕ್ಷ ಸಹಾಯ ಮಾಡಿದ ಕಾರಣ ಅವನ ನೌಕೆ ಅಲಿಪೋಕರಿ ನೇತೃತ್ವದಲ್ಲಿ ಉಳ್ಳಾಲದ ಕಡೆಗೆ ಬಂತು.[೧೩] ಇದು ಪೋರ್ತುಗೀಸರಿಗೆ ಸರಿಬರಲಿಲ್ಲ. ಇದನ್ನು ಇವರ ೪.೧.೧೫೬೭ರ ಪತ್ರವು ಈ ರೀತಿ ತಿಳಿಸುತ್ತದೆ. ನಮಗೆ ಕೊಡುತ್ತಿದ್ದ ಕಪ್ಪವನ್ನು ನಿಲ್ಲಿಸಿದ್ದೀರಿ. ಅಲ್ಲದೆ ನಮ್ಮ ವಬ್ಬರಿ ಜಾಮೋರಿನ್ ದೊರೆಯೊಂದಿಗೆ ಸ್ನೇಹ ಮಾಡಿಕೊಂಡು ಪರ್ಶಿಯಾ ಜೊತೆ ವ್ಯಾಪಾರ ಮಾಡುತ್ತಿದ್ದೀರಿ. ಸಮುದ್ರದಲ್ಲಿ ನಿಮ್ಮ

---

೧೨. Couto Decada DA Asia IV Pall ಪು. ಪು. ೯೧ - Feriya Sousa - Asia Portuguese II ಪು ೩೦೧ - ೨೨೯ ಮೊರೈಯಿಸ್ - ಅದೆ ಗ್ರಂಥವು ಪು. ೭

೧. O.K. ನಂಬಿಯಾರ್ The Kunjalis Admials of Calicut (Bombay 1963) ವು ೧೧೪ ಕೆ.ಎಂ. ಪಣಿಕ್ಕರ್ Malabar and The Portuguess (ಎರಡನೆ ಮುದ್ರಣ ೧೯೯೭) ಪು. ೧೩೦, ೧೩೩.

ದೋಣಿಗಳು ಓಡಾಡಲು ನಮ್ಮ ಪರವಾನಗಿ ಪಡೆಯಬೇಕು. ಅಲ್ಲದೆ ಸಾಂಬಾರ ಪದಾರ್ಥಗಳ ವ್ಯಾಪಾರವನ್ನೆಲ್ಲಾ ನಮ್ಮ ಮುಖಾಂತರವೇ ಮಾಡಬೇಕು. ಇಷ್ಟು ವರ್ಷ ನಮಗೆ ಕೊಡದುದಕ್ಕೆ ದಂಡವಾಗಿ ನೀವು ಉಳ್ಳಾಲದಲ್ಲಿ ವಾಳಿಗೆ ಕೋಟೆ ಕಟ್ಟಿಕೊಳ್ಳಲು ನಮಗೆ ಅನುಮತಿಕೊಡಬೈಕು. ಈ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮುಂದಾಗುವ ಅನಾಹುತಗಳಿಗೆ ನಾವು ಹೊಣೆಗಾರರಲ್ಲ.[೧೪] ಆದರೆ ಅಬ್ಬಕ್ಕ ಪೋರ್ಚುಗೀಸರ ದೂರು ಮತ್ತು ತಗಾದೆಗಳನ್ನು ನಿರಾಕರಿಸಿದಳೆಂದು ವೈಸರಾಯ್ ಸ್ಪೈನ್ನ ಅರಸನಿಗೆ ಬರೆದ ಪತ್ರದಿಂದ ತಿಳಿದುಬರುತ್ತದೆ.

ಇವಳನ್ನು ಶಿಕ್ಷಿಸಲು ಪೋರ್ತುಗೀಸರು ಅಂಥೋಡಿ ನರೊನ್ಹಾ (Antho D Narohna) ಜಾವೊ ಪಿಕ್ಸಿವೊಟೊ (Peixolo) ನೇತೃತ್ವದಲ್ಲಿ ನೌಕೆಯನ್ನು ಕಳುಹಿಸಿದರು.[೧೫] ಇದಕ್ಕೆ ಅಬ್ಬಕ್ಕ ಜಗ್ಗಲಿಲ್ಲ. ಉಳ್ಳಾಲದ ಕಡೆಗೆ ಬಂದ ಪೋರ್ತುಗೀಸ್ ನೌಕೆಯನ್ನು ಆಕೆ ಯಶಸ್ವಿಯಾಗಿ ಅಡ್ಡಗಟ್ಟಿದಳು. ಆಗ ನಡೆದ ಕದನದಲ್ಲಿ ಪೋರ್ತುಗೀಸ್ ಮುಖ್ಯ ಸೇನಾಧಿಕಾರಿ ಪಿಕ್ಸಿವೊಟೊ ರಾಣಿಯ ಸೈನಿಕರಿಂದ ಕೊಲ್ಲಲ್ಪಟ್ಟ. ಬಾಕಿ ಉಳಿದ ಪೋರ್ತುಗೀಸರು ಹಡಗು ದಾರಿಯಲ್ಲಿ ಪಲಾಯನ ಮಾಡಿದರು.[೧೬] ಇದನ್ನು ತಿಳಿದ ಗೋವೆಯ ವೈಸರಾಯ ನರೋನ್ಹಾ ದಿಟ್ಟ ರಾಣಿಯನ್ನು ಶಿಕ್ಷಿಸಲು ಬಲುದೊಡ್ಡ ಹಡಗು ಮತ್ತು ಇಪ್ಪತ್ತು ಚಿಕ್ಕ ಹಡಗುಗಳೊಂದಿಗೆ ಉಳ್ಳಾಲಕ್ಕೆ ಧಾವಿಸಿ ಬಂದ. ಇವುಗಳಲ್ಲಿ ೩೦೦ ಸೈನಿಕರು ಇದ್ದರು ಮತ್ತು ಮದ್ದು ಗುಂಡುಗಳು ಇದ್ದುವು. ಇದಕ್ಕೆ ಈ ರಾಣಿ ಹೆದರಲಿಲ್ಲ. ತನ್ನಲ್ಲಿರುವ ಮದ್ದು ಗುಂಡುಗಳೊಂದಿಗೆ ಅಬ್ಬಕ್ಕ ತನ್ನ ನಗರವನ್ನು ರಕ್ಷಿಸಿಕೊಳ್ಳುತ್ತಿದಳೆಂದು ಪೋರ್ತುಗೀಸರ ಬರಹಗಳಲ್ಲಿ ತಿಳಿಸಿದೆ. ಉದಾ : ಉಳ್ಳಾಲ ನದಿಯಿಂದ ಸಮುದ್ರಕ್ಕೆ ಹೋಗುವ ಮಾರ್ಗವನ್ನು ಇವಳು ತಡೆಗಟ್ಟಿದಳು. ಇದರಿಂದ ಬಂದಿಳಿದ ಪೋರ್ತುಗೀಸ ಸೈನಿಕರು ದಿಗ್ಬಂಧನಕ್ಕೆ ಒಳಗಾದರು. ನಂತರ ನಡೆದ ಕದನದ ವಿವರಗಳನ್ನು ಸಮಕಾಲೀನ ಇತಿಹಾಸಕಾರ ಫಾದರ್ ಫ್ರಾನ್ಸಿಸ್‌ಕೊ ಡಿ'ಸೋಜಾ (Francisco D'souza) ತನ್ನ ಗ್ರಂಥದಲ್ಲಿ ಹೇಳಿದ್ದನ್ನು ಇಲ್ಲಿ ಗಮನಿಸುವ ಅವಶ್ಯಕತೆ ಇದೆ. ಮಧ್ಯರಾತ್ರಿಯಲ್ಲಿ ಅಬ್ಬಕ್ಕಳ ಸೈನಿಕರು ತಕ್ಷಣ ಪೋರ್ತುಗೀಸ್ ನಾವೆಗಳ ಮೇಲೆ ಆಕ್ರಮಣ ಮಾಡಿ ಅಲ್ಲಿದ್ದ ಸೈನಿಕರಿಗೆ ಗಲಿಬಿಲಿಯನ್ನುಂಟು ಮಾಡಿದರು.

---

೧೪ ಈ ಪತ್ರವನ್ನು ಉಳ್ಳಾಲ ರಾಣಿಗೆ ಗೋವೆಯ ವೈಸರಾಯ ಬರೆದಿದ್ದನೆಂದು ಇವನು ಸ್ಪೆನ್ (Spain) ಅರಸನಿಗೆ ತಿಳಿಸಿದ್ದಾನೆ. (ಫೆಬ್ರವರಿ ತಿಂಗಳಲ್ಲಿ ಬರೆದದ್ದು) ಆದರೆ ಈ ಪತ್ರದ ಅಸಲು ಪ್ರತಿ ಇನ್ನೂ ದೊರಕಿಲ್ಲ. ಆದರೆ ಈ ಪತ್ರವನ್ನು ಅನುಪಮ ನಿರಂಜನ ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ನೋಡಿ ದಿಟ್ಟೆ (ಮೈಸೂರು ೧೯೬೫) ಪು ೩೨.

೧೫ ಮೊರೈಯಿಸ್ G.M. ಅದೇ ಗ್ರಂಥ ಪು. ೮

೧೬ ಅದೇ.

ಸೈನಿಕರು ಕತ್ತಲೆ ಮರೆಯಲ್ಲಿ ತೆಂಗಿನಗರಿಯ ಸೂಟೆ ಎಂಬ ದೀವಟಿಕೆಗಳನ್ನು (Torches) ಉರಿಸಿ ಅವುಗಳನ್ನು ಹಡಗಿನ ಮೇಲೆ ಎಸಿದರು. ಇದರಿಂದಾಗಿ ಪೋರ್ತುಗೀಸರ ಕೆಲವು ಹಡಗುಗಳು ಸುಟ್ಟು ಭಸ್ಮವಾದುವು. ಪಾನಮತ್ತರಾದ ಪೋರ್ತುಗೀಸ್ ಸೈನಿಕರ ಮೇಲೆ ಉಳ್ಳಾಲದ ಸೈನ್ಯ ದಾಳಿ ಮಾಡಿತು. ಇದರ ಪರಿಣಾಮವಾಗಿ ಪೋರ್ತುಗೀಸ್ ಸೈನ್ಯ ತತ್ತರಿಸಿ ಹೋಯಿತು. ಉಳ್ಳಾಲದ ದಂಡಿನ ಹೊಡೆತಕ್ಕೆ ನೂರಾರು ಜನ ಪೋರ್ತುಗೀಸರು ಸತ್ತರು. ಗಾಯಗೊಂಡರು; ಉಳಿದವರು ಪಲಾಯನ ಮಾಡಿದರು. ಗಾಬರಿಗೊಂಡ ಪೋರ್ತುಗೀಸ ಸೈನಿಕರು ಕಂಡಕಂಡಲ್ಲಿ ಗುಂಡು ಹಾರಿಸಿ ವಜ್ಯರಿಗಳು ಯಾರೆಂದು ತಿಳಿಯದೆ ತಮ್ಮವರನ್ನೆ ಕೊಂದರು. ನಂತರ ನಡೆದ ಯುದ್ಧದಲ್ಲಿ ರಾಣಿಯು ಗಂಡುಡಿಗೆ ಧರಿಸಿ ಎದೆ ಕವಚ ಹಾಕಿ ಬಿಳಿಯ ಕುದುರೆ ಮೇಲೆ ಕುಳಿತು ಯುದ್ಧವನ್ನು ನಿರ್ದೇಶಿಸುತ್ತಿದ್ದಳು. ಇದು ಪೋರ್ತುಗೀಸರಿಗೆ ಇನ್ನಷ್ಟು ಕಳವಳವನ್ನುಂಟು ಮಾಡಿತು. ಆದರೆ ಸಮಕಾಲೀನ ಪೋರ್ತುಗೀಸ್ ಇತಿಹಾಸಕಾರರು ಮುಖ್ಯವಾಗಿ ಕೂಟೊ ಮತ್ತು ಫ್ರಾನ್ಸಿಕೊ ಈ ರಾಣಿಯ ಯುದ್ಧ ವರ್ತನೆಯನ್ನು ಬಹಳವಾಗಿ ಮೆಚ್ಚಿಕೊಂಡರು. ಇವಳ ಸೈನ್ಯದಲ್ಲಿ ಮಲಬಾರಿನ ಮಾಪಿಳ್ಳೆಗಳು (೬೦೦೦), ಇಲ್ಲಿನ ಮೊಗವೀರರು, ಬಿಲ್ಲವರು ಮತ್ತು ಬಂಟರು ಇದ್ದು ಇವರೆಲ್ಲಾ ಒಂದಾಗಿ ಪೋರ್ತುಗೀಸ್ ಆಕ್ರಮಣವನ್ನು ಎದುರಿಸಿದರು. ಈ ತನ್ಮಧ್ಯೆ ಓಡುತ್ತಿರುವ ಸೈನಿಕರನ್ನು ಪೋರ್ತುಗೀಸ್ ಅಧಿಕಾರಿ ಒಟ್ಟುಗೂಡಿಸಿ ತನ್ನ ಪ್ರಾಣ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ನಂತರ ಪೋರ್ತುಗೀಸರ ಹೊಸ ಸೈನಿಕ ಪಡೆದ ಉಳ್ಳಾಲ ಕಡೆ ಧಾವಿಸಿ ಬಂತು. ಈ ರಾಣಿ ಇದನ್ನು ಧೈರ್ಯದಿಂದ ತಡೆಹಿಡಿದು ವೀರಾವೇಶದಿಂದ ಹೋರಾಡಿದಳು. ಕಾಳಗ ಎರಡು ದಿವಸಗಳವರೆಗೆ ನಡೆಯಿತು. ಪೋರ್ತುಗೀಸರು ಬಂದೂಕುಗಳನ್ನು ಬಳಸಿ ಕಂಡ ಕಂಡವರನ್ನು ಸುಟ್ಟರು. ಊರಿಗೆ ಬೆಂಕಿ ಇಟ್ಟರು. ಇವರು ಇಲ್ಲಿ ಕ್ರೂರ ರೀತಿಯ ಹಿಂಸೆಯನ್ನು ಕೈಗೊಂಡರು. ಈ ನಡುವೆ ಉಳ್ಳಾಲದ ಕ್ರೈಸ್ತ ಜ್ಯಸಿಟೂಯ (Jesuit) ಪಾದ್ರಿಗಳು (Fathers) ಪಾ ಜಾಯೊ ಫ್ರಾನ್ಸಿಕೊ ಎಸ್ಪೆಪೆನಿಯ ಶಿಲುಬೆ ಹಿಡಿದು ಪೋರ್ತುಗೀಸ್ ಸೈನಿಕರಿಗೆ ಯುದ್ಧ ನಡೆಸುವಂತೆ ಪ್ರೋತ್ಸಾಹಿಸುತ್ತಿದ್ದರು.[೧೭] ಸ್ಥಳೀಯ ವರ್ತಕರು ಪೋರ್ತುಗೀಸರಿಗೆ ಹೆದರಿ ಈ ಯುದ್ಧದಲ್ಲಿ ತಟಸ್ಥರಾಗಿ ಕುಳಿತರು. ಈ ಎಲ್ಲಾ ಆಕಸ್ಮಿಕ ಘಟನೆಗಳನ್ನು ತಪ್ಪಿಸಿಕೊಳ್ಳಲು ರಾಣಿ ಸೈನಿಕರೊಂದಿಗೆ ಗುಡ್ಡ ಬೆಟ್ಟಗಳಲ್ಲಿ ತಲೆಮರೆಸಿ ಅವಿತುಕೊಂಡಳೆಂದು ಪೋರ್ತುಗೀಸ್[೧೮] ಆಕರಗಳಲ್ಲಿ ಹೇಳಿದೆಯಾದರೂ ತನ್ನ ಪ್ರಜೆಗಳ ಹಿತರಕ್ಷಣೆಯ ದಷ್ಟಿಯಿಂದ ಈ ರಾಣಿ ಪೋರ್ತುಗೀಸರೊಡನೆ ಒಂದು ಒಪ್ಪಂದಕ್ಕೆ ಬಂದಳೆಂಬ ಅಭಿಪ್ರಾಯವೂ ಇದೆ.[೧೯]

---

೧೭ ಸೋಜಾ ಫ್ರಾನ್ಸಿಕೊ - Orientel Conceistodo II ಪು ೧೮ ಇದೆ. ಇದೇ ಗ್ರಂಥ ಪು. ೧೯ ಮೊರ್ರೈಯಿಸ್ ಅದೇ ಗ್ರಂಥವು ೧೮-೧೯. ಪೆರಿಯಾಸೋಜಾ. ಅದೇ ಗ್ರಂಥ II ಪು. ೪೩೮ ಡಾನ್‌ವರ್ಸ್ - The Portuguese in India Voll ೩೩೨-೫೩೪.

ಅಬ್ಬಕ್ಕ - ಪೋರ್ತುಗೀಸ - ಬಂಗರಸ

ಅಬ್ಬಕ್ಕಳ ಇತಿಹಾಸ ತಿಳಿಯುವಲ್ಲಿ ಬರುವ ಇನ್ನೊಂದು ಸಮಸ್ಯೆ ಇವಳು ಮತ್ತು ಸ್ಥಳೀರು ರಾಜರುಗಳನ್ನು ಎದುರಿಸುತ್ತಿದ್ದರೆಂಬುದು ಕೆಲವು ಶಾಸನಗಳಲ್ಲಿ ವ್ಯಕ್ತವಾಗಿದೆ. ಆದರೆ ಅಬ್ಬಕ್ಕಳ ಆಳ್ವಿಕೆ ಕಾಲದಲ್ಲಿ ಬಂಗ ಮತ್ತು ಚೌಟರ ಸಂಬಂಧ ಕೆಡಲಿಕ್ಕೆ ಆರಂಭವಾಗಿ ಈ ಎರಡು ಅರಸುಮನೆತನಗಳೊಳಗೆ ಯುದ್ಧವಾಗುತ್ತಿದ್ದಿತ್ತೆಂದು ಮತ್ತು ಈ ಯುದ್ಧಗಳಲ್ಲಿ ಪೋರ್ತುಗೀಸರು ಮಧ್ಯ ಪ್ರವೇಶಿಸಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದರೆಂದು ಇವರ ಕೆಲವು ದಾಖಲೆಗಳು ಸೂಚಿಸುತ್ತವೆ.[೧೯] ಕೆಲವು ಪ್ರತೀತಿಯಂತೆ ಚೌಟ ಹಿರಿಯ ಅಬ್ಬಕ್ಕದೇವಿಯು ಬಂಗರಾಜನನ್ನು ವರಿಸಿದ್ದಳೆಂದೂ ಕೊನೆಗೆ ಇಬ್ಬರೊಳಗೆ ಕಲಹ ಉಂಟಾಗಿ ಈ ರಾಜ್ಯಗಳೊಳಗೆ ಯುದ್ಧವಾಯಿತೆಂದೂ ಹೇಳಲಾಗಿದೆ.[೨೦] ಆದರೆ ಸಮಕಾಲೀನ ದಾಖಲೆಗಳು ಹಿರಿಯ ಅಬ್ಬಕ್ಕದೇವಿಯು ಬಂಗರಾಜನನ್ನು ಮದುವೆಯಾದುದ್ದನ್ನು ತಿಳಿಸಲೇ ಇಲ್ಲ.

ಹಿರಿಯ ಅಬ್ಬಕ್ಕ - ಬಂಗರಸ

ಬಂಗರಸ ಮತ್ತು ತೌಟರಸರುಗಳ ರಾಜಕೀಯ ಸಂಬಂಧವು ಅಬ್ಬಕ್ಕದೇವಿಯು ಪಟ್ಟಕ್ಕೆ ಬರುವ ಪೂರ್ವದಲ್ಲಿ ಸಾಮಾನ್ಯವಾಗಿ ಮೈತ್ರಿಯುತವಾಗಿತ್ತೆಂದು ನಿಖರ ಐತಿಹಾಸಿಕ ದಾಖಲೆಗಳು ಸೂಚಿಸಿವೆ. ಈ ಎರಡು ಅರಸು ಮನೆತನದವರು ಕೂಡಿಕೊಂಡು ಹತ್ತಿರದಲ್ಲೇ ಇದ್ದ ಕಲಶ ಕಾರಕಳ ಅರಸುಗಳ ವಿರುದ್ಧ ಯುದ್ಧ ಮಾಡಿದ್ದನ್ನು ದಾಖಲೆಗಳು ನಮೂದಿಸಿದೆ. ಘರ್ಷಣೆಗಳು ಬಂದಾಗ ಇವುಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಈ ಇವರಿಬ್ಬರ ಮೈತ್ರಿ ಅಬ್ಬಕ್ಕದೇವಿಯ ಆಳ್ವಿಕೆಯ ಅವಧಿಯಲ್ಲಿ ಹದಗೆಟ್ಟು ವೈರತ್ವ ಹೊಂದಿ ಕೊನೆಗೆ ಇವರಿಬ್ಬರೊಳಗೆ ಯುದ್ಧವಾದುದನ್ನು ಪೋರ್ತುಗೀಸ್ ದಾಖಲೆಗಳು ಹೇಳಿದೆ.[೨೧] ಈ

---

೧೮ ಸೂರ್ಯನಾಥ ಕಾಮತ್ ಅಬ್ಬಕ ಪು ೧೧-15. ಈ ಯುದ್ಧದಲ್ಲಿ ಅಬ್ಬಕ್ಕದೇವಿಯು ಅಂತ್ಯವಾದಳೆಂಬ ಪ್ರತೀತಿ ಇದೆ. ನೋಡಿ ಕೆ. ವಿಶ್ವನಾಥ ರೈ - ಅದೇ ಗ್ರಂಥವು ಪು. ೩೫. ಆದರೆ ಇದು ನಂಬಲರ್ಹವಾಗಿಲ್ಲ. ಏಕೆಂದರೆ ಈ ರಾಣಿಯ ಉಲ್ಲೇಖವು ಶಾಸನಗಳು ಮತ್ತು ಪೋರ್ತುಗೀಸ್ ದಾಖಲೆಗಳಲ್ಲಿ ೧೫೮೮ರ ವರೆಗೆ ಇವೆ.

೧೯ ಡಾನವರ್ಸ್ ಅದೇ ಗ್ರಂಥ ಪು ೪೨೭ ಪೆರಿಯಾ ಸೋಜಾ ಅದೇ ಗ್ರಂಥ ಪು ೪೨೯ ಹೆರಾಸ ಅದೇ ಗ್ರಂಥ ಪು. ೨೯೮.

೨೦ ಕೆ. ವಿಶ್ವನಾಥ ರಬ್ಯ ಅದೇ ಗ್ರಂಥವು ೧೩ ಕಾಮತ್ ಅದೇ ಗ್ರಂಥ ಪು. ೧೬.

೨೧ ಶಾಸ್ತ್ರಿ ಬಿ. ಎಸ್. The Poruguese in Kanara ೬೨ ಡಾನ್‌ವರಸ್ -ಅದೇ ಗ್ರಂಥ Voll (1988 ಮುದ್ರಣ) ಪ್ರ. ೫೬೯.

ಕಲಹದಲ್ಲಿ ಪೋರ್ತುಗೀಸರು ಮಧ್ಯಸ್ಥಿಕೆ ವಹಿಸಿ ತೀರ್ಮಾನ ಮಾಡಿದರೆಂದು ಇವರ ದಾಖಲೆಗಳು ತಿಳಿಸುತ್ತವೆ. ಆದರೆ ಈ ತೀರ್ಮಾನ ತಾತ್ಕಾಲಿಕವಾಗಿತ್ತು. ಆಗಿಂದಾಗ್ಗೆ ಕಲಹ ಯುದ್ಧಗಳು ನಡೆದವು. ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೇನೆಂದರೆ ಈ ಕಲಹ ಮತ್ತು ಯುದ್ಧದ ಕಾರಣಗಳನ್ನು ಯಾವ ನಿಖರ ದಾಖಲೆಗಳೂ ತಿಳಿಸುವುದಿಲ್ಲ. ಜನಜನಿತ ಹೇಳಿಕೆಯಂತೆ ಬಂಗ - ಉಳ್ಳಾಲ ಅಬ್ಬಕ್ಕ ದೇವಿಯು ಲಕ್ಷ್ಮಪ್ಪ ಬಂಗರಸರನ್ನು ವರಿಸಿ ಅವನ ಜೀವನ ಕಾಲದಲ್ಲಿ ಉಳ್ಳಾಲದಲ್ಲಿ ವಹಿಸಿಕೊಂಡಿದ್ದಳು. ಇವನು ಕ್ರಿ.ಶ. ೧೫೫೬ರಲ್ಲಿ ನಿಧನನಾದ ಬಳಿಕ ಕಾಮರಾಯನು ಬಂಗರಸನು ಪಟ್ಟಕ್ಕೆ ಬಂದನು. ಈ ಕಾಮರಾಯನಿಗೂ ಅಬ್ಬಕ್ಕ ದೇವಿಗೂ ಕಲಹವುಂಟಾಗಿ ಇದು ಯುದ್ಧಕ್ಕೆ ಕಾರಣವಾಯಿತು.[೨೨] ಇಲ್ಲಿ ತಿಳಿಸಿದ ಸಂಗತಿಯು ಪ್ರವಾಸಿ ಪಿಯತ್ರೋ ದಲ್‌ಲಾವೆಲ್ಲಿಯ ಬರಹವನ್ನು ಅವಲಂಬಿಸಿದೆ. ಬಂಗ - ಚೌಟರಸರ ರಾಜಕೀಯ ಸಂಬಂಧ ತಿಳಿದುಕೊಳ್ಳುವಾಗ ಈ ಕೆಳಗಿನ ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳುವ ಅವಶ್ಯಕತೆ ಇದೆ. ಅಬ್ಬಕ್ಕ ದೇವಿಯ ಆಳ್ವಿಕೆ ಕಾಲದಲ್ಲಿದ್ದ ಬಂಗರಸ ವೀರನರಸಿಂಹ ಲಕ್ಷ್ಮಪ್ಪರಸ ಬಂಗ III. ಇವನ ಆಳ್ವಿಕೆಯು ಈ ರಾಣಿಯ ಆಳ್ವಿಕೆಯ ನಂತರವೂ ಮುಂದುವರಿದಿತ್ತು (೧೫೮೬) ಇವನು ಬೈರರಸ (ಕಾರಕಳ) ಒಡೆಯನ ನಿಕಟ ಸಂಬಂಧಿ.[೨೩] ಕಾಮರಾಯ ಬಂಗನ ಉಲ್ಲೇಖ ನಮಗೆ ಪ್ರಥಮವಾಗಿ ಸಿಗುವುದು ಕ್ರಿ.ಶ. ೧೫೯೫ರ ಬಂಗಾಡಿಯ ಶಾಂತೇಶ್ವರ ಬಸದಿ ಶಾಸನದಲ್ಲಿ. ಇವನು ಈ ಮನೆತನದ ಎರಡನೇ ಕಾಮರಾಜ.[೨೪] ಇವನ ಆಳ್ವಿಕೆ ಕ್ರಿ.ಶ. ೧೬೧೦ರ ವರೆಗೆ ಇದೆ.

ಈ ತನ್ಮಧ್ಯೆ ಬಂಗ ಮತ್ತು ಪೋರ್ತುಗೀಸರ ಒಪ್ಪಂದ ಕ್ರಿ.ಶ. ೧೫೬೭ರಲ್ಲಿ ನಡೆದು ಮರುವರ್ಷ ಮಂಗಳೂರಿನಲ್ಲಿ ಪೋರ್ತುಗೀಸರ ಕೋಟೆ ರಚನೆಯಾಯಿತು. ಇದಕ್ಕೆ ಮುಖ್ಯ ಕಾರಣ ಇವರಿಬ್ಬರ ಹಿತಾಶಕ್ತಿಗಳನ್ನು ರಕ್ಷಿಸಿಕೊಳ್ಳಬೇಕೆಂಬ ಇರಾದೆಯೇ ಆಗಿತ್ತು. ಇದಕ್ಕೆ ಇದ್ದ ಅಪಾಯವೆಂದರೆ ಚೌಟ ಅಬ್ಬಕ್ಕರಾಣಿ. ಪೋರ್ತುಗೀಸರು ಮನಬಂದಂತೆ ವ್ಯಾಪಾರ ಮಾಡುವುದನ್ನು ಇವಳು ವಿರೋಧಿಸುತ್ತಾ ಇದ್ದಳು. ಬಂಗರಾಜನಿಗೆ ತನ್ನ ರಾಜ್ಯದ ಮುಸ್ಲಿಂ

---

೨೨ ಕೈಶವ ಕೃಷ್ಣಕುಡುವ : ದಕ್ಷಿಣಕನ್ನಡ ಇತಿಹಾಸ - ತುಳುವ ಚರಿತ್ರೆ (ಮಂಗಳೂರು ೧೯೪೭) ಪು. ೧೪೭.

ಕೆ. ವಿಶ್ವನಾಥ ರೈ ಅದೇ ಗ್ರಂಥವು ೧೨-೧೩

೨೩. ಎಪ್ರಿಗ್ರಾಫಿಕ್ ಇಂಡಿಕಾ VII ಪು. ೧೩೧. ಚಂದ್ರಮ ಕಾರ್ಕಳ ಗೋಮ್ಮಟೇಶ್ವರ ಚರಿತ್ರೆ ಸಂಧಿ XVI ಪದ್ಯ ೧೪, ರಮೇಶ K.V. History of South Kanaraಪು. ೨೩೨

೨೪ Sew 24 Sewell Artiqulty remain in Madras Presidency Vol II No ೬ ಪು. ೨೭೧.

ವರ್ತಕರ ಅಹಂಕಾರ ಮನೋವೃತ್ತಿಯನ್ನು ತಗ್ಗಿಸಬೇಕೆಂಬ ಇರಾದೆ. ಇತ್ತು ಈ ಮುಸ್ಲಿಂ ವರ್ತಕರು ಬಂಗರಾಜನಿಗೆ ಅವಮಾನವನ್ನು ಮಾಡುತ್ತಿದ್ದರೆಂದು ಪೋರ್ತುಗೀಸ್ ಬರಹಗಾರ ಪಾವುಲೆ ಟ್ರಿನಿಡಾಡಿ (Paule Trinde) ತನ್ನ ಗ್ರಂಥದಲ್ಲಿ ಹೇಳಿದ್ದಾನೆ.[೨೫] ಪೊರ್ತುಗೀಸರು ಮತ್ತು ಬಂಗರಸನ ಮೈತ್ರಿ ಮುಸ್ಲಿಂ ವರ್ತಕರಿಗೆ ಗಾಬರಿಯನ್ನು ಮಾಡಿ, ಅವರು ಉಳ್ಳಾಲಕ್ಕೆ ಬಂದರು. ಬಂದ ವ್ಯಾಪಾರಸ್ಥರನ್ನು ಅಬ್ಬಕ್ಕಳು ಸ್ವಾಗತಿಸಿ ತನ್ನ ರಾಜ್ಯದಲ್ಲಿ ಇವರಿಗೆ ವ್ಯಾಪಾರ ಮಾಡಲು ಸಮ್ಮತಿಯನ್ನು ನೀಡಿದಳು. ಇದು ಪೋರ್ತುಗೀಸರಿಗೂ ಬಂಗರಿಗೂ ಸರಿ ಕಾಣಲಿಲ್ಲ. ಇವರಿಬ್ಬರಿಗೂ ಅಬ್ಬಕ್ಕಳು ವೈರಿಯಾಗಿ ಪರಿಣಮಿಸಿದಳು. ಇದರಿಂದ ತನ್ನನ್ನು ರಕ್ಷಿಸಿಕೊಳ್ಳಲು ಬಂಗರಾಜನು ಪೋರ್ತುಗೀಸರಿಗೆ ತನ್ನ ರಾಜ್ಯವಾದ ಮಂಗಳೂರಿನಲ್ಲಿ ಕೋಟೆಕಟ್ಟಲು ಅನುಮತಿಯನ್ನಿತ್ತು ಇದರ ರಚನೆಗೆ ತನ್ನಿಂದಾದಷ್ಟು ಸಹಾಯ ಮಾಡಿದನು. ಇಷ್ಟಲ್ಲದೆ ಉಳ್ಳಾಲ ರಾಣಿಯಿಂದ ಮುಂದೆ ಬರಬಹುದಾದ ಆಕ್ರಮಣ ಮತ್ತು ದಾಳಿಯ ಭೀತಿಯಿಂದ ರಕ್ಷಿಸಿಕೊಳ್ಳಲು ಪೋರ್ತುಗೀಸರು ಸಹಾಯ ಮಾಡಬೇಕೆಂದೂ ಇವರ ವ್ಯಾಪಾರ ಹಿತಾಸಕ್ತಿ ಸಂರಕ್ಷಿಸಲು ಬಂಗರಾಜನು ಸಹಾಯ ಮಾಡಬೇಕೆಂದೂ ಒಪ್ಪಂದವಾಯಿತು. ಈ ಮೇಲಿನ ಘಟನೆಗಳು ಚೌಟರಾಣಿ ಅಬ್ಬಕ್ಕಳಿಗೆ ಸರಿಬರಲಿಲ್ಲ. ಬಂಗರಾಜನು ಪೋರ್ತುಗೀಸರಿಗೆ ಮಂಗಳೂರಿನಲ್ಲಿ ಕೋಟೆ ಕಟ್ಟಲು ಅನುಮತಿ ನೀಡಿದ್ದು ಇವರಿಬ್ಬರ ವೈಷಮಕ್ಕೆ ಕಾರಣವಾಯಿತು. ಈ ಘಟನೆಯ ನಂತರ ಬಂಗ ಮತ್ತು ಉಳ್ಳಾಲ ಚೌಟರ ಕಲಹ ಮತ್ತು ಯುದ್ಧಗಳು ಆಗಿಂದಾಗೆ (ಕ್ರಿ.ಶ. ೧೬೧೮ರ ವರೆಗೆ) ನಡೆಯುತ್ತಿದ್ದವು.

ಪೋರ್ತುಗೀಸ್ ಮತ್ತು ಬಂಗರನ್ನು ವಿರೋಧಿಸಲು ಅಬ್ಬಕ್ಕಳು ಮಲಬಾರಿನ ನಾವಿಕ ಸೇನಾನಿ ಕುನ್ಯಾಲೆ, ನೀಲೇಶ್ವರ ಮತ್ತು ಕುಂಬಳೆಯ ರಾಜನುಗಳ ಮೈತ್ರಿಯನ್ನು ನಡೆಸಿ ಇದರಲ್ಲಿ ಯಶಸ್ವಿಯಾದಳು. ಕ್ರಿ.ಶ. ೧೫೬೮ರ ಪೋರ್ತುಗೀಸ್ ದಾಖಲೆಯಲ್ಲಿ ಬಂಗರಾಜ ಮತ್ತು ಚೌಟ ಅಬ್ಬಕ್ಕದೇವಿಯರೊಳಗೆ ತೀವ್ರ ರೀತಿಯ ಕಲಹ ಮತ್ತು ಯುದ್ಧ ನಡೆದುದನ್ನು ಉಲ್ಲೇಖಿಸಿದೆ. ಇದು ಪೋರ್ತುಗೀಸರ ವ್ಯಾಪಾರಕ್ಕೆ ಅಡ್ಡಿಯಾಯಿತು. ಇದನ್ನು ತಪ್ಪಿಸಲು ಗೋವೆಯ ವೈಸರಾಯ ಲುಯಿಷಡ ಅಟೈಡಿಯಾ (Dom Luies Atade) ಸ್ವತಃ ಮಂಗಳೂರಿಗೆ ಬಂದು ಇವರಿಬ್ಬರೊಳಗೆ ನಡೆದ ಯುದ್ಧವನ್ನು ನಿಲ್ಲಿಸಿ ಒಂದು ರೀತಿಯ

---

೨೫ Conquista Espinituale4 pp ೨೨೯-೨೩೦ ನೋಡಿ ಶಾಸ್ತ್ರಿ ಬಿ.ಎಸ್. Studies ಪು ೫೪. ಇವನ ಗ್ರಂಥವು ಕರಾವಳಿ ಕರ್ನಾಟಕದಲ್ಲಿ ಕ್ರೈಸ್ತ ಮತದ ಪ್ರಚಾರ ವೈಖರಿಯನ್ನು ಆಧಾರಯುಕ್ತವಾಗಿ ತಿಳಿಸುತ್ತದೆ. ಇಲ್ಲಿನ ಕ್ರೈಸ್ತಮತದ ಇತಿಹಾಸ ತಿಳಿಯಲು ಈ ಗ್ರಂಥದ ಅಧ್ಯಯನದ ಅವಶ್ಯಕತೆ ಇದೆ. ಗ್ರಂಥಕರ್ತ ಕ್ರಿ.ಶ. 1620-1630 ರ ವರೆಗೆ ಭಾರತದಲ್ಲಿದ್ದು ಕ್ರೈಸ್ತ ಮತ ಪ್ರಚಾರವಾದ ಸ್ಥಳಗಳನ್ನು ನೋಡಿದ್ದಾರೆ.

ಒಡಂಬಡಿಕೆಯಾಯಿತೆಂದು ಇದೇ ದಾಖಲೆ ಹೇಳಿದೆ.[೨೬] ಈ ದಾಖಲೆಯಲ್ಲಿ ಯಾವ ರೀತಿಯಲ್ಲಿ ಒಡಂಬಡಿಕೆ ನಡೆದು ಇವರಿಬ್ಬರೊಳಗೆ ಕಲಹ ನಿಂತಿತೆಂದು ತಿಳಿಸಿಲ್ಲ. ಆದರೆ ಈ ಒಡಂಬಡಿಕೆಯಂತೆ ಬಂಗರಾಜನು ಅಬ್ಬಕ್ಕದೇವಿಯನ್ನು ಮದುವೆಯಾದನೆಂದು ಫಾದರ ಹೆರಾಸ್‌ರು ಅಭಿಪ್ರಾಯಪಟ್ಟಿದ್ದಾರೆ.[೨೭] ಇದಕ್ಕೆ ಮುಖ್ಯ ಕಾರಣ ದೆಲ್ಲಾವೆಲ್ಲಿಯು ತಿಳಿಸಿದ ಬಂಗ - ಚೌಟರ ವಿವಾಹ ಮತ್ತು ಕಲಹ. ಹೆರಾಸ್‌ರು ಅಬ್ಬಕ್ಕದೇವಿ ಒಬ್ಬಳೇ ಎಂದು ತಪ್ಪಾಗಿ ತಿಳಿದಿದ್ದರಿಂದ ಈ ಅಭಿಪ್ರಾಯಕ್ಕೆ ಬರಲು ಕಾರಣವಾಗಿದೆ. ಡಾ. ಕಾಮತ್‌ರ ಅಭಿಪ್ರಾಯದಂತೆ ಬಂಗ ಕಾಮರಾಯನಿಗೂ ಮತ್ತು ಚೌಟ ಅಬ್ಬಕ್ಕಳಿಗೂ ಮತ್ತೆ ಜಗಳವಾಗದಂತೆ ಮಾಡಲು ಅವರಿಬ್ಬರಿಗೂ ಮದುವೆ ಮಾಡಿಕೊಳ್ಳುವಂತೆ ಪೋರ್ತುಗೀಸರು ಏರ್ಪಾಡು ಮಾಡಿದರು. ಚೌಟರಾಣಿ ಬಂಗರಸನನ್ನು ವರಿಸಿದಳು. ಅವರಿಬ್ಬರಿಗೆ ಹುಟ್ಟಿದ ಮಗುವೇ ಕಿರಿಯ ಅಬ್ಬಕ್ಕ.[೨೮] ಆದರೆ ಇದನ್ನು ಒಪ್ಪಿಕೊಳ್ಳುವುದಕ್ಕೆ ಈ ಕೆಳಗಿನ ತೊಡಕುಗಳು ಇವೆ. ಈ ಘಟನೆ ನಡೆದದ್ದು ೧೫೪೭ರಲ್ಲಿ. ಆಗ ಆಳುತ್ತಿದ್ದ ಬಂಗರಸ ವೀರನರಸಿಂಹ ಲಕ್ಷ್ಮಪ್ಪರಸ III ಎರಡನೆಯದಾಗಿ ಬಂಗರಸ ಕಾಮರಾಯನ ಆಳ್ವಿಕೆಯು ಪ್ರಥಮವಾಗಿ ತಿಳಿದು ಬಂದದ್ದು ಕ್ರಿ.ಶ. ೧೫೫೫ರ[೨೯] ಬಂಗಾಡಿಯ ಶಾಂತೇಶ್ವರ ಬಸದಿಯ ದಾಖಲೆಯಲ್ಲಿ. ಒಟ್ಟಿನಲ್ಲಿ ಬಂಗ - ಚೌಟರ ವಿವಾಹ ಸಂಬಂಧವು ಅಸ್ಪಷ್ಟತೆಯಲ್ಲಿದೆ. ಇವರಿಬ್ಬರೊಳಗೆ ಸ್ವಲ್ಪಕಾಲದ ನಂತರ ಪರಸ್ಪರ ದ್ವೇಷ ಉಂಟಾಗಿ ಮುಂದೆ ಯುದ್ಧ ನಡೆಯುತ್ತದೆ.

ಪೋರ್ತುಗೀಸ್‌ರು ಮತ್ತು ಅಬ್ಬಕ್ಕದೇವಿ : ೧೫೭೦

ಪೋರ್ತುಗೀಸರು ಕ್ರಿ.ಶ. ೧೫೭೦ರಲ್ಲಿ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ಇವರ ವಿರುದ್ಧವಾಗಿ ಬಿಜಾಪುರದ ಅದಿಲ್‌ಷಾಹಿ, ಅಹ್ಮದನಗರ ಸುಲ್ತಾನ, ಕಲ್ಲಿಕೋಟೆಯ ಜಾಮೋರಿನ್ ಮತ್ತು ಗೇರಸೊಪ್ಪೆಯ ರಾಣಿ ಚೆನ್ನ ಭೈರಾದೇವಿಯರು ಒಂದಾಗಿ, ಪೋರ್ತುಗೀಸರನ್ನು ಭಾರತದಿಂದ ಹೊಡೆದೋಡಿಸುವ ಪ್ರಯತ್ನ ಕೈಗೊಂಡರು. ಈ ಪ್ರಯತ್ನದಲ್ಲಿ ಛಲದ ಜ್ವಾಲೆಯಂತಿದ್ದ ಚೌಟರಾಣಿ ಅಬ್ಬಕ್ಕದೇವಿಯು ಭಾಗವಹಿಸಿದಳು. ಇದರಿಂದಾಗಿ ಪೋರ್ತುಗೀಸರಿಗೆ ಒಂದು ಸಂಕಟವಾಯಿತು. ಇವಳು ಮಲಬಾರಿನ ನೌಕಾದಳಾಧಿಕಾರಿ ಕುಟ್ಟಿಪೋಕರೆಯನ್ನು ಉಳ್ಳಾಲಕ್ಕೆ ಆಹ್ವಾನಿಸಿ ಮಂಗಳೂರಿನಲ್ಲಿದ್ದ ಪೋರ್ತುಗೀಸರ ಕೋಟೆಯನ್ನು ಹಿಡಿಯಲು ಸಹಕರಿಸಿದಳು. ಇದಕ್ಕೆ

---

೨೬. ಪೆರಿಯಾಸೋಜಾ ಅದೇ ಗ್ರಂಥವಾ ॥ ಪು. ೪೭೬. ಹೆರಾಸ. ಅದೇ ಗ್ರಂಥ ಪು. ೨೯೮ ಡಾನ್‌ವರಸ್ - ಅದೇ ಗ್ರಂಥ ೫೪೧.

೨೭. ಹೆರಾಸ್ - ಅದೇ ಗ್ರಂಥ

೨೮. ಕಾಮತ್ - ಅದ್ಯೆ ಗ್ರಂಥ ಪು ೧೫ - ೧೬

೨೯ - ಸಿವೆಲ್ Lists & Artiquities P ೨೭೧

ತಗಲುವ ಖರ್ಚನ್ನು ಕೊಡಲು ಇವಳು ಒಪ್ಪಿಕೊಂಡಳು. ಆದರೆ ಬಂಗರಾಜರು ಪೋರ್ತುಗೀಸರ ಪರವಾಗಿದ್ದನು. ಇದರಿಂದ ಇವರ ನಡುವೆ ತಿರುಗಿ ಮನಸ್ತಾಪವಾಯಿತು.

ಅಬ್ಬಕ್ಕ ದೇವಿಯ ಪ್ರೋತ್ಸಾಹದಿಂದ ಪ್ರೇರಿತನಾದ ಕುಟ್ಟಿ ಪೋಕರೆ ಮಂಗಳೂರು ಸಮೀಪ ಬಂದಿಳಿದನು. ಬಂದಿಳಿದ ಸೈನ್ಯದೊಂದಿಗೆ ಅಬ್ಬಕ್ಕಳ ಸೈನ್ಯವು ಸೇರಿಕೊಂಡು ರಾತ್ರಿ ಆಕಸ್ಮಾತ್ ಪೋರ್ತುಗೀಸರ ಕೋಟೆಯನ್ನು ಮುತ್ತಿಗೆ ಹಾಕಿತು. ಇದರಿಂದ ಕೋಟೆ ಕಾಯುತ್ತಿದ್ದ ಪೋರ್ತುಗೀಸರು ಗಲಿಬಿಲಿಗೊಂಡರು. ಇವರ ನೌಕೆ ಚೆಲ್ಲಾಪಿಲ್ಲಿಯಾಯಿತು. ಈ ರಾಣಿಯ ಸೈನಿಕರು ಕೋಟೆಯ ಮೇಲಿನ ಕೈಪಿಡಿ(bottlement) ಏರಿ ಬಂದರು. ಇದು ಪೋರ್ತುಗೀಸರಿಗೆ ಇನ್ನಷ್ಟು ಸಂಕಟವನ್ನುಂಟು ಮಾಡಿತು. ಆದರೆ ದೈವಾನುಗ್ರಹದಿಂದ ಇವರು ಈ ಸಂದಿಗ್ಧ ಸ್ಥಿತಿಯನ್ನು ಎದುರಿಸಿ ಯಶಸ್ವಿಯಾದರೆಂದು ಪೋರ್ತುಗೀಸ್ ಇತಿಹಾಸಕಾರರಾದ ಫೆರಿಜಾ ಸೋಜಾ ಮತ್ತು ಕುಟೊ ಅಬ್ಬಕ್ಕದೇವಿಯನ್ನು ಅತ್ಯಂತ ಛಲಗಾರ್ತಿ ರಾಣಿಯೆಂದು ಹೇಳಿದ್ದು ಗಮನಾರ್ಹ. ಇವಳ ಧೈರ್ಯ ಮತ್ತು ಕ್ಷಾತ್ರಗುಣ ಈ ಬರಹಗಾರ ಮೆಚ್ಚುಗೆಯನ್ನು ಪಡೆದಿತ್ತು.

ಕ್ರಿ.ಶ. ೧೫೮೧ರಲ್ಲಿ ಅಬ್ಬಕ್ಕ ದೇವಿಯು ವಾರ್ಷಿಕ ಕಪ್ಪವನ್ನು ಕೊಡಲಿಲ್ಲವೆಂದು ಪೋರ್ತುಗೀಸ್ ದಾಖಲೆಗಳ ವರದಿಯಲ್ಲಿದೆ. ಇದರಿಂದ ಕುಪಿತರಾದ ಪೋರ್ತುಗೀಸರು ಫಿರಂಗಿಗಳ ಮೂಲಕ ಉಳ್ಳಾಲವನ್ನು ಸುಟ್ಟು, ಅದರ ಪಕ್ಕದಲ್ಲಿರುವ ಕಾಡುಗಳನ್ನೆಲ್ಲಾ ಕಡಿದರೆಂಬ ವಿಷಯ ಇವರ ಇದೇ ದಾಖಲೆಯಲ್ಲಿದೆ.[೩೧] ಈ ರಾಣಿಯ ಉಲ್ಲೇಖವು ಕ್ರಿ.ಶ. ೧೫೮೪ರ ವರೆಗೆ ಬರುತ್ತದೆ.

ಅಬ್ಬಕ್ಕದೇವಿಯ ಇನ್ನಿತರ ಸಾಧನೆಗಳು

ಅಬ್ಬಕ್ಕದೇವಿಯು ಪೋರ್ತುಗೀಸರೊಡನೆ ಸೆಣಸುತ್ತಿರುವಾಗಲೂ, ಇವಳು ದೈನಂದಿನ ಆಡಳಿತಕ್ಕೆ ಆಸಕ್ತಿಯಿಂದ ಗಮನ ಕೊಡುತ್ತಿದ್ದಳೆಂಬುದು ಸ್ಥಳೀಯ ನಿಖರ ಆಕರಗಳ ಅಧ್ಯಯನದಿಂದ ತಿಳಿಯುತ್ತದೆ. ಅವಳು ಆಡಳಿತ ಯಂತ್ರವನ್ನು ಸುವ್ಯವಸ್ಥೆಗೊಳಿಸಿ ಜನಸಾಮಾನ್ಯರಿಗೆ ನ್ಯಾಯ ಸಿಗುವಂತೆ ಮಾಡಿದಳು. ಇವಳ ರಾಜ್ಯದಲ್ಲಿರುವ ಮಣೇಲ

---

೩೦ ಫೆರಿಯಾ ಸೋಜಾ ಅದೇ ಗ್ರಂಥ I ಪು. ೪೮೧ - ೫೮೯ ಅದೇ ಗ್ರಂಥ ಪು. ೧೨-೧೩.

೩೧ ಡಾನ್‌ವರಸ್ - ಅದೇ ಗ್ರಂಥ II ಪು ೪೧ ಐಗಳ - ಪ್ರಾಚೀನ ಇತಿಹಾಸ

ಪು ೧೮೩ Moncoes do Reino No. 3. 1585 ಇದು ಗೋವಾ ಪತ್ರಾಗಾರದಲ್ಲಿದೆ. ಮುಖ್ಯವಾಗಿ ಇದರಲ್ಲಿ ಗೋವೆಯ ವಜ್ಯಸರಾಯ ಸ್ಪೆಯಿನ್ ರಾಜನಿಗೆ ಮಳೆಗಾಲದಲ್ಲಿ ಬರೆದ ಮತ್ತು ಅರಸನಿಂದ ಬಂದ ಪತ್ರಗಳು ಇವೆ.

ಪೇಜಾವರ ಮತ್ತು ಉಳ್ಳಾಲಗಳನ್ನು ಹೆಚ್ಚು ನಗರೀಕರಿಸಿದಳು. ಉಳ್ಳಾಲವು ಕೋಟೆಯಿಂದ ಆವರಿಸಲ್ಪಟ್ಟಿತು. ಇಲ್ಲಿನ ವ್ಯಾಪಾರವು ಈ ರಾಣಿಯ ಆಳ್ವಿಕೆ ಕಾಲದಲ್ಲಿ ಅಭಿವೃದ್ಧಿಹೊಂದಿತ್ತು. ಇದು ಕರಾವಳಿಯ ಪ್ರಸಿದ್ಧ ರೇವುಗಳಲ್ಲಿ ಒಂದಾಗಿತ್ತು ಎಂದು ಪೋರ್ತುಗೀಸರು ರಚಿಸಿದ ಭೂಪರದ ಅಧ್ಯಯನದಿಂದ ತಿಳಿಯುಬಹುದು. ಈ ರೇವಿನಲ್ಲಿ ವ್ಯಾಪಾರ ಅಭಿವೃದ್ಧಿಗೊಳಿಸಲು ಸ್ಥಳೀಯರಿಗೆ ಮತ್ತು ನಾನಾ ದೇಶಿಗಳಿಗೆ, ಮುಖ್ಯವಾಗಿ ಅರೇಬಿಯಾ ಮಲಬಾರಿನ ಮಾಪಿಳ್ಳೆಯವರಿಗೆ ಅವಳು ಪೋತ್ಸಾಹ ನೀಡಿದಳು. ಹಡಗುಕಟ್ಟೆ ವ್ಯಾಪಾರ ಮಾಡುವುದಕ್ಕೆ ಹೆಚ್ಚಿನ ಸಹಾಯ ನೀಡಿದಳು. ಉಳ್ಳಾಲದ ಸಾಗರೋತ್ತರ ವ್ಯಾಪಾರ ಪರ್ಶಿಯಾದವರೆಗೆ ವಿಸ್ತರಿಸಿತ್ತು. ಗೋವಾ ವೈಸರಾಯ ದೊಂದೂ ಅರ್ತೆಮಿನೀಜಸ್‌ನ ವರದಿಯಂತೆ ರೇವಿನಿಂದ ಕಬ್ಬು, ಕುಟ್ಟಣ ಅಕ್ಕಿ, ಬಣ್ಣಬಣ್ಣದ ಬಟ್ಟೆಗಳು, ತೆಂಗು ಮುಂತಾದವುಗಳು ಪರ್ಶಿಯಾ, ಅರೇಬಿಯಾ ಮತ್ತು ಕೆಂಪು ಸಮುದ್ರ ಪ್ರದೇಶಗಳಿಗೆ ರಫ್ತಾಗುತ್ತಿದ್ದವು. ಈ ರಾಜ್ಯದ ನಡೆಸುತ್ತಿದ್ದವರು ಸ್ಥಳೀಯ ಬೆಸ್ತರು, ಮೊಗವೀರರು, ಸ್ಥಳೀಯ ಮುಸ್ಲಿಮರು ಮತ್ತು ಮಲಬಾರಿನ ಮಾಪಿಳ್ಳೆಯವರು. ಅಬ್ಬಕ್ಕಳ ಸೈನ್ಯದಲ್ಲೂ ಬಹಳ ಸಂಖ್ಯೆಯಲ್ಲಿ ಮಾಪಿಳ್ಳೆಯರು ಇದ್ದು.[೩೨]

ಅಬ್ಬಕ್ಕದೇವಿಯು ತನ್ನ ರಾಜ್ಯದ ಧಾರ್ಮಿಕ ಕ್ಷೇತ್ರಗಳ ಪಾವಿತ್ರ್ಯಕ್ಕೆ ಹೆಚ್ಚು ಗಮನಕೊಟ್ಟಿದ್ದಳು. ಇವಳ ಸಹೋದರಿ ಪದುಮಲದೇವಿಯ ಪುಣ್ಯಾರ್ಥವಾಗಿ ಮೂಡಬಿದ್ರೆಯ ಗುರುಗಳ ಬಸದಿ ಪಾರ್ಶ್ವನಾಥ ತೀರ್ಥಂಕರ ಸನ್ನಿಧಿಯಲ್ಲಿ ಆಹಾರ ದಾನವನ್ನು ಮಾಡಿದಳೆಂದು ತಿಳಿಸುವ ಶಾಸನವು ಸಿಕ್ಕಿದೆ. ಇದರ ಕಾಲ ಶಕ ೧೪೯೩. ಇದು ಈ ಬಸದಿಯಲ್ಲಿದೆ. ಈ ದಾನವನ್ನು ಮಾಡುವಾಗ ಇಲ್ಲಿನ ಸಂಘ ಸಮುದಾಯ, ಎಂಟು ಮಂದಿ ಸೆಟ್ಟಿಗಾರರು ಮತ್ತು ನಾಲ್ಕು ಎಳಮೆಯರು ಉಪಸ್ಥಿತರಿದ್ದರು. ಈ ಸಂಸ್ಥೆಗಳ ಅಭಿಪ್ರಾಯಕ್ಕೆ ರಾಣಿ ಗಮನಕೊಟ್ಟಿದ್ದಳೆಂದು ಇದೇ ಶಾಸನವು ತಿಳಿಸುತ್ತದೆ. ದಾನಬಿಟ್ಟ ಜಾಗ ಮಿಜಾರ ಮಾಗಣೆಯ ಮರಕತ ಎಂಬ ಸ್ಥಳ. ಆಹಾರ ದಾನದ ಉತ್ಪತ್ತಿ ೧೧೨ ಗೇಣಿ ಮೂಡೆ. ಬಿಟ್ಟದಾನದ ಸ್ಥಳದಲ್ಲಿ ರೈತರಿಂದ ಕಾಣಿಕೆ, ಹಣ ಭಂಡಿ ಭತ್ತ ಬಿಟ್ಟಿಗಳನ್ನು ಜ್ಯಾರಿ ಮಾಡಬಾರದೆಂದು ಈ ರಾಣಿಯು ಕಟ್ಟಾಜ್ಞೆ ಮಾಡಿದ್ದಳು.[೩೩] ಹಿರಿಯ ಅಬ್ಬಕ್ಕದೇವಿಯು

---

೩೨ ಪಾದರ ಫ್ರಾನ್ಸಿಕೊ ಡಿ'ಸೋಜಾ ಅದೇ ಗ್ರಂಥ ಪು ೧೮-೧೯ ಮೊರೈಯಿಸ್ - ಅದೇ ಗ್ರಂಥ ಪು. ೯. ಕಾಮತ್ - ಅದೇ ಗ್ರಂಥ ಪು. ೯.

೩೩. ARSIE 1941 Ap. A.No. 3 ಶಾಸನದ ಪೂರ್ಣ ಪಾಟ ಮಿಸೊ (ಬೆಂಗಳೂರು 1985) No. 1 & 2) ಪುಪು ೧೭೧-೧೭೨.

ತನ್ನ ರಾಜ್ಯದಲ್ಲಿದ್ದ ಜನರ ಮತ ಮತ್ತು ಧರ್ಮ ಸೌಹಾರ್ದ ಉತ್ತಮ ರೀತಿಯಲ್ಲಿ ನಡೆದುಕೊಂಡು ಬರಲು ಯತ್ನಿಸಿ ಯಶಸ್ವಿಯಾದಳು. ಇದು ಇತ್ತೀಚೆಗೆ ಸಿಕ್ಕಿದ ತಾಮ್ರ ಶಾಸನದಲ್ಲಿ ಲಿಖಿತವಾಗಿದೆ. ಇದರ ಕಾಲಶಕ ೧೪೯೬ ಕ್ರಿ.ಶ. ೧೫೭೩.[೩೪] ಈ ದಾಖಲೆಯಂತೆ ಮೂಡಬಿದ್ರೆ ನೆಲ್ಲಿತೀರ್ಥದಲ್ಲಿ ವೀರಶೈವರ ಲಿಂಗವನ್ನು ಕೆತ್ತಿದ್ದರಿಂದ ಇಲ್ಲಿನ ಬ್ರಾಹ್ಮಣರಿಗೂ ಲಿಂಗಾಯತರಿಗೂ ಮನಸ್ತಾಪ ಮತ್ತು ಕಲಹ ಉಂಟಾಯಿತು. ಪೂಜೆಯ ಹಕ್ಕಿನ ಬಗ್ಗೆ ಇವರಿಬ್ಬರಿಗೂ ಜಗಳವುಂಟಾಯಿತು. ಸಿಟ್ಟಿಗೆದ್ದ ಜಂಗಮರು ಬಾಳೆಹೊನ್ನೂರಿನ ಸಿಂಹಾಸನಾಧೀಶವರ ಕುಮಾರ ಚೆನ್ನಬಸವ ರಾಜನಿಗೆ ದೂರು ಹೇಳುತ್ತಾರೆ. ವಿವೇಕಿಯಾದ ಚೆನ್ನಬಸವ ಈ ಕಲಹವನ್ನು ಚೌಟರಾಣಿ ಅಬ್ಬಕ್ಕಳ ಗಮನಕ್ಕೆ ತರುತ್ತಾನೆ. ಇವಳು ಈ ವಾಜ್ಯವನ್ನು ಸಮರ್ಪಕ ರೀತಿಯಲ್ಲಿ ಬಗೆಹರಿಸುತ್ತಾಳೆ. ತನ್ನ ರಾಜ್ಯದ ಪ್ರಮುಖರಾದ ಕುಂದ ಹೆಗ್ಗಡೆ, ಅಡವಳ್ಳಿ ಚಿಕ್ಕಣ್ಣ ಹೆಗ್ಗಡೆ, ಬಿದಿರೆಯ ನಗರದ ಹಲರು, ಸೆಟ್ಟಿಕಾರರು ಇವರನ್ನು ಕರೆಸಿ ಇವರ ಸಮ್ಮುಖದಲ್ಲಿ ಇವಳು ನ್ಯಾಯತೀರ್ಮಾನ ಮಾಡುತ್ತಾಳೆ. ಬಾಳೆಹಳ್ಳಿ ಸಿಂಹಾಸನಾಧೀಶ್ವರ ಚೆನ್ನಬಸವರಾಜರಿಗೆ ಕಾಣಿಕೆಯಾಗಿ ೪೫೦ ವರಹಗಳನ್ನು ಕೊಡುವುದು, ನೆಲ್ಲಿತೀರ್ಥದಲ್ಲಿ ಬ್ರಾಹ್ಮಣರೇ ಪೂಜೆ ನಡೆಸಬೇಕು. ಇದಕ್ಕೆ ಜಂಗಮರು ಯಾವ ರೀತಿಯಲ್ಲೂ ಅಡ್ಡಿ ಆತಂಕಗಳನ್ನು ಮಾಡಬಾರದು. ಈ ನ್ಯಾಯ ಪರಿಹಾರಕ್ಕೆ ಮೇಲೆ ಹೇಳಿದ ಹೆಗ್ಗಡೆಯವರು ಸಾಕ್ಷಿಗಳಾಗಿ ನಿಲ್ಲುತ್ತಾರೆ. ಈ ಒಡಂಬಡಿಕೆಯನ್ನು ವೀರಣ್ಣದೇವ ಮತ್ತು ಕುಮಾರ ಚೆನ್ನಬಸವರು ಒಪ್ಪಿ ಸಾಂಗಯ್ಯ ದಾಖಲಿಸುತ್ತಾರೆ. ಅಬ್ಬಕ್ಕ ದೇವಿಯ ಉಲ್ಲೇಖವು ಕ್ರಿ.ಶ. ೧೫೮೪ರ ಪೋರ್ತುಗೀಸ್ ದಾಖಲೆಯಲ್ಲಿದ್ದು ಇವಳು ವಾರ್ಷಿಕವಾಗಿ ಕೊಡುತ್ತಿದ್ದ ಕಪ್ಪವನ್ನು ನಿಲ್ಲಿಸಿ ಉಳ್ಳಾಲದಲ್ಲಿ ಕೋಟೆಯನ್ನು ಭದ್ರಪಡಿಸುತ್ತಿದ್ದಳೆಂದು ಹೇಳಿದೆ. ಇದೇ ಇವಳ ವಿಚಾರ ತಿಳಿಸುವ ಕೊನೆಯ ಉಲ್ಲೇಖ.[೩೫]

---

೩೪ ಈ ಶಾಸನವು ಧರ್ಮಸ್ಥಳದ ಮಂಜೂಷ ಸಂಗ್ರಹಾಲಯದಲ್ಲಿದೆ. ಡಾ. ವೀರೇಂದ್ರ ಹೆಗ್ಗಡೆಯವರ ಅನುಮತಿಯಿಂದ ನೋಡುವ ಅವಕಾಶ ಈ ಗ್ರಂಥಕರ್ತನಿಗೆ ಸಿಕ್ಕಿದೆ. ಮಿತ್ರ ಎಸ್.ಡಿ. ಶೆಟ್ಟಿ ಉಜಿರೆ ಮುಖಾಂತರ ಈ ಶಾಸನದ ಪಾಠ ಸಿಕ್ಕಿದೆ. ಇವರಿಬ್ಬರಿಗೂ ಈ ಗ್ರಂಥಕರ್ತನ ಕತಜ್ಞತೆಗಳು.

೩೫ Moncoes do Reino No. 3 1585. ನೋಡಿ ಪತ್ರ ೧೪೯೨ನೇ ಇವಸಿಯಿದ್ದು ಹೆರಾಸ - ಅದೇ ಗ್ರಂಥ ಪು. ೪೨೪.

ಅಧ್ಯಾಯ ೫

ಅನಾಮಧೇನು ಚೌಟರಾಜ (ಚಂದ್ರಶೇಖರ?)

ಕ್ರಿ.ಶ. ೧೫೫೮ ರ ಪೋರ್ತುಗೀಸ್ ದಾಖಲೆಯಲ್ಲಿ ಉಳ್ಳಾಲದಲ್ಲಿ ರಾಜನೊಬ್ಬನು ಆಳುತ್ತಿದ್ದನೆಂದೂ ಇವನೊಂದಿಗೆ ವ್ಯಾಪಾರ ಮೈತ್ರಿ ನಡೆಸುವ ಅವಶ್ಯಕತೆ ಇದೆ ಎಂದೂ ತಮ್ಮ ಅರಸನಿಗೆ ವರದಿ ಮಾಡಿದೆ.[೧]

ಆದರೆ ಈ ಉಳ್ಳಾಲ ರಾಜನ ಹೆಸರನ್ನು ಎಲ್ಲೂ ಈ ದಾಖಲೆಗಳು ನಮೂದಿಸಿಲ್ಲ. ಇವನು ರಾಣಿಯ ಮಗನೆಂದೂ, ಇವಳ ನಂತರ ಪಟ್ಟಕ್ಕೆ ಬಂದನೆಂದೂ ತಿಳಿಸಿದೆ. ಜನಜನಿತ ಹೇಳಿಕೆಯ ಪ್ರಕಾರ ಹಿರಿಯ ಅಬ್ಬಕ್ಕದೇವಿಯ ಮಗ ಚಂದ್ರಶೇಖರ. ಆದರೆ ಇವರನ್ನು ಬಂಗರಾಜ ಕಾಮರಾಯನ ಸ್ನೇಹಿತರು ಕೊಂದರೆಂದು ತಿಳಿಸಿದೆ.[೨] ಇದು ಕೂಡಾ ನಂಬಲರ್ಹವಲ್ಲದ ಸಂಗತಿ. ಏಕೆಂದರೆ ಆ ಕಾಲದಲ್ಲಿ ಬಂಗರಸ ಕಾಮರಾಯನಲ್ಲ. ಇನ್ನೊಂದು ಸ್ಥಳೀಯ ಹೇಳಿಕೆಯಂತೆ ಹಿರಿಯ ಅಬ್ಬಕ್ಕದೇವಿಯ ನಂತರ ಅವಳ ಮಗಳು ತಿರುಮಲದೇವಿ ೧೫೬೨ರಲ್ಲಿ ಪಟ್ಟಕ್ಕೆ ಬಂದು ೧೬೦೬ರ ವರೆಗೆ ಉಳ್ಳಾಲವನ್ನು ಆಳಿದ್ದಳು. ಇವಳು ಹತ್ತಿರವಿದ್ದ ಕಳಸ ಕಾರ್ಕಳದ ಭೈರರಸ ಒಡೆಯನೊಡನೆ ಕಲಹ ಮಾಡಿ ಕೊನೆಗೆ ಆ ರಾಜ್ಯದ ಮೇಲೆ ಯುದ್ಧವನ್ನು ಮಾಡಿದಳಂತೆ. ಆ ಯುದ್ಧವು ಸಾಣೂರು ಕಣಿವೆಯ ಬಳಿ ನಡೆದು, ಭೈರವನ ಸೇನಾಪತಿಯು ಯುದ್ಧದ ನಡುವೆ ತಿರುಮಲದೇವಿಯನ್ನು ಕೊಂದು ಅವಳ ತಲೆಯನ್ನು ಕಾರ್ಕಳಕ್ಕೆ ಕೊಂಡು ಹೋಗಿ ಭೈರರಸನ ಮುಂದಿಟ್ಟನು. ಭೈರರಸನು ಆ ತಲೆಯನ್ನು ಶೂಲಕ್ಕೇರಿಸಿದನು.[೩] ಆದರೆ ಈ ಘಟನೆಯನ್ನು ಸಮರ್ಥಿಸುವ ನಿಖರ ದಾಖಲೆಗಳು ಇನ್ನೂ ಸಿಕ್ಕಿಲ್ಲ. ಇದಕ್ಕೆ ವಿರುದ್ಧವಾಗಿ ಈವರೆಗೆ ಲಭ್ಯವಾದ ನಿಖರ ದಾಖಲೆಗಳು ಉಳ್ಳಾಲದಲ್ಲಿ ರಾಜನು ಆಳುತ್ತಿದ್ದನೆಂದು ತಿಳಿಸಿ ಇವನಿಗೂ ಬಂಗ ರಾಜನಿಗೂ ಕಲಹ ನಡೆದುದನ್ನು ತಿಳಿಸಿದೆ. ಈ ಹಿನ್ನೆಲೆಯಲ್ಲಿ ತಿರುಮಲದೇವಿಗೂ ಕಾರ್ಕಳ ಅರಸರಿಗೂ ನಡೆದ

---

೧. ಕುನ್ಯಾರಿವಾ (Cunha Rivara) ಅರ್ಕಿವೊ ಪೋರ್ತುಗೀಸ್ ಒರಿಯಂಟಲ್ III ಪು. ೨೨೪ ಶಾಸ್ತ್ರಿ ಬಿ.ಎ ಸ್. The Portuguese in Kanara ಪು ೧೩೪. ಕ್ರಿ.ಶ. ೧೫೫೮ರ ದಶಂಬರದಲ್ಲಿ ಗೋವೆ ವೈಸ್‌ರಾಯ ಸ್ಪೆಯಿನ್ ಅರಸನಿಗೆ ಬರೆದ ಪತ್ರದಲ್ಲಿ ಕೆಲವು ವರ್ಷಗಳ ಹಿಂದೆ 'ಅಹಂಕಾರ' ದ ರಾಣಿ ನಿಧನ ಹೊಂದಿದಳೆಂದು ನಂತರ ಇವಳ ಮಗನು ಉಳ್ಳಾಲದ ಅರಸನೆಂದು ಉಲ್ಲೇಖಿಸಿದ್ದು ಗಮನಾರ್ಹ.

೨. ಕೆ. ವಿಶ್ವನಾಥ ರೈ - ಅದೇ ಗ್ರಂಥ ಪು. ೩೨-೩೩.

೩. ಕೆ. ಕುಶಾಲಪ್ಪಗೌಡ ಮತ್ತು ಕೆ. ಚಿನ್ನಪ್ಪಗೌಡ, ದಕ್ಷಿಣಕನ್ನಡ ಜಿಲ್ಲೆ ಕೈಪಿಯತ್ತುಗಳು (ಉಜಿರೆ ೧೯೮೩) ಪು. ೧೨೭ ಕೆ. ಕೃಷ್ಣ ಕುಡುವ ಅದೇ ಗ್ರಂಥ ಪು. ೧೪೮.

ಯುದ್ಧ ಇತ್ಯಾದಿಗಳನ್ನು ಒಪ್ಪಿಕೊಳ್ಳುವುದು ವೈಜ್ಞಾನಿಕ ಇತಿಹಾಸಕಾರರಿಗೆ ಕಷ್ಟವಾಗಿದೆ. ಒಟ್ಟಿನಲ್ಲಿ ಅಬ್ಬಕ್ಕದೇವಿಯ ನಂತರ ಇವಳ ಮಗನು ಉಳ್ಳಾಲ ರಾಜನಾಗಿ ೧೫೯೪ರ ವರೆಗೆ ಆಳಿದನು. ಆ ಮಗನೇ ಚಂದ್ರಶೇಖರ ಚೌಟನಾಗಿರಬೇಕು. ಇವನನ್ನು ಕಾಮರಾಯ ಬಂಗನ ಸ್ನೇಹಿತರು ೧೫೯೪ರ ವರೆಗೆ ಕೊಲ್ಲಲಿಲ್ಲ. ೧೫೮೯ರಿಂದ ೧೫೯೪ರ ವರೆಗಿನ ಪೋರ್ತುಗೀಸ್ ದಾಖಲೆಯಂತೆ ಈ ಅರಸನು ಬಂಗರಾಣಿಯೊಡನೆ ಕಲಹ ಮತ್ತು ಯುದ್ಧ ಮಾಡಿದನು. ಈ ಬಂಗರಾಣಿಯ ಹೆಸರನ್ನು ಈ ದಾಖಲೆಗಳು ತಿಳಿಸಿಲ್ಲವಾದರೂ ಇವಳ ಹೆಸರು ವೀರನರಸಿಂಹ ಶಂಕರದೇವಿ ಯಾನೆ ಬಂಗರಾಜ ಒಡೆಯನೆಂದು ಬಂಟವಾಳದಲ್ಲಿ ಸಿಕ್ಕಿದ ತಾಮ್ರ ಶಾಸನದಿಂದ ತಿಳಿದು ಬರುತ್ತದೆ. ಇದರ ಕಾಲ ೧೫೮೭.[೪]

ಬಂಗರಾಣಿ ಮತ್ತು ಉಳ್ಳಾಲ ಚೌಟರಸರ ಯುದ್ಧದಲ್ಲಿ ಬಂಗರಾಣಿಗೆ ನಷ್ಟವಾಯಿತೆಂದು ಕ್ರಿ.ಶ. ೧೫೯೧ ಜನವರಿ ತಿಂಗಳಿನ ಪೋರ್ತುಗೀಸ್ ಪತ್ರ ವರದಿ ಮಾಡಿದೆ. ಇಷ್ಟಲ್ಲದೆ ಬಂಗರಾಣಿಯು ತನ್ನ ರಾಜ್ಯದ ಬಹುಭಾಗವನ್ನು ಕಳೆದುಕೊಂಡಿದ್ದು,ಒಂದೇ ಒಂದು ಕೋಟೆ ಇವಳ ವಶವಿದ್ದಿತ್ತು. ಇದನ್ನು ತಾನು ಗೆಲ್ಲುವೆನೆಂದು ಚೌಟ ರಾಜನು ಘೋಷಿಸಿದನು. ಈ ಸಂದಿಗ್ಧ ಸ್ಥಿತಿಯಲ್ಲಿ ಬಂಗರಾಣಿ ಪೋರ್ತುಗೀಸರ ಸಹಾಯವನ್ನು ಯಾಚಿಸಿದಳು.[೫] ಬಂಗರಾಣಿಯ ಅಸಹಾಯಕತೆ ಮತ್ತು ಪೋರ್ತುಗೀಸರ ಸಜ್ಜಾಗದ ಸ್ಥಿತಿಯ ಲಾಭ ಪಡೆದು ತನ್ನ ತಾಯಿ ಅರ್ಧ ಪೂರೈಸಿದ ಉಳ್ಳಾಲ ಕೋಟೆಯನ್ನು ಈ ಚೌಟ ರಾಜನು ಭರದಿಂದ ಮುಂದುವರಿಸಿದನು. ಇದರ ರಕ್ಷಣೆಗೆ ನುರಿತ ೩೦೦೦ ಸೈನಿಕರನ್ನು ನೇಮಿಸಿದನು.

ಪೋರ್ತುಗೀಸರು ಮಧ್ಯ ಪ್ರವೇಶಿಸಿ ಈ ಯುದ್ಧವನ್ನು ನಿಲ್ಲಿಸುವ ಪ್ರಯತ್ನ ಮಾಡಿ ವಿಫಲರಾದರು. ನಂತರ ಇವರು ಬಂಗರಿಗೆ ಸಹಾಯವನ್ನು ಮಾಡಿದರು. ಮೇಜರ್ ಧೊಮಿ ಡಿಸೋಜನನ್ನು ಮಂಗಳೂರಿಗೆ ಗೋವಾ ವೈಸ್‌ರಾಯ ಕಳುಹಿಸಿದನು. ಇವನೊಂದಿಗೆ ೩೦ ದೊಡ್ಡ ಹಡಗುಗಳು ಮತ್ತು ೩ ಸಣ್ಣ ಹಡಗುಗಳು ಇಲ್ಲಿಗೆ ಬಂದವು. ಯುದ್ಧ ನಿಲ್ಲಿಸಿ ಒಪ್ಪಂದ ಮಾಡಿಕೊಳ್ಳುವಂತೆ ಕಾದಾಡುತ್ತಿರುವ ಈ ಅರಸರನ್ನು ಇವನು ಒತ್ತಾಯಿಸಿದನು. ಚೌಟರಾಜನಿಗೆ ತನ್ನೊಡನೆ ಮಾತುಕತೆಗೆ ಬರುವಂತೆಯೂ ಡಿಸೋಜಾನು ಹೇಳಿ ಕಳುಹಿಸಿದನು. ಸ್ವಲ್ಪ ದಿವಸದ ನಂತರ ಚೌಟರಾಜನು ಪೋರ್ತುಗೀಸ್ ಕ್ಯಾಪ್ಟನ್ (Captain) ನನ್ನು ಸಂಧಿಸಿದನು. ತಾನು ಕಟ್ಟಿದ ಕೋಟೆಯನ್ನು ಕೆಡಹುವಂತೆ ಪೋರ್ತುಗೀಸರು ಇವನನ್ನು ಕೇಳಿಕೊಂಡರು. ಚೌಟರಾಜನು ಇದಕ್ಕೆ ಒಪ್ಪಿದರೂ ತನ್ನ ಕೋಟೆಯನ್ನು

---

೪ ARSIE 1968 -69 Ap.A.No. 7 ಇದರಲ್ಲಿ ಬಂಗರಾಜ ಒಡೆಯನು ಮಂಜೇಶ್ವರದ ಮಾದಪ್ಪಹೊಳ್ಳರಿಗೆ ಮೂಲಬಾಳಿಕೆ ನೀಡಿದ್ದನ್ನು ಹೇಳಿದೆ. ಈ ಶಾಸನದ ಪಾಠ ದಿ. ವೆಂಕಟ್ರಾಯಾಚಾರ್ಯ ಸುರತ್ಕಲ್ ಇವರಿಂದ ಸಿಕ್ಕಿದೆ.

೫ ಕುನ್ಯಾ ರಿವಾರಾ - ಅದೇ ದಾಖಲೆ ಪತ್ರ ಜನವರಿ ೧೨, ೧೫೯೧ ಶಾಸ್ತ್ರಿ The Portuguese ಪು. ೧೩೪.

ನಾಶಮಾಡಲಿಲ್ಲ. ಇದರಿಂದ ಸಿಟ್ಟಾದ ಪೋರ್ತುಗೀಸರು ಬಂಗರ ಪರವಾಗಿ ಚೌಟರಾಜನೊಡನೆ ಯುದ್ಧ ಮಾಡಿದರು. ಈ ಯುದ್ಧದಲ್ಲಿ ಪೋರ್ತುಗೀಸ್ ಮತ್ತು ಬಂಗರ ಸೈನ್ಯ ಒಂದಾಗಿ ಉಳ್ಳಾಲದ ಚೌಟ ರಾಜ್ಯಕ್ಕೆ ಹಾನಿಯನ್ನುಂಟುಮಾಡಿತು. ಚೌಟರಾಜನು ಬಂಗರಿಂದ ಗೆದ್ದ ಪ್ರದೇಶಗಳನ್ನೆಲ್ಲಾ ಈ ಸೈನ್ಯ ಒಕ್ಕೂಟ ತಿರುಗಿ ಗೆದ್ದುಕೊಂಡಿತು. ಕೊನೆಗೆ ಚೌಟರಾಜನು ಒಪ್ಪಂದಕ್ಕೆ ಬರಬೇಕಾಗಿ ಬಂತು. ಈ ಒಪ್ಪಂದದ ಪ್ರಕಾರ ಬಂಗರಾಜನು ತಾನು ಕಳೆದುಕೊಂಡಿದ್ದ ಪ್ರದೇಶಗಳನ್ನು ತಿರುಗಿ ಪಡೆದನು.[೬] ಈ ಚೌಟ ರಾಜನ ಆಳ್ವಿಕೆಯು ೧೫೯೪ರ ವರೆಗೆ ಇದ್ದಿತು.

ಅಧ್ಯಾಯ ೬

ಕಿರಿಯ ಅಬ್ಬಕದೇವಿ (ಇಮ್ಮಡಿ ಅಬ್ಬಕ್ಕ) ೧೫೯೫ - ೧೬೪೦

ಚೌಟ ಅರಸು ಮನೆತನಗಳಲ್ಲಿ ಆಳಿದವರಲ್ಲಿ ಇಮ್ಮಡಿ ಅಬ್ಬಕ್ಕ ಅತ್ಯಂತ ಪ್ರಮುಖಳು. ಇದಕ್ಕೆ ಮುಖ್ಯ ಕಾರಣ ದುಂಡಾವರ್ತಿ ವ್ಯಾಪಾರವನ್ನು ಮಾಡುತ್ತಿದ್ದ ಪೋರ್ತುಗೀಸರನ್ನು ಇವಳು ಕೆಳದಿ ವೆಂಕಟಪ್ಪನ ಸಹಾಯದಿಂದ ಹೀನಾಯವಾಗಿ ಸೋಲಿಸಿ ಅವರ ಸೊಕ್ಕನ್ನು ಅಡಗಿಸಿದ್ದು. ಎರಡನೆಯದಾಗಿ ಇವಳ ಆಳ್ವಿಕೆಯು ದೀರ್ಘಕಾಲದ್ದಾಗಿದ್ದು ತನ್ನ ಆಳ್ವಿಕೆಯ ಅವಧಿಯಲ್ಲಿ ಹಲವಾರು ಜನಹಿತ ಕಾರ್ಯನಡೆಸಿ ಸಮಕಾಲೀನ ಬರಹಗಾರರಾದ ಕುಟೊ, ಅಂತೋನಿಯೊ ಬೊಕೆರೊ ಮತ್ತು ಪಿಯತ್ರೋ ದೆಲ್ಲಾವೆಲ್ಲೆ. ಇವರ ಮೆಚ್ಚುಗೆಯನ್ನು ಸಂಪಾದಿಸಿಸಿದಳು. ಕೊನೆಯದಾಗಿ ಇವಳು ಸಮರ್ಥ ರಾಜಕಾರಣಿಯಾಗಿದ್ದಳು. ತನ್ನ ರಾಜ್ಯದ ವ್ಯಾಪಾರ ಕ್ಷೇತ್ರವನ್ನು ಮಾಲ್ದವಿ ಮತ್ತು ಇನ್ನಿತರ ಪಶ್ಚಿಮ ದ್ವೀಪಗಳ ಕಡೆಗೆ ವಿಸ್ತರಿಸಿದ್ದಳೆಂದು ಕ್ರಿ.ಶ. ೧೬೦೦ರಲ್ಲಿ ಬಂದ ಫ್ರೆಂಚ್ ಪ್ರವಾಸಿ ಪ್ರಾಯಿರಾರ್ಡ್ ಡೆಲವರ್ (Francois Pyrard) ವರದಿಯಿಂದ ತಿಳಿಯುತ್ತದೆ.[೭] ಈ ರಾಣಿಯು

---

೬. ಪೋರ್ತುಗೀಸ್ ದೊರೆಗೆ ಗೋವೆ ವೈಸ್‌ರಾಯ ಬರೆದ ಇನ್ನೊಂದು ಪತ್ರ. ಈ ಪತ್ರ ಆಗೋಸ್ತು ೨೨, ೧೫೯೧ರಲ್ಲಿ ಬರೆದದ್ದು, ಶಾಸ್ತ್ರಿ ಅದೇ ಗ್ರಂಥ ಪು. ೧೩೪.

ತನ್ನ ರಾಜ್ಯದಲ್ಲಿ ಕೆಲವು ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡಿದ್ದಳೆಂಬ ಐತಿಹಾಸಿಕ ಪ್ರತೀತಿ ಇದೆ. ಕಿರಿಯ ಅಬ್ಬಕ್ಕಳು ಹಿಂದೆ ಆಳಿದ್ದ ಇದೇ ಹೆಸರಿನ ರಾಣಿಯ ಮಗಳು. ಇವಳು ಪಟ್ಟಕ್ಕೆ ಬರುವಾಗ ಹೆಚ್ಚು ಕಡಿಮೆ ೧೭ ವರ್ಷವಾಗಿತ್ತು.[೨] ಈ ರಾಣಿಯ ಉಲ್ಲೇಖ ಪ್ರಥಮವಾಗಿ ಬರುವುದು ಕ್ರಿ.ಶ. ೧೫೫೫ರ ಪೋರ್ತುಗೀಸ್ ದಾಖಲೆಯಲ್ಲಿ ಆದುದರಿಂದ ಇವಳು ಆ ವರ್ಷ ಅಥವಾ ಸ್ವಲ್ಪ ಹಿಂದೆ ಪಟ್ಟಕ್ಕೆ ಬಂದಿರಬೇಕು ಎಂದು ಅಭಿಪ್ರಾಯ ಪಡಬಹುದು.

ಇದೇ ಪ್ರವಾಸಿಯ ಹೇಳಿಕೆಯಂತೆ ಈ ಅಬ್ಬಕ್ಕದೇವಿಯು ಬಂಗರಸನನ್ನು ಮದುವೆಯಾಗಿದ್ದಳು.[೩] ಇವಳ ಆಳ್ವಿಕೆಯ ಕಾಲದಲ್ಲಿ ಬಂಗರಾಜ್ಯದಲ್ಲಿ ಮೂವರು ಆಳಿದ್ದರು. ಇವರುಗಳು ಯಾರೆಂದರೆ ಇಮ್ಮಡಿ ಕಾಮರಾಯ ಬಂಗ (೧೫೫೮-೧೬೧೧), ವೀರನರಸಿಂಹ ಲಕ್ಷ್ಮಪ್ಪರಸಬಂಗ IV (೧೬೧೩-೧೬೩೧) ಮತ್ತು ವೀರನರಸಿಂಹ ಶಂಕರದೇವಿ (೧೬೩೧-೧೬೪೬)[೪]. ಅಬ್ಬಕ್ಕದೇವಿ ಮದುವೆಯಾದ ಬಂಗರಾಜನು ಹೆಸರನ್ನು ಪಿಯತ್ರೋದೆಲ್ಲಾವೆಲ್ಲ ಸ್ಪಷ್ಟವಾಗಿ ತಿಳಿಸಿಲ್ಲ. ಆದರೆ ಇವನ ಈ ಹೇಳಿಕೆಯು ವೀರನರಸಿಂಹ ಲಕ್ಷ್ಮಪ್ಪರಸ IV ನನ್ನು ಸೂಚಿಸುತ್ತದೆ. ಇದನ್ನು ಐಗಳ್ ಮತ್ತು ಕಾಮತರು ಒಪ್ಪಿಕೊಂಡಿದ್ದಾರೆ.[೫] ಆದರೆ ಈ ಹೇಳಿಕೆಯನ್ನು ಒಪ್ಪಿಕೊಳ್ಳುವುದರಲ್ಲಿ ಈ ಕೆಳಗಿನ ತೊಡಕುಗಳಿವೆ. ಒಂದನೆಯದಾಗಿ ಪೋರ್ತುಗೀಸ್ ದಾಖಲೆ (೧೫೫೭ರದ್ದು) ಃಯು ಚೌಟರಾಣಿ ಮತ್ತು ಬಂಗರಸ ತೀವ್ರ ರೀತಿಯಲ್ಲಿ ಘರ್ಷಣೆ ನಡೆಸುತ್ತಿದ್ದರೆಂದು ತಿಳಿಸಿ ಇವರಿಬ್ಬರು ವಿರುದ್ಧವಾಗಿ ವರ್ತಿಸುತ್ತಿದ್ದರೆಂದು ದಾಖಲಿಸಿದೆ. ಈ ಕಾಲದಲ್ಲಿ ಬಂಗರಸ ಕಾಮರಾಯನು ಇದ್ದನೆಂದು

---

೧. The voyage of Francois Pyard Vol I ಪು. ೨೩೬ ಕ್ರಿ.ಶ. ೧೬೦೦ ರಲ್ಲಿ ರಚಿಸಿದ ಭಾರತದ ನಕಾಶೆಯಲ್ಲಿ ಉಳ್ಳಾಲದ ವ್ಯಾಪಾರ ಮಾಲ್ಯವಿನವರೆಗೂ ಮತ್ತು ಇನ್ನಿತರ ದ್ವೀಪಗಳಿಗೂ ಪ್ರಸರಿಸಿತ್ತು ಎಂದು ದಾಖಲಿಸಿವೆ.

೨. ಕ್ರಿ.ಶ. ೧೬೨೩ರಲ್ಲಿ ಬಂದ ಪ್ರವಾಸಿ ದೆಲ್ಲಾವೆಲ್ಲೆ ಈ ರಾಣಿಗೆ ಹೆಚ್ಚು ಕಡಿಮೆ ೪೦ ವರ್ಷ ಆಗಿತ್ತು ಎಂದು ತಿಳಿಸಿದ್ದಾನೆ. ನೋಡಿ The Travets of Pletro Dello Valle II ಪು. ೩೦೭

೩. ಡೆಲ್ಲಾವೆಲ್ಲೆ ಅದೇ ಗ್ರಂಥ ಪು. ೩೧೩.

೪. ಸಿವೆಲ್ - ಅದೇ ಗ್ರಂಥ ಪು. ೨೭೧ ಶಾ.ಶಕ ೧೫೩೩ರ ಶಿಲಾಶಾಸನ ಬಂಗಾಡಿಯ ಶಾಂತೇಶ್ವರ ಬಸದಿಯಲ್ಲಿದದ್ದು ನೋಡಿ ಉಮಾನಾಥ ಶೆಣೈ ಬಂಗರ ಇತಿಹಾಸ ಪು. ೪೨ ಐಗಳ, ಮಂಜೇಶ್ವರ ಪರಿಶಿಷ್ಟನಂಬ ೧. ಪೋರ್ತುಗೀಸರ ೧೬೩೧ರ ದಾಖಲೆ ಪತ್ರ ನೋಡಿ Instrucoes No. 1- 1630-40 ಮೊರೈಯಿಸ್ ಅದೇ ಗ್ರಂಥ ಪು. ೭೫-೭೬ ಬಿ.ಎ. ಸುಲೆತ್ತೂರು. Three Madras Museum Copper Plate grants of ಶಕ ೧೫೪೪ - ೧೫೬೭ and ೧೫೬೬ - "Journal of Bombay Historical Society" (1929) ಪು. ೮೧, ೮೭-೮೯.

೫ ಐಗಳ - ಇತಿಹಾಸ ಪು. ೨೭೮. ಕಾಮತ್ - ಅದೇ ಗ್ರಂಥ ಪು. ೧೬

೬. ಹೆರಾಸ - ಅದೇ ಗ್ರಂಥ ಪು ೪೨೫

ತಿಳಿಯುತ್ತದೆ. ಲಕ್ಷ್ಮಪ್ಪರಸ ಪಟ್ಟಕ್ಕೆ ಬಂದದ್ದು ೧೬೧೧ರಲ್ಲಿ. ಇವನ ಅರ್ಧಾಂಗಿ ಶಂಕರದೇವಿಯ ವಂಶದವಳು ಎಂದು ಮೂಲರು ಬಂಗಾಡಿ ಶಾಸನ[೭] ತಿಳಿಸಿದ್ದು ಇಲ್ಲಿ ಗಮನಿಸುವ ಅವಶ್ಯಕತೆ ಇದೆ. ವಿದ್ವಾಂಸರು ಅಭಿಪ್ರಾಯಪಟ್ಟಂತೆ ಅಬ್ಬಕ್ಕದೇವಿಯ ಗಂಡ ಲಕ್ಷ್ಮಪ್ಪರಸನಾಗಿದ್ದರೆ ಇವನು ಈ ರಾಣಿಗಿಂತ ಪ್ರಾಯದಲ್ಲಿ ಸಣ್ಣವನಾಗುತ್ತಾನೆ. ಇದು ಸಾಧ್ಯವಿದ್ದರೆ ಈ ಹೇಳಿಕೆ ಒಪ್ಪಿಕೊಳ್ಳಬಹುದು. ಆದರೆ ಆಗಿನ ಸಾಮಾಜಿಕ ರೂಢಿ ನಿಯಮದಂತೆ ಹೆಂಡತಿಯು ಗಂಡನಿಗಿಂತ ವಯಸ್ಸಿನಲ್ಲಿ ಸಣ್ಣವಳಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಬ್ಬಕ್ಕದೇವಿಯ ಗಂಡ ಕಾಮರಾಯನಾಗಿರಬೇಕು. ಪ್ರಿಯತ್ರೊ ದೆಲ್ಲೆವೆಲ್ಲ ಹೇಳಿದಂತೆ ಚೌಟರಾಣಿ ಮತ್ತು ಬಂಗರಾಜನ ವೈವಾಹಿಕ ಜೀವನವು ಕೆಲವೇ ವರ್ಷಗಳಲ್ಲಿ ಕಲಹ ಮತ್ತು ದ್ವೇಷಕ್ಕೆ ತಿರುಗಿತು ಎಂಬುದನ್ನು ಗಮನಿಸಿದಾಗ ಮೇಲೆ ತಿಳಿಸಿದ ವ್ಯಕ್ತಿಯೇ ಅಬ್ಬಕ್ಕಳ ಗಂಡನಾಗಿರಬೇಕು ಎಂದು ಅಭಿಪ್ರಾಯಪಡಬಹುದು.

ಕಿರಿಯ ಅಬ್ಬಕ್ಕದೇವಿ ಈ ಹಿಂದೆ ತಿಳಿಸಿದಂತೆ ರಾಜನೀತಿ ಚತುರೆ, ತೀರಾ ಧೈರ್ಯವಂತೆ ಮತ್ತು ಸ್ವಾಭಿಮಾನಿ. ಇವಳು ಪಟ್ಟಕ್ಕೆ ಬಂದ ಕೂಡಲೆ (೧೫೬೫) ಮಾಡಿದ ಮೊದಲ ಕೆಲಸ ಈ ಹಿಂದೆ ಪೋರ್ತುಗೀಸರಿಗೆ ಕೊಡುತ್ತಿದ್ದ ಕಪ್ಪವನ್ನು ನಿಲ್ಲಿಸಿದ್ದು. ಇದರೊಂದಿಗೆ ಉಳ್ಳಾಲದಲ್ಲಿ ಭಾರಿ ದೊಡ್ಡ ಪ್ರಮಾಣದ ಕೋಟೆಯನ್ನು ಕಟ್ಟಿದ್ದು.[೮] ಹಿಂದೆ ಪೋರ್ತುಗೀಸರು ಆ ಕೋಟೆಯನ್ನು ಧ್ವಂಸ ಮಾಡಿದ್ದರು. ಈ ಕಟ್ಟಿದ ಕೋಟೆ ಪೋರ್ತುಗೀಸರ ವ್ಯಾಪಾರ ಹಿತಾಸಕ್ತಿಗೆ ಭಂಗವಾಗುವುದೆಂದು ಇವರ ಅಧಿಕಾರಿ ಹೆದರಿಕೆಯನ್ನು ವ್ಯಕ್ತಪಡಿಸಿದ್ದ.

ನೇತ್ರಾವತಿಯ ದಕ್ಷಿಣ ದಂಡೆಯಲ್ಲಿದ್ದ ಈ ಕೋಟೆಗೆ ೧೦-೧೧ ಅಂಗುಲವಿದ್ದ ಗೋಡೆ ಇತ್ತು. ಇದರ ಮೇಲೆ ಕೆಲವು ಗೋಪುರಗಳನ್ನು ಕಟ್ಟಿ ಇದರಲ್ಲಿ ಮದ್ದು ಗುಂಡುಗಳನ್ನು ಶೇಖರಿಸಿಟ್ಟಿದ್ದರು. ಈ ಕೋಟೆಯ ರಕ್ಷಣೆಗೆ ೫೦೦ ಜನ ನುರಿತ ಸೈನಿಕರು ಯಾವಾಗಲೂ ಸಜ್ಜಾಗಿದ್ದರು. ನೇತ್ರಾವತಿ ನದಿಯ ದಕ್ಷಿಣಕ್ಕೆ ಉಳ್ಳಾಲದವರೆಗೆ ಈ ರಾಣಿ ೧೧೦೦ ಸಜ್ಜಾದ ಸೈನಿಕರನ್ನು ಇಟ್ಟಿದ್ದಳು. ಈ ರಕ್ಷಣಾ ಕ್ರಮ ನಿಜವಾಗಿಯೂ ಪೋರ್ತುಗೀಸರಿಗೆ ಭಯವನ್ನುಂಟು ಮಾಡಿತ್ತು, ಎಂದು ಕುಟೊ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೯] ಈ ಕೋಟೆಯ ರಚನೆಯಿಂದ ಧೈರ್ಯಗೊಂಡ ರಾಣಿ ಅಬ್ಬಕ್ಕ ಪೋರ್ತುಗೀಸರಿಗೆ ವಾರ್ಷಿಕವಾಗಿ

---

೭ ಉಮಾನಾಥ ಶೆಣೈ - ಬಂಗರ ಇತಿಹಾಸ ಪು ೪೨

೮ ಫೆಬ್ರವರಿ ೧೮ ಮತ್ತು ೨೫ರಂದು ೧೫೬೫ ಪೋರ್ಚುಗೀಸ್ ದೊರೆಯು ಗೋವಾ ವೈಸ್‌ರಾಯನಿಗೆ ಕಳುಹಿಸಿದ ಆದೇಶ ಪತ್ರ - ಕುನ್ಯಾರಿವಾಲಾ - ಅದೇ ಗ್ರಂಥ III ಪು. ೪೭೮-೫೦೩ ಶಾಸ್ತ್ರಿ ಬಿ. ಎಸ್. ಅದೇ ಗ್ರಂಥ ಪು ೧೨೫ ಕುಟೊ Asia Decada

೯. ಅದೇ ಗ್ರಂಥ ಶಾಸ್ತ್ರಿ ಬಿ. ಎಸ್. ಅದೇ ಗ್ರಂಥ ಪು. ೧೩೧ - ೧೩೪

ಕೊಡುವ ಕಪ್ಪವನ್ನು ನಿಲ್ಲಿಸಿದಳು. ಇಷ್ಟೆಲ್ಲದೆ ಪೋರ್ತುಗೀಸರಿಗೆ ಉಳ್ಳಾಲದಲ್ಲಿ ಈ ಹಿಂದೆ ನೀಡಿದ್ದ ವ್ಯಾಪಾರ ಸವಲತ್ತುಗಳನ್ನು ಹಿಂದಕ್ಕೆ ಪಡೆದಳು. ಆಹ್ವಾನಿತ ವಿದೇಶೀ ವರ್ತಕರಿಗೆ ಮಾತ್ರ ತನ್ನ ರಾಜ್ಯದಲ್ಲಿ ವ್ಯಾಪಾರ ಮಾಡಲು ಈ ರಾಣಿ ಪ್ರೋತ್ಸಾಹ ಕೊಟ್ಟಳು. ವಾಣಿಜ್ಯ ಬೆಳೆಗಳ ವ್ಯಾಪಾರವನ್ನು ಸಾಗರೋತ್ತರ ಕಡೆಗೆ ವಿಸ್ತರಿಸಿದಳು. ಇದರೊಂದಿಗೆ ಈ ರಾಣಿ ತನ್ನದೇ ಆದ ಹಡಗು ಮಂಜಿಗಳನ್ನು ಕಟ್ಟಿಸಿ ಇವುಗಳಲ್ಲಿ ಅಕ್ಕಿ, ಬಟ್ಟೆ, ತೆಂಗಿನ ಕಾಯಿ, ಕಬ್ಬುಗಳನ್ನು ಇರಿಸಿ ರಫ್ತು ಮಾಡಿದಳು. ಇದರಿಂದ ಇವಳ ರಾಜ್ಯಕ್ಕೆ ಲಾಭ ಉಂಟಾಯಿತು. ಇದಕ್ಕೆ ಪೋರ್ತುಗೀಸ್‌ರು ಪ್ರತಿಭಟಿಸಿದರೂ ರಾಣಿ ಅದನ್ನು ಉಪೇಕ್ಷಿಸಿದಳು. ಅಬ್ಬಕ್ಕದೇವಿ ಕೋಟೆ ರಚಿಸಿದ್ದು ಪೋರ್ತುಗೀಸರಿಗೆ ಗಲಿಬಿಲಿಯನ್ನುಂಟು ಮಾಡಿತೆಂದು ಕ್ರಿ.ಶ. ೧೫೬೮ರ ಪತ್ರದಿಂದ ತಿಳಿದು ಬರುತ್ತದೆ. ಈ ಕೋಟೆಯನ್ನು ನಾಶಪಡಿಸಬೇಕೆಂದು ಪೋರ್ತುಗೀಸ್ ಅಧಿಕಾರಿಗಳು ಈ ರಾಣಿಯ ಮೇಲೆ ಒತ್ತಾಯ ತಂದರು. ಈ ಕೋಟೆಯನ್ನು ನಾಶಪಡಿಸದೆ ಈ ರಾಣಿಯೊಡನೆ ಒಪ್ಪಂದ ಮಾಡಿಕೊಳ್ಳಬಾರದೆಂದು ಸ್ಪೈಯನ್ ಅರಸನು ಗೋವೆಯ ವೈಸ್‌ರಾಯನಿಗೆ ಆದೇಶವನ್ನಿತ್ತನು. ಕೊನೆಗೆ ಕ್ರಿ.ಶ. ೧೫೭೦ರಲ್ಲಿ ಅವರು ಈ ಕೋಟೆಯನ್ನು ಹಾಳು ಮಾಡಲು ಶಕ್ತರಾದರೆಂದು ಅವರ ದಾಖಲೆಗಳು ಹೇಳಿವೆ.[೧೦]

ಈ ತನ್ಮಧ್ಯೆ ಅಬ್ಬಕ್ಕದೇವಿಗೂ (ಅವಳ ಗಂಡ) ಬಂಗರಸ ಕಾಮರಾಯನಿಗೂ ವಿರಸ ಹುಟ್ಟಿ ಅದು ವೈಷಮಕ್ಕೆ ಹೋಯಿತೆಂದು ಅದೇ ವರ್ಷದ ದಾಖಲೆಯು ತಿಳಿಸುತ್ತದೆ. ಬಂಗರಾಜನು ಸೇರಾರಾಜನಿಗೆ (Serra) ಪ್ರೋತ್ಸಾಹ ಕೊಟ್ಟನೆಂದು ಈ ದಾಖಲೆಯಿಂದ ತಿಳಿದುಬರುತ್ತದೆ. ಇದರಿಂದ ಪ್ರೇರಿತನಾದ ಸೇರಾರಾಜನು ಚೌಟರಾಜ್ಯದ ಮೇಲೆ ದಾಳಿ ಮಾಡಿದನು.[೧೧] ಇದರಿಂದ ಯುದ್ಧವಾಯಿತು. ಈ ಸೇರಾರಾಜ ಮೂಲಂಗಡಿಯ ಮೂಲರೆಂದು ಕೆಲವರು ಅಭಿಪ್ರಾಯಪಟ್ಟರೆ ಇನ್ನು ಕೆಲವರ ಅಭಿಪ್ರಾಯದಂತೆ ಈ ಅರಸನು ಮಲಬಾರಿನ ಕರಾವಳಿಯಲ್ಲಿರುವ ಕಾಸರಗೋಡು ಸಮೀಪವಿರುವ ರಾಜ್ಯದವನಾಗಿರಬೇಕು.[೧೨] ಇವುಗಳಲ್ಲಿ ಮೊದಲನೆಯ ಅಭಿಪ್ರಾಯ ಸರಿಯೆಂದು ಕಾಣುತ್ತದೆ. ಏಕೆಂದರೆ ಬಂಗರಾಜನಿಗೂ ಬೈಲಗಂಡಿಯ ಮೂಲರಿಗೂ ವೈವಾಹಿಕ ಸಂಬಂಧವಿದೆ[೧೩] ಬಂಗ - ಚೌಟರ ಘರ್ಷಣೆಯು

---

೧೦ ಹೆರಾಸ ಅದೇ ಗ್ರಂಥ ೪೨೫ ಈ ಪತ್ರ ೫ ಫೆಬ್ರವರಿ ೧೫೭೦ರಂದು ಬರೆದದ್ದು ಕುನ್ಯಾರಿವಾಲಾ ಅದೇ ಗ್ರಂಥ ಪು ೬೭೭ ಮೊರೈಯಿಸ್ ಅದೇ ಗ್ರಂಥ ಪು ೧೪.

೧೧ ಇದೆ

೧೨ ಸ್ವಾಮಿನಾಥನ್ - Nayakan of ikkeri (Madras 1953) ಪು. ೬೬

೧೩ ನೋಡಿ ಬಯ್ಯಲಂಗಡಿಯ ಶಾಸನ ೧೫೩.೩ ಶಕ.

ಪೋರ್ತುಗೀಸರ ಹಿತಾಸಕ್ತಿಗೆ ವಿರುದ್ಧವಾಗಿದ್ದಿತ್ತೆಂದೂ ಇವರಿಬ್ಬರ ಸಂಬಂಧವನ್ನು ಸುಧಾರಿಸುವ ಅವಶ್ಯಕತೆ ಇದೆ ಎಂದೂ ಇವರು ಮನಗಂಡಿದ್ದರು. ಇವರ ಪ್ರಯತ್ನದ ಫಲವೋ ಅಥವಾ ಇನ್ನಿತರ ಅಗೋಚರವಾದ ಕಾರಣಗಳಿಂದಲೋ ಈ ಯುದ್ಧ ನಿಂತು ಬಂಗ - ಚೌಟರಾಣಿಯ ಸಂಬಂಧ ಉತ್ತಮಗೊಂಡಿತು.

ಅಬ್ಬಕ್ಕದೇವಿ ಮತ್ತು ಬಂಗರಾಜ ಕಾಮರಾಯರು ಒಂದಾಗಿ ಮಲಬಾರಿನ ಕುಞ್ಞಾಲಿಗೆ ಪೋರ್ತುಗೀಸರ ವಿರುದ್ಧ ಸಹಾಯ ಮಾಡುವುದಕ್ಕೆ ಮುಂದಾದರು. ಇದು ಕ್ರಿ.ಶ. ೧೫೯೯ರ ಪೋರ್ತುಗೀಸ್ ದಾಖಲೆಯಲ್ಲಿ ನಮೂದಿತವಾಗಿದೆ. ಇದು ಪೋರ್ಚುಗೀಸರಿಗೆ ಅತ್ಯಂತ ಕಳವಳವನ್ನುಂಟು ಮಾಡಿತು. ಇದನ್ನು ತಪ್ಪಿಸಲು ಗೋವೆಯ ವೈಸರಾಯ ಆಂದ್ರೆ ಪುರಟಾಡೊ (Andre Furtado) ನನ್ನು ಮಂಗಳೂರಿಗೆ ಕಳುಹಿಸಿದರು. ಕುಞ್ಞಾಲಿಗೆ ಸಹಾಯ ಮಾಡಬಾರದೆಂದು ಸಲಹೆಯನ್ನು ಇವರಿಬ್ಬರಿಗೂ ನೀಡಿ ಯಶಸ್ವಿಯಾದನೆಂದು ಇದೇ ದಾಖಲೆಯಲ್ಲಿದೆ.[೧೪] ಇತ್ತ ಅಬ್ಬಕ್ಕಳು ಮಲಬಾರಿನ ರಾಜರೊಡನೆ ನಿಕಟ ಸಂಪರ್ಕವನ್ನು ಸ್ಥಾಪಿಸುವುದನ್ನು ನಿಲ್ಲಿಸಲಿಲ್ಲ. ಕಲ್ಲಿಕೋಟೆಯ ಜಾಮೋರಿನ್‌ನೊಡನೆಯೂ ರಾಜಕೀಯ ಸಂಪರ್ಕವನ್ನು ಸ್ಥಾಪಿಸಿದಳು. ಇದನ್ನು ಸಾಧಿಸಲು ತನ್ನ ರಾಜ್ಯದ ನೌಕಾದಳಪತಿ ಆಲಿಖಾನನನ್ನು ಕಲ್ಲಿಕೋಟೆಗೆ ಪತ್ರದೊಂದಿಗೆ ಕಳುಹಿಸಿದಳು[೧೫] ರಾಣಿ ಅಬ್ಬಕ್ಕದೇವಿ. ಇವನು ಜಾಮೋರಿನನ ಆಸ್ಥಾನಕ್ಕೆ ಹೋಗಿ ಈ ರಾಣಿಯು ಕಳುಹಿಸಿದ ಸಂದೇಶವನ್ನು ರಾಜನಿಗೆ ತಲುಪಿಸಿದನು. ಈ ಸಂದೇಶ ರೀತಿಯಲ್ಲಿದ್ದಿತು. ಕಲ್ಲಿಕೋಟೆಯ ರಾಜ ಮಹಾರಾಜ ಜಾಮಾರಿನ ದೊರೆಗಳಿಗೆ ಬಲ್ಲಾಳ ಮಾಗಣೆಯ ರಾಣಿ ಅಬ್ಬಕ್ಕದೇವಿ ಮಾಡುವ ವಿಜ್ಞಾಪನೆಗಳು. ನನ್ನ ತಾಯಿ ಹಿರಿಯ ಅಬ್ಬಕ್ಕದೇವಿ ಕಾಲದಲ್ಲಿ ಆಗಿನ ಜಾಮೋರಿನ್ ದೊರೆಗಳು ಎಲ್ಲಾ ರೀತಿಯ ಸಹಕಾರ ಕೊಟ್ಟಿದ್ದರು. ಇದು ನಮ್ಮ ಕಾಲದಲ್ಲೂ ಮುಂದುವರಿಯಬೇಕು ಎಂಬುದು ನಮ್ಮ ಅಪೇಕ್ಷೆ. ನಮ್ಮ ವಿನಂತಿ ಎಂದರೆ ಪರಸ್ಪರ ಎರಡು ಸಂಸ್ಥಾನಗಳ ವ್ಯಾಪಾರ ವೃದ್ಧಿಯಾಗಲು ಅವಕಾಶ ಮಾಡಿಕೊಡಬೇಕು. ಇದು ಮೊದಲನೇ ಆಶಯ. ಎರಡನೆಯದಾಗಿ ಕೊಲ್ಲಿ ರಾಷ್ಟ್ರಗಳಿಗೆ ಹೋಗುವ ನಿಮ್ಮ ಪತ್ತೆಮಾರಗಳೊಂದಿಗೆ ನಮ್ಮದು ಹಾಯಿ ಹಡಗು ಸೇರುತ್ತವೆ. ಒಟ್ಟಿಗೆ ಹೋದಾಗ ನಮ್ಮಿಬ್ಬರ ಕಡುವೈರಿಗಳಾದ ಕಡಲ್ಗಳ್ಳರಾದ ಪೋರ್ತುಗೀಸರ ಭಯದಿಂದ ಮುಕ್ತರಾಗಬಹುದು. ಒಗ್ಗಟ್ಟಿನಿಂದಿದ್ದರೆ ನಮ್ಮನ್ನು ಯಾರೂ ಏನೂ ಮಾಡಲಾಗುವುದಿಲ್ಲ.

---

೧೪ ಡಾನ್‌ವರಸ್ ಇದೇ ಗ್ರಂಥ ಭಾಗ ೨ ಪು ೧೧೭

೧೫ ಅನುಪಮ ನಿರಂಜನ - ಅದೇ ಗ್ರಂಥ ಮ. ೧೨೫

ಈ ಪೋರ್ಚುಗೀಸರು ಇತ್ತಿತ್ತಲಾಗಿ ತುಳುವ ರಾಜ್ಯದಲ್ಲಿ ಬಲಾಢ್ಯರಾಗುತ್ತಿದ್ದಾರೆ. ಇವರ ಸೊಕ್ಕು ಅಡಗಿಸಬೇಕು. ಯುದ್ಧದ ಸಮಯದಲ್ಲಿ ನಿಮ್ಮ ಸೈನ್ಯದ ನೆರವನ್ನು ನಾವು ಕೋರುತ್ತೇವೆ.[೧೬]

ತಮ್ಮ ಶ್ರೇಯೋಭಿಲಾಷಿ

ರಾಣಿ ಚೌಟ ಅಬ್ಬಕ್ಕದೇವಿ

ಈ ಪತ್ರವು ರಾಣಿ ಅಬ್ಬಕ್ಕದೇವಿ ಮತ್ತು ಕಲ್ಲಿಕೋಟೆಯ ಜಾಮೋರಿನರೊಳಗೆ ಒಂದು ಒಪ್ಪಂದ ಆಗಲು ಸಹಕಾರಿಯಾಯಿತು. ಈ ಒಪ್ಪಂದದಂತೆ ಜಾಮೋರಿನ ಹಡಗುಗಳೊಂದಿಗೆ ಉಳ್ಳಾಲದ ಪತ್ತೇಮಾರಿಗಳಲ್ಲಿ ಸಾಮಾನು ತುಂಬಿ ಜೊತೆ ಜೊತೆಯಾಗಿ ಕೊಲ್ಲಿ ರಾಷ್ಟ್ರಗಳೊಡನೆ ವ್ಯಾಪಾರ ನಡೆಸಿದವು. ಇದರೊಂದಿಗೆ ಕಲ್ಲಿಕೋಟೆಯಲ್ಲಿ ಕುಟ್ಟಿಆಲಿಯ ನೇತೃತ್ವದಲ್ಲಿ ರಚಿಸಿದ ಪೆರೋಗಳನ್ನು[೧೭] ಉಳ್ಳಾಲದಲ್ಲಿ ನಿರ್ಮಿಸಲಾಯಿತು.

ಈ ತನ್ಮಧ್ಯೆ ಅಬ್ಬಕ್ಕ ಮತ್ತು ಬಂಗರಸ ಕಾಮರಾಯರೊಳಗಿನ ಸಂಬಂಧ ತೀವ್ರ ಕೆಟ್ಟು ವಿರಸಕ್ಕೆ ಹೋಯಿತು. ಜೋಡಿಸಲು ಸಾಧ್ಯವಾಗದಂತೆ ಇವರಿಬ್ಬರ ಮನಸ್ಸು ಮುರಿಯಿತು. ಇದರಿಂದಾಗಿ ಈ ರಾಣಿ ತನ್ನ ಮದುವೆಯ ಸಂದರ್ಭದಲ್ಲಿ ಬಳುವಳಿಯಾಗಿ ಗಂಡನ ಮನೆಯಲ್ಲಿ ಕೊಟ್ಟಿದ್ದ ಆಭರಣ ಮತ್ತು ವಸ್ತ್ರಗಳನ್ನೆಲ್ಲಾ ಹಿಂದಿರುಗಿಸಿದಳು ಎಂದು ದೆಲ್ಲಾವಲ್ಲೆಯ ವರದಿಯಿಂದ ತಿಳಿದುಬರುತ್ತದೆ.[೧೮] ಈ ಕಲಹ ಮತ್ತು ವಿರಸಕ್ಕೆ ಹಲವಾರು

---

೧೬. ಇದೇ ಗ್ರಂಥ ೧೩೪. ಈ ಪತ್ರದಲ್ಲಿ ತಾರೀಕು ನಮೂದಿಸಲಿಲ್ಲ. ಇದರ ಭಾಷೆಯ ರಚನೆ ಇತ್ತೀಚೆಗಿನವು. ಆದರೆ ಇದರಲ್ಲಿ ತಿಳಿಸಿದ ಸಂಗತಿಗಳನ್ನು ಸಮಕಾಲೀನ ದಾಖಲೆಗಳು ಅಪರೋಕ್ಷವಾಗಿ ಸಮರ್ಥಿಸುತ್ತವೆ. ಆದುದರಿಂದ ಈ ಪತ್ರದ ನೈಜತೆಯನ್ನು ಒಪ್ಪಿಕೊಂಡರೆ ತಪ್ಪಾಗುವುದಿಲ್ಲ. ನೋಡಿ ಡಾನ್‌ವರಸ್ - ಅದೇ ಗ್ರಂಥವು ಪು. ೧೧೭. ೧೯ ಬಿ.ಕೆ. ನಂಬಿಯಾರ - Kirjalis Admirais of Cailcut (Bombay 1963) ಪು. ೧೨೬. ಸಮಕಾಲೀನ ಬರಹಕಾರ ಕುಟೊ, ಅಬ್ಬಕ್ಕ ಮತ್ತು ಜಾಮಾರಿನರೊಳಗೆ ನಿಕಟ ಸಂಪರ್ಕವಿದ್ದುದನ್ನು ವರದಿ ಮಾಡಿದ್ದಾನೆ. ನೋಡಿ ಡಿಕೆಡಾ ಡಾ. ವಿಸ್ಯ Decado Da Asia IV Pt III ಪು. 61-63 ಈ ಹಿನ್ನಲೆಯಲ್ಲಿ ಅಬ್ಬಕ್ಕದೈವಿಯ ಪತ್ರವು ೧೫೫೫ರ ಅಂತ್ಯದಲ್ಲಿ ಬರೆದಿರಬೇಕು.

೧೭. ಹೆರೋ ಉದ್ದನೆಯ ನಾವೆ. ಇದರಲ್ಲಿ ಸುಮಾರು ಮೂವತ್ತು ನಲ್ವತ್ತು ಜನ ಹುಟ್ಟು ಹಾಕುವವರು ಕುಳಿತುಕೊಳ್ಳಬಹುದು. ಈ ನಾವೆ ಬಹಳ ವೇಗವಾಗಿ ಚಲಿಸುತ್ತವೆ. ಆಳವಿಲ್ಲದ ನೀರಿನಲ್ಲೂ ಇವು ಹೋಗಬಲ್ಲುದಾಗಿದೆ. ವಿವರ ನೋಡಿ, ನಂಬಿಯಾರ - ಅದೇ ಗ್ರಂಥವು ಪು. ೧೪೭. ಅನುಪಮ ನಿರಂಜನ ಅದೇ ಗ್ರಂಥ ಪು. ೧೩೩-೧೩೯, ೧೪೦

೧೮ ಇದೇ ಗ್ರಂಥ ಪು ೩೧೩ ಐಗಳ ದ.ಕ. ಇತಿಹಾಸ ಪು. ೨೭೯.

ಕಾರಣಗಳನ್ನು ಜನರು ನೀಡಿದ್ದಾರೆ. ಜನಜನಿತ ಹೇಳಿಕೆಯಂತೆ, ಬಂಗರಾಜನಿಗೆ ಅಬ್ಬಕ್ಕಳ ಮಗಳನ್ನು ತನ್ನ ಸೋದರಳಿಯ ಕಾಮರಾಯ (Sic ಲಕ್ಷ್ಮಪ್ಪರಸ)ನಿಗೆ ಮದುವೆ ಮಾಡಿಕೊಡಬೇಕೆಂಬ ಮನಸ್ಸಿದ್ದರೆ, ಅಬ್ಬಕ್ಕ ಇದನ್ನು ವಿರೋಧಿಸಿದಳು. ಇಷ್ಟಲ್ಲದೆ ತನ್ನ ಮಗಳಿಗೆ ಯೋಗ್ಯನಾದ ವರನನ್ನು ಹುಡುಕಿ, ತನ್ನ ಗಂಡ ಬಂಗರಾಜನನ್ನು ಉಪೇಕ್ಷಿಸಿ ಮದುವೆ ಮಾಡಿಸಿದಳು. ಈ ಕ್ರಮಕ್ಕೆ ಆಗಿನ ರೂಢಿಯ ನಿಯಮದ ಸಮರ್ಥನೆ ಇದ್ದಿತು. ಈ ರೂಢಿ ನಿಯಮದಂತೆ ಮಗಳ ಮೇಲಿನ ಸಂಪೂರ್ಣಅಧಿಕಾರ ತಾಯಿಗೆ ಇತ್ತು. ಆದರೆ ಬಂಗರಸ ಅಬ್ಬಕ್ಕಳ ಮಗಳನ್ನು ಅಪಹರಿಸಿಕೊಂಡು ಹೋಗುವ ಅಯಶಸ್ವಿ ಪ್ರಯತ್ನ ಮಾಡಿದ. ಇದು ನಡೆದದ್ದು ಇವಳ ಮಗಳು ಮಂಗಳೂರಿನ ಲೋಕೇಶ್ವರ (Sic ಕದ್ರಿ ಮಂಜುನಾಥೇಶ್ವರ) ದೇವಾಲಯಕ್ಕೆ ಹೋದಾಗ. ಇದರ ಪರಿಣಾಮವಾಗಿ ಬಂಗ ಚೌಟರೊಳಗೆ ಹೊಯಿಕೈಯಾಗಿ ಕೆಲವರು ಸತ್ತರು ಮತ್ತು ಕೆಲವರಿಗೆ ಗಾಯಗಳಾದವು.[೧೯] ಇನ್ನೊಂದು ಹೇಳಿಕೆಯಂತೆ ಪೊಳಲಿ ಜಾತ್ರೆಯ ಸಮಯದಲ್ಲಿ ಬಂಗರಾಜನ ಕಡೆಯವರು ಒಮ್ಮಿಂದೊಮ್ಮೆ ಚೌಟರ ರಾಜ್ಯವನ್ನು ಮುತ್ತಿ ಪೊಳಲಿಯವರೆಗೆ ಮುಂದುವರಿದು ರಾಣಿ ಅಬ್ಬಕ್ಕಳನ್ನು ಬಂಧಿಸಿದರು. ಬಂಧಿಸಿದ ರಾಣಿಯನ್ನು ಬಂಗರಾಜನ ಕಡೆಗೆ ತೆಗೆದುಕೊಂಡು ಹೋದರು. ಅಲ್ಲಿ ಅಬ್ಬಕ್ಕಳಿಗೂ ಅವಳ ಗಂಡ ಬಂಗರಾಜನಿಗೂ ವಾದವಿವಾದ ನಡೆಯಿತು. ರಾಣಿಅಬ್ಬಕ್ಕಳು ಬಂಗರಾಜ ಮತ್ತು ಪೋರ್ತುಗೀಸ್‌ರಿಗಿರುವ ಒಪ್ಪಂದ ಮತ್ತು ಮೈತ್ರಿಗಳನ್ನು ಬಲವಾಗಿ ಖಂಡಿಸಿದರು. ಇವಳ ವಾದ ವೈಖರಿಗೆ ಸೋತ ಬಂಗರಾಜನು ಬಂಧನದಲ್ಲಿದ್ದ ಅಬ್ಬಕ್ಕಳನ್ನು ಬಿಡುಗಡೆ ಮಾಡಿದ[೨೦].

ಸಮಕಾಲೀನ ಬರಹಗಾರ ಅಂತೋನಿಯೊ ಬೊಕೆರೊ ಸಂಗ್ರಹಿಸಿದ ಮಾಹಿತಿಯಂತೆ ಬಂಗರಾಜರು ಚೌಟರಾಣಿಯನ್ನು ರಾಜಕೀಯ ವ್ಯವಹಾರಗಳಲ್ಲಿ ಅವಮಾನಿಸಿದನು. ಇದರಿಂದ ಕುಪಿತಳಾದ ಉಳ್ಳಾಲ ರಾಣಿಯು ಬಂಗರಾಜನೊಡನೆ ಯುದ್ಧಕ್ಕೆ ನಿಂತಳು. ಬಂಗರಾಜನಿಗೆ ಪೋರ್ತುಗೀಸರ ನೆರವು ಇತ್ತು. ಇದನ್ನು ಇವನು ಉಪಯೋಗಿಸಿಕೊಳ್ಳಲು ಪ್ರಯತ್ನಿಸಿದನು.[೨೧] ಪ್ರವಾಸಿ ದೆಲ್ಲಾವಲ್ಲೆ ಅಭಿಪ್ರಾಯದಂತೆ ಅಬ್ಬಕ್ಕದೇವಿಯು ನದಿ (ನೇತ್ರಾವತಿ) ಯಲ್ಲಿ ದೋಣಿ ವಿಹಾರಕ್ಕೆ ಹೋಗುತ್ತಿರುವ ಬಂಗರಾಜ ಆಕೆಯನ್ನು ತನ್ನವರ ಮೂಲಕ ಬಂಧಿಸಿ ತನ್ನ ಬಳಿ ಇರಿಸಿಕೊಂಡ. ಆದರೆ ಈ ರಾಣಿ ಒಳ್ಳೊಳ್ಳೆಯ ಮಾತುಗಳಿಂದ

---

೧೯ ಕಾಮತ್ ಅದೇ ಗ್ರಂಥ ಪು. ೨೨

೨೦. ಕಾಮತ್ ಅದೇ ಗ್ರಂಥವು ೨೩ -೨೭ ಅನುಪಮ ನಿರಂಜನ ಅದೇ ಗ್ರಂಥ ಪು. ಪು. ೧೫೭ - ೧೫೯.

೨೧ ಬೊಕೆರೊ Decads 13 Historia India I ೧೯೩ - ೪ ಶಾಸ್ತ್ರಿ ಬಿಎಸ್ ಕೆಲದಿ ಅರಸರೂ ಹಾಗೂ ಪೋರ್ಚುಗೀಸರು (ಇದು ಕೆಲಿಪೊ ಎಂದು ಪರಿಸ್ಕರಿಸಿ ಮುಂದೆ ತಿಳಿಸಲಾಗಿದೆ) ಪು ೧೪ -೧೫.

ರಾಜನನ್ನು ಮೆಚ್ಚಿಸಿ ಬಿಡುಗಡೆ ಹೊಂದಿ ತನ್ನ ರಾಜ್ಯಕ್ಕೆ ಹಿಂದಿರುಗಿದಳು. ಹೀಗೆ ಬಂದವಳು ತನ್ನ ಸೇಡನ್ನು ತೀರಿಸಿಕೊಳ್ಳಲು ಬಂಗರಸನ ಮೇಲೆ ಯುದ್ಧ ಮಾಡಿದಳು. ಈ ಅರಸನಿಗೆ ಪೋರ್ತುಗೀಸರ ಬೆಂಬಲವಿತ್ತು.[೨೨] ಒಟ್ಟಿನಲ್ಲಿ ಈ ಕಲಹಕ್ಕೆ ಇವರಿಬ್ಬರ ವ್ಯಕ್ತಿತ್ವ ಘರ್ಷಣೆ (Personality Clash), ಈ ರಾಜ್ಯಗಳೊಳಗಿರುವ ಗಡಿ ತಕರಾರು ಮತ್ತು ಈ ಕಲಹದಲ್ಲಿ ಪೋರ್ತುಗೀಸರು ಆಸಕ್ತಿಯನ್ನಿಟ್ಟದ್ದು ಸಾಮಾನ್ಯ ಕಾರಣಗಳೆಂದು ಅಭಿಪ್ರಾಯಪಡಬಹುದು.[೨೩]

ಈ ತನ್ಮಧ್ಯೆ ಕರಾವಳಿ ಕರ್ನಾಟಕದಲ್ಲಿ ಇನ್ನೊಂದು ರಾಜಕೀಯ ಶಕ್ತಿ ಉದಯವಾಯಿತು. ಇದೇ ಕೆಳದಿ ರಾಜ್ಯದ ಉದಯ. ಕ್ರಿ.ಶ. ೧೫೫೦ರ ನಂತರ ಈ ಕೆಳದಿ ನಾಯಕರು ಬಾರಕೂರು - ಮಂಗಳೂರು ರಾಜ್ಯಗಳಲ್ಲಿ ಪ್ರಮುಖ ರಾಜಕೀಯ ಶಕ್ತಿಗಳಾಗಿ ಬೆಳಕಿಗೆ ಬಂದರು. ಕೆಳದಿ ವೆಂಕಟಪ್ಪ ನಾಯಕನ ಆಳ್ವಿಕೆಯ ಕಾಲದಲ್ಲಿ (೧೫೮೪ - ೧೬೨೯) ಈ ಕೆಳದಿ ರಾಜ್ಯವು ಮಂಗಳೂರವರೆಗೆ ಪ್ರಸರಿಸಿತು. ವೆಂಕಟಪ್ಪನು ಮಂಗಳೂರಿನ ಸಮೀಪ ಬೋಳಾರ, ಬಂಗ (ಬಂಗರಾಜನಿಗೆ ಸೇರಿದ್ದು) ಮತ್ತು ಉಳ್ಳಾಲಗಳಲ್ಲಿ ಕೋಟೆ ರಚಿಸಿದ. ಇದೆಲ್ಲಾ ಕ್ರಿ.ಶ. ೧೬೧೧ರ ಸ್ವಲ್ಪ ಹಿಂದೆ ನಡೆದಿರಬೇಕು.[೨೪] ಈ ಪರಿಸ್ಥಿತಿಯನ್ನೆಲ್ಲಾ ವೀಕ್ಷಿಸಿದ ಕಾಮರಾಯನು ಪೋರ್ತುಗೀಸ್ ವೈಸರಾಯನಿಗೆ ಪತ್ರ ಬರೆದು ವೆಂಕಟಪ್ಪನ ಅಧೀನವಿದ್ದ ಮೊಂಬಲಾಂವ್ ಕೋಟೆಯನ್ನು ಮತ್ತು ಉಳ್ಳಾಲ ಪೇಟೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ಪೋರ್ತುಗೀಸ್ ನೌಕಾದಳವೊಂದನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡನು. ತನ್ನ ತೊರೊತಾನೆ (?) ಕೋಟೆಯ ರಕ್ಷಣೆಗೆ ಮೂವತ್ತು ಮಂದಿ ಪೋರ್ತುಗೀಸ್ ಸೈನಿಕರನ್ನು ಒದಗಿಸಿ ಕೊಟ್ಟರೆ ಮೂರು ಸಾವಿರ ಹೊರೆ ಅಕ್ಕಿಯನ್ನು ಕಪ್ಪಕಾಣಿಕೆಯಾಗಿ ಉಳ್ಳಾಲ ರಾಣಿಯಿಂದ ಕೊಡಿಸುವೆನೆಂದು ಇದೇ ಪತ್ರದಲ್ಲಿ ಬರೆದನು.[೨೫]

ಈ ತನ್ಮಧ್ಯೆ ಕಾಮರಾಯ ಬಂಗನು ತೀರಿಕೊಂಡ ಮೇಲೆ ಪಟ್ಟಕ್ಕೆ ಬಂದವ ಇವನ ಅಳಿಯ ಲಕ್ಷ್ಮಪ್ಪರಸ ಬಂಗರಸ ಬಂಗರಾಜ.[೨೬] ಇವನು ಪೋರ್ತುಗೀಸರೊಂದಿಗೆ ಹೆಚ್ಚು

---

೨೨. DellaValle - ಅದೇ ಗ್ರಂಥ ಪು ೩೧೪

೨೩ ಹೆಚ್ಚಿನ ವಿವರ ನೋಡಿ ಬಿ. ಎಸ್. ಸಾಲೆತ್ತೂರ್ ಅದೇ ಲೇಖನ JBHS ಪು. ೮೩ ಉಮಾನಾಥ ಶೆಣೈ ಅದೇ ಗ್ರಂಥ ಪು. ೧೬

೨೪ ಲಿಂಗಣ್ಣ ಕವಿ : ಕೆಳದಿನೃಪ ವಿಜಯಂ (೧೯೭೨ ಮೈಸೂರು) ಪಂಚಮ ಅಶ್ವಾಸ ಪು. ೭೧.

೨೫. Documento Remettidas DA India III ಪು ೨೨೯ ಅಂತೋನಿಯ ಬೊಕರೊ ಅದೇ ಗ್ರಂಥವು ೧೮೫ ಶಾಸ್ತ್ರಿ ಬಿ. ಎಸ್. ಕೆ.ಅ.ಪೊ. ಪು ೧೪ -೨೬.

೨೬. ಬೈಲಂಗಡಿಯ ಶಾಸನ ೧೫೩೩ ಮಂಜೇಶ್ವರ ದಾಖಲೆ.

ನಿಕಟ ಸಂಪರ್ಕವನ್ನು ಮುಂದುವರಿಸಿದ್ದಲ್ಲದೆ ತನ್ನ ಅತ್ತೆ ಅಬ್ಬಕ್ಕಳೊಂದಿಗೆ ವೈರತ್ವವನ್ನು ಹೆಚ್ಚು ಬೆಳೆಸಿಕೊಂಡನು. ಲಭ್ಯವಿದ್ದ ಐತಿಹಾಸಿಕ ದಾಖಲೆಗಳ ಪ್ರಕಾರ ಈ ಬಂಗರಾಜನ ಹೆಂಡತಿ ಮೂಲ ಅರಸು ಮನೆತನದ ಶಂಕರದೇವಿ. ಈ ಮೂಲರು ಬೈಲಂಗಡಿಯಲ್ಲಿ ಆಳುತ್ತಿದ್ದರು. ಬಂಗರಸನ ಮಿತ್ರರು ಇವರು. ಇನ್ನೊಂದು ಹೇಳಿಕೆಯಂತೆ ಇವಳು ಬಂಗರಸ ಲಕ್ಷ್ಮಪ್ಪರಸನು ಅಬ್ಬಕ್ಕಳ ಮೇಲಿನ ಸೇಡಿನಿಂದ ಮಾಡಿಕೊಂಡ ಎರಡನೆಯ ಹೆಂಡತಿ. ಆದರೆ ಇದನ್ನು ಸಮರ್ಥಿಸುವ ಸಮಕಾಲೀನ ದಾಖಲೆಗಳು ಇನ್ನೂ ನಮಗೆ ಸಿಕ್ಕಿಲ್ಲ. ಬಂಗರಸ ಮತ್ತು ಉಳ್ಳಾಲ ಅಬ್ಬಕ್ಕರ ವಿರಸ ಪರಾಕಾಷ್ಠೆಗೆ ಮುಟ್ಟಿದ್ದು.ಕ್ರಿ.ಶ. ೧೬೧೬ರಲ್ಲಿ, ಲಕ್ಷ್ಮಪ್ಪರಸ ಬಂಗನು ಹಲವಾರು ಕುಯುಕ್ತಿಗಳನ್ನು ನಡೆಸಿ ತನ್ನ ಅತ್ತೆಯ ರಾಜ್ಯವನ್ನು ಕಬಳಿಸಲು ಯತ್ನಿಸುತ್ತಿದ್ದನೆಂದು ಗೋವಾದ ಪತ್ರಾಗಾರಾಧಿಕಾರಿ ಅಂತೋನಿಯೊ ಬೊಕೆರೊ ಮಾಹಿತಿಗಳನ್ನು ನೀಡಿದ್ದಾನೆ. ಈ ಬಂಗರಸ ತನ್ನ ನೆರೆಯಲ್ಲಿದ್ದ ಪರ್ವತರಾಜ[೨೬] (King of Mountain)ನ ಸಹಕಾರದಿಂದ ಅಬ್ಬಕ್ಕದೇವಿಯ ರಾಜ್ಯದಲ್ಲಿದ್ದ ಹೆಚ್ಚಿನ ಕೋಟೆಗಳನ್ನು ಗೆದ್ದನೆಂದು ಇದೇ ಬರಹಗಾರನು ತಿಳಿಸಿದ್ದಾನೆ. ಇಷ್ಟಲ್ಲದೆ ಈ ರಾಣಿಯ ವಶವಿದ್ದ ಒಂದೇ ಒಂದು ಕೋಟೆಯನ್ನು ತಕ್ಷಣ ಗೆಲ್ಲುವೆನೆಂದು ಬೆದರಿಕೆ ಹಾಕಿದ್ದನು.[೨೭] ಕೆಳದಿ ವೆಂಕಟಪ್ಪನು ಈ ಉಳ್ಳಾಲ ರಾಣಿಯ ಸಹಾಯಕ್ಕೆ ಬರಬಹುದೆಂಬ ಹೆದರಿಕೆ ಈ ಬಂಗರಾಜನಿಗೆ ಇತ್ತು. ಆದುದರಿಂದ ತಾನು ಹೊಸತಾಗಿ ಚೌಟರಾಣಿಯಿಂದ ಗೆದ್ದ ಸ್ಥಳಗಳನ್ನು ರಕ್ಷಿಸಲು ಹಾಗೂ ತನ್ನ ಸ್ಥಾನವನ್ನು ಕಾಪಾಡಿಕೊಳ್ಳಲು ಒಂದು ನೌಕಾದಳವನ್ನು ಕಳುಹಿಸಬೇಕೆಂದು ಮಂಗಳೂರಿನ ಕೋಟೆಯ ಅಧಿಕಾರಿಯನ್ನು ಕೇಳಿದನು.[೨೮]

ಈ ತನ್ಮಧ್ಯೆ ಇದೇ ವರ್ಷ ಮಲಬಾರಿಗೆ ಹೋಗುತ್ತಿದ್ದ ಬೆರ್ನಾರ್ದು ಪೋರ್ತುಗೀಸ್ ನೌಕಾದಳಾಧಿಕಾರಿಯು ತನ್ನ ಹಡಗುಗಳನ್ನು ಮಂಗಳೂರಿನಲ್ಲಿ ಸ್ವಲ್ಪ ಸಮಯದ ಮಟ್ಟಿಗೆ ಲಂಗರು ಹಾಕಿ ನಿಲ್ಲಿಸಿದರು. ಬಂಗರಸನು ತಕ್ಷಣ ಅವನನ್ನು ಸಂಧಿಸಿ ಸಹಾಯ ಕೊಡಬೇಕೆಂದು

---

೨೬ ಆ ಇಲ್ಲಿ ಉಲ್ಲೇಖಿಸಿದ ಪರ್ವತರಾಜನ ಗುರುತಿಸುವಿಕೆಯಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ಇವೆ. ಫಾದರ ಹೆರಾಸನು ಈ ಪರ್ವತರಾಜ ಕಣ್ಣಾನೂರಿನವನೆಂದು ಒಂದು ಸಲ ಹೇಳಿದರೆ, ಇನ್ನೊಂದು ಸಲ ಈ ರಾಜ ಮೌಂಟ ಡೆಲ್ಲಿಯವನೆಂದು ಸೂಚಿದ್ದಾರೆ. ಡಾ. ಬಿ. ಎಸ್. ಶಾಸ್ತ್ರಿಯವರ ಅಭಿಪ್ರಾಯದಂತೆ ಈ ಅರಸ ಕಳಸ -ಕಾರಕಳದವನು. ನೋಡಿ ಕೆ. ಅಪೂ. ಪು. ೧೩ ಆದರೆ ಕಳಸ ಕಾರ್ಕಳ ರಾಜ್ಯಕ್ಕೆ ಕರಾವಳಿ ಪ್ರದೇಶ ಇಲ್ಲದ ಕಾರಣ ಮತ್ತು ಪೋರ್ತುಗೀಸರ ಚಟುವಟಿಕೆಗಳು ಕರಾವಳಿಗೆ ಸೀಮಿತವಾಗಿದ್ದುದರಿಂದ ಇಲ್ಲಿ ತಿಳಿಸಿದ ಪರ್ವತರಾಜ ಮಲಬಾರ ಕರಾವಳಿಯ ಮೌಂಟ ಡೆಲ್ಲಿಯ ಹತ್ತಿರದವನಾಗಿರಬೈಕು.

೨೭. ಬೊಕೆರೊ ಅದೇ ಗ್ರಂಥ ೨೦೧ ಬಿ.ಎಸ್. ಶಾಸ್ತ್ರಿ ಕೆ. ಅಪೂ. ಪು. ೧೬-೧೭.

೨೮. ಅದೇ ಗ್ರಂಥ ಬಿ. ಎಸ್. ಶಾಸ್ತ್ರಿ ಅದೇ ಗ್ರಂಥ ಪು. ೧೬.

ಕೇಳಿಕೊಂಡನು. ಅಗತ್ಯವಿದ್ದಾಗ ತನ್ನ ನೌಕಾದಳದೊಂದಿಗೆ ಸಹಾಯಕ್ಕೆ ಬರುವುದಾಗಿ ಉತ್ತರಿಸಿದನು. ಸಹಾಯ ಮಾಡಲು ಇದೇ ತಕ್ಕ ಸಮಯವೆಂದು ಬಂಗರಾಜನು ಇನ್ನೊಮ್ಮೆ ಹೇಳಿದನು. ತಾನು ಕೊಚ್ಚಿಗೆ ಹೋಗುವ ಅವಶ್ಯಕತೆ ಇದೆಯೆಂದು ಬೆರ್ನಾದೊ ತಿಳಿಸಿ ಕರಾವಳಿಯಲ್ಲಿರುವ ಇತರ ಪೋರ್ತುಗೀಸ್ ನೌಕಾದಳದವರು ನೆರವು ನೀಡಿಯಾರೆಂದು ಹೇಳಿ ಕೊಚ್ಚಿ ಕಡೆಗೆ ಸಾಗಿದನು. ಇತ್ತ ಮಂಗಳೂರಿನ ಪೋರ್ತುಗೀಸ್ ಅಧಿಕಾರಿಯ ಉತ್ತರವು ಬಂಗರಾಜನಿಗೆ ಪ್ರೋತ್ಸಾಹದಾಯಕವಾಗಿರಲಿಲ್ಲ. ವೈಸರಾಯನ ಆಜ್ಞೆಯಿಲ್ಲದ ತಾನೇನು ಮಾಡಲು ಸಾಧ್ಯವಿಲ್ಲವೆಂದು ಉತ್ತರಿಸಿ, ಈ ಅಧಿಕಾರಿ ವಿಷಯವನ್ನು ವೈಸರಾಯನಿಗೆ ತಿಳಿಸಿದನು. ಉಳ್ಳಾಲ ರಾಣಿ ಅಬ್ಬಕ್ಕಳನ್ನು ಸುಮ್ಮನೆ ಕೆದಕಿದರೆ ತಮಗೆ ಏನೂ ಲಾಭವಿಲ್ಲವೆಂದೂ ಅವಳ ಮೈತ್ರಿಯು ತಮ್ಮ ವ್ಯಾಪಾರಕ್ಕೆ ಹಿತವೆಂದೂ ತಿಳಿದ ವೈಸರಾಯ್‌ಯು ಈ ರಾಣಿಯ ವಿರುದ್ಧ ಬಂಗರಾಜನಿಗೆ ಯಾವ ರೀತಿಯ ಸಹಾಯವನ್ನೂ ಮಾಡಕೂಡದೆಂದು ಮಂಗಳೂರಿನ ಪೋರ್ತುಗೀಸ್ ಅಧಿಕಾರಿಗೆ ಆಜ್ಞೆ ಇತ್ತನು. ಇಷ್ಟಲ್ಲದೆ ಉಳ್ಳಾಲದಲ್ಲಿ ಬಂಗರಾಜನು ಕಟ್ಟಬೇಕೆಂದಿದ್ದ ಕೋಟೆಯನ್ನು ಕಟ್ಟಬಾರದೆಂದು ಈ ವೈಸರಾಯ್ ಅವನಿಗೆ ಹೇಳಿದನು.[೨೯]

ಇತ್ತ ಚೌಟರಾಣಿ ಅಬ್ಬಕ್ಕಳು ಕೆಳದಿ ವೆಂಕಟಪ್ಪ ನಾಯಕನೊಂದಿಗೆ ಮೈತ್ರಿ ಹೊಂದಿ ಬಂಗರಾಜನೊಡನೆ ಸೆಣಸಿಗೆ ಇಳಿದಳು. ಇವಳ ಸಹಾಯಕ್ಕೆ ಮಲಬಾರಿನ ನೌಕೆಗಳು ಬಂದುವು ಮತ್ತು ಕುಂಬಳೆ ಅರಸರು ಬಂದರು. ಈ ಸೈನ್ಯ ಬಂಗರಾಜ್ಯದ ಮೇಲೆ ದಾಳಿ ಮಾಡಿತು. ಅಬ್ಬಕ್ಕ ಹಿಂದೆ ಕಳೆದುಕೊಂಡಿದ್ದ ಕೋಟೆಗಳನ್ನು ತಿರುಗಿ ಗೆದ್ದುಕೊಂಡಳು. ಈ ಸೈನ್ಯ ಸಮೂಹದ ಮುಂದೆ ಬಂಗರಸನ ಆಟ ಏನೂ ನಡೆಯಲಿಲ್ಲ. ಇವನು ತನ್ನ ರಾಜ್ಯವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದನೆಂದು ಗೋವೆಯ ವೈಸರಾಯಿಯ ತಾ. ೨೯.೧೧.೧೬೧೮ರ ಪತ್ರದಿಂದ ವ್ಯಕ್ತವಾಗುತ್ತದೆ.[೩೦]

ಚೌಟರಾಣಿ ಮತ್ತು ಕೆಳದಿ ವೆಂಕಟಪ್ಪನ ವಿರುದ್ಧ ಯುದ್ಧ ಮಾಡಲು ಪೋರ್ತುಗೀಸರು ಒಂದು ಸೈನಿಕ ಕೂಟವನ್ನು ಸಿದ್ಧ ಮಾಡಿದರು. ಇದರಲ್ಲಿ ಬಂಗರಾಜ, ಕಾರ್ನಾಡಿನ ರಾಣಿ

---

೨೯ ಅಂತೋನಿ ಬೊಕರೆ ಅದೇ ಗ್ರಂಥ II ಪು. ೪೭೧, ೨೦೧ ಬಿ. ಎಸ್. ಶಾಸ್ತ್ರಿ ಅದೇ ಗ್ರಂಥ ಪು. ೧೫೧೬, ೧೭ ಈ ಬರಹಗಾರನ ಅಭಿಪ್ರಾಯದಂತೆ ಕ್ರಿ.ಶ. ೧೬೧೮ರಲ್ಲಿ ಉಳ್ಳಾಲ ರಾಣಿ ಮತ್ತು ಪೋರ್ತುಗೀಸರ ರಾಜಕೀಯ ಸಂಬಂಧ ಅಷ್ಟು ಹಾಳಾಗಿರಲಿಲ್ಲ. ಒಂದು ರೀತಿಯ ಮೈತ್ರಿ ಇದ್ದುದ್ದರಿಂದ ಪೋರ್ತುಗೀಸರು ಬಂಗರಾಜನಿಗೆ ಈ ರಾಣಿಯ ವಿರುದ್ಧ ಸಹಾಯ ನೀಡಲು ಹೆಚ್ಚಿನ ಆಸಕ್ತಿ ತೋರಿಸುವುದಿಲ್ಲ ಎಂದು ಬೊಕೆರೊ ವರದಿಯ ಅಧ್ಯಯನವು ಸೂಚಿಸುತ್ತದೆ.

೩೧ Documents IV ಪು. ೧೯೬ ಶಾಸ್ತ್ರಿ - ಅದೇ ಗ್ರಂಥ ಪು. ೧೭.

(ಚೆನ್ನಮ್ಮ ದೇವಿ) ಮತ್ತು ಪರ್ವರಾಜರು ಒಳಗೊಂಡಿದ್ದರು. ಪೋರ್ತುಗೀಸರು ಹೊರಗಿನಿಂದ ಈ ಮೈತ್ರಿಕೂಟಕ್ಕೆ ಸಹಾಯ ನೀಡಲು ನಿರ್ಧರಿಸಿದರು. ಸಂದರ್ಭಾನುಕೂಲಗಳನ್ನು ನೋಡಿಕೊಂಡು ಸಹಾಯ ಮಾಡಲು ನಿರ್ಧರಿಸಿದರು.[೩೧]

ಆದರೆ ಕೆಳದಿ ವೆಂಕಟಪ್ಪ ಮತ್ತು ಚೌಟರಾಣಿಯ ಸೈನ್ಯಗಳು ವೈರಿಗಳು ನಿರೀಕ್ಷಿಸದ ರೀತಿಯಲ್ಲಿ ವಿಜಯ ಸಾಧಿಸಿದವು. ಪೋರ್ತುಗೀಸರ ಈ ಮೈತ್ರಿಕೂಟ ನುಚ್ಚುನೂರಾಯಿತು. ಪೋರ್ತುಗೀಸರು ಎಲ್ಲೆಡೆಗಳಲ್ಲೂ ಸೋಲನ್ನು ಕಂಡರು. ಅಬ್ಬಕ್ಕದೇವಿಯ ಪೇರೊ ನೌಕೆಗಳು ಪೋರ್ತುಗೀಸರ ಯುದ್ಧ ಹಡಗುಗಳಿಗೆ ಹಾನಿಯನ್ನುಂಟು ಮಾಡಿದವು. ಆದರೆ ಪೋರ್ತುಗೀಸ್ ಮಿರಾಂಡ್ ಅನರಿಕ್ಕೊ (Anrique)ನು ಉಳ್ಳಾಲ ರಾಣಿಯು ಮಕ್ಕಕ್ಕೆ ವ್ಯಾಪಾರಕ್ಕೆಂದು ಕಳುಹಿಸಿದ ಹಡಗು ಹಿಂತಿರುಗಿ ಬರುವಾಗ ಹಿಡಿದನು. ಇದರಿಂದ ಕೆರಳಿದ ರಾಣಿಯು ಕೆಳದಿ ವೆಂಕಟಪ್ಪನಿಗೆ ಬಂಗರ ಕೋಟೆ ಹಿಡಿಯಲು ಬರುವಾಗ ಹಿಡಿದನು. ಇದರಿಂದ ಕೆರಳಿದ ರಾಣಿಯು ಕೆಳದಿ ವೆಂಕಟಪ್ಪನಿಗೆ ಬಂಗರ ಕೋಡೆಯ ಹಿಡಿಯಲು ಸಹಾಯ ಮಾಡಿದಳು.[೩೨] ಇದರ ಪರಿಣಾಮವಾಗಿ ಬಂಗರಾಜನು ಸೋತು ಜೀವ ರಕ್ಷಿಸಿಕೊಳ್ಳಲು ಕಾಸರಗೋಡಿಗೆ ಓಡಿಹೋದನು. ಇವನ ಸಹಾಯಕ್ಕೆ ಬಂದ ಪೋರ್ತುಗೀಸರಿಗೆ ನಷ್ಟವಾಯಿತು. ನೂರಾರು ಪೋರ್ತುಗೀಸರು ಸತ್ತರು. ಸ್ತ್ರೀಯೊಬ್ಬಳಿಂದ ಅಜೇಯರೆನಿಸಿದ ಪೋರ್ತುಗೀಸರು ಸೋತರೆಂಬ ಸುದ್ದಿ ಅರೇಬಿಯಾ, ಪರ್ಶಿಯಾ ಮತ್ತು ಯುರೋಪಿನಲ್ಲಿ ಹಬ್ಬಿತು. ಇದು ಆಗಿನ ಕಾಲದ ಮಹತ್ವದ ಸಂಗತಿಯಾಗಿತ್ತು. ಇತ್ತ ಮಂಗಳೂರಿನಲ್ಲಿ ಪೋರ್ತುಗೀಸರ ಇರುವಿಕೆ ಚಿಂತಾಜನಕವಾಯಿತು. ಮತ್ತೆ ಮಂಗಳೂರನ್ನು ಹಿಡಿಯುವ ಇವರ ಪ್ರಯತ್ನವನ್ನು ಕೆಳದಿ ಮತ್ತು ಉಳ್ಳಾಲ ರಾಣಿಯ ಸೈನಿಕರು ವಿಫಲಗೊಳಿಸಿದರು. ಪೋರ್ತುಗೀಸ್‌ರ ಬ್ರೀತ್ತೊ ಮಿರಾಂಡರಲ್ಲದೆ ಇಪ್ಪತ್ತು ಮಂದಿ ದಂಡನಾಯಕರು ಮಡಿದರು. ಹಾಗೂ ಇವರೊಂದಿಗೆ ಇನ್ನೂರು ಮಂದಿ ಸೈನಿಕರು ಕೊಲ್ಲಲ್ಪಟ್ಟರು. ಮೂವತ್ತಕ್ಕಿಂತ ಹೆಚ್ಚು ಸೈನಿಕರು ಯುದ್ಧರಂಗದಿಂದ ಓಡಿ ಹೋದರು.[೩೩]

ಮಂಗಳೂರಿನಲ್ಲಿದ್ದ ಪೋರ್ತುಗೀಸರ ಸ್ಥಿತಿ ಅತ್ಯಂತ ಚಿಂತಾಜನಕವಾಯಿತು. ಇವರಿಗೆ ಇಲ್ಲಿ ಆಹಾರ ಧಾನ್ಯಗಳ ಪೂರೈಕೆ ತಡೆಹಿಡಿದುದ್ದರಿಂದ, ದಿವಸಕ್ಕೆ ಆರು ಮಂದಿಯಂತೆ

---

೩೧ ಅಂತೊನಿಯೊ ಬೊಕೆರೆ ಅದೇ ಗ್ರಂಥ I ಪು. ೧೮೨-೩ Documentes III ಪು. ೨೭೯-೩೦ ಶಾಸ್ತ್ರಿ - ಅದೇ ಗ್ರಂಥ ಪು. ೧೫.

೩೨ ಡಾನ್‌ವರಸ್ - ಅದೇ ಗ್ರಂಥ II ಪು. ೧೯೯.

೩೩ Documentcs V ಪು ೨೪೪ -೬ ತಾ. ೨೪.೧೧.೧೬೧೮ರಂದು ವೈಸರಾಯನಿಗೆ ಮಂಗಳೂರು ಅಧಿಕಾರಿ ಬರೆದ ಪತ್ರ. ಶಾಸ್ತ್ರಿ ಅದೇ ಗ್ರಂಥವು ೨೨, ೨೩.

ಪೋರ್ತುಗೀಸರು ಸಾಯುತ್ತಿದ್ದರು. ಸೈನಿಕ ಅಧಿಕಾರಿಗಳು ಮತ್ತು ಇನ್ನಿತರ ಅಧಿಕಾರಿಗಳು ಸರಿಯಾದ ಅಂಗಿ ವಸ್ತ್ರಗಳಿಲ್ಲದೆ ಇದ್ದರು. ಪ್ರತಿಯೊಂದು ವಸ್ತುವಿನ ಬೆಲೆ ಎರಡು ಪಾಲು ಏರಿತು.[೩೪]

ಈ ರೀತಿ ಅಪಾಯಕರ ಸ್ಥಿತಿಯಲ್ಲಿದ್ದ ಪೋರ್ತುಗೀಸರು ತಮ್ಮ ವೈರಿಗಳಾಗಿ ಕೆಳದಿ ವೆಂಕಟಪ್ಪ ನಾಯಕ ಮತ್ತು ರಾಣಿ ಅಬ್ಬಕ್ಕಳೊಡನೆ ಒಪ್ಪಂದ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದರು. ಈ ಒಪ್ಪಂದದಂತೆ ರಾಣಿಯು ತಾನು ಕಟ್ಟಿದ ಕಾಪು ಕೋಟೆಯನ್ನು ಕೆಡವಿ ಹಾಕುವುದು ಬೇಡ ಮತ್ತು ಪೋರ್ತುಗೀಸರು ಅವಳಿಂದ ಕಸಿದುಕೊಂಡಿದ್ದ ಹಡಗು ಮತ್ತು ತಾವು ಕಟ್ಟಿದ ಕಾಪು ಗೋಡೆಯನ್ನು ಇಟ್ಟುಕೊಳ್ಳಬಹುದು.[೩೫]

ಈ ಯುದ್ಧದ ಪರಿಣಾಮವಾಗಿ ಅಬ್ಬಕ್ಕಳ ವ್ಯಕ್ತಿತ್ವ ಇನ್ನಷ್ಟು ಬೆಳಗಿತು. ಇವಳು ವೀರಾಗ್ರಣಿಯಾಗಿ ಮೂಡಿಬಂದಳು. ಇವಳ ಕೀರ್ತಿ ಪರ್ಶಿಯಾ ಮತ್ತು ಅರೇಬಿಯಾಗಳವರೆಗೆ ಪ್ರಸರಿಸಿತು. ಇವಳ ಸ್ವಾಭಿಮಾನವನ್ನು ಆಗಿನ ಕಾಲದ ಪೋರ್ತುಗೀಸ್ ಬರಹಗಾರರು ಮತ್ತು ಇನ್ನಿತರ ವಿದೇಶಿಯವರು ಪ್ರಶಂಸಿಸಿದರು. ಅಬ್ಬಕ್ಕಳು ಪೋರ್ತುಗೀಸರ ಉಪಟಳದಿಂದ ಮುಕ್ತಳಾದರು. ಮುಂದೆ ಇವಳು ಇವರಿಗೆ ತಲೆಬಾಗುವ ಪ್ರಸಂಗವೇ ಬರಲಿಲ್ಲ. ಶಾಂತ ರೀತಿಯಲ್ಲಿ ತನ್ನ ರಾಜ್ಯದಲ್ಲಿ ವ್ಯಾಪಾರ ಮಾಡಿಕೊಂಡು ಬರಲು ಇವಳು ಪೋರ್ತುಗೀಸರಿಗೆ ಅನುಮತಿಯನ್ನಿತ್ತಳು.

ಅಬ್ಬಕ್ಕ ದೇವಿಯ ವ್ಯಕ್ತಿತ್ವ ಮತ್ತು ಇನ್ನಿತರ ಸಾಧನೆಗಳು

ಕಿರಿಯ ಅಬ್ಬಕ್ಕ ದೇವಿಯ ವ್ಯಕ್ತಿತ್ವ ಮತ್ತು ಇವಳ ಸಾಧನೆಗಳ ಕುರಿತು ಮಾಹಿತಿ ಸಿಗುವುದು ಸಮಕಾಲೀನ ಬರಹಗಾರರಾದ ಅಂತೋನಿಯಾ ಬೊಕೆರೊ, ಪ್ರವಾಸಿ ದೆಲ್ಲಾವಲ್ಲೆ ವರದಿ ಮತ್ತು ಕೆಲವು ಸ್ಥಳೀಯ ಐತಿಹಾಸಿಕ ಮಾಹಿತಿಗಳಲ್ಲಿ. ಈ ಎಲ್ಲಾ ಮಾಹಿತಿಗಳಿಂದ ತಿಳಿದು ಬರುವ ಈ ರಾಣಿಯ ವ್ಯಕ್ತಿತ್ವನೇನೆಂದರೆ ಇವಳು ತನ್ನ ರಾಜ್ಯದಲ್ಲಿ ಜನಪ್ರಿಯಳಾಗಿದ್ದಳು, ಸ್ವಾಭಿಮಾನಿಯಾಗಿದ್ದಳು ಮತ್ತು ಕೆಚ್ಚೆದೆಯವಳಾಗಿದ್ದಳು. ನಿಖರ ಐತಿಹಾಸಿಕ ದಾಖಲೆಗಳಿಗೆ ವಿರೋಧವಿಲ್ಲದ ಸ್ಥಳೀಯ ಮಾಹಿತಿಗಳಂತೆ, ಕಿರಿಯ ಅಬ್ಬಕ್ಕದೇವಿಯ ಜನಪ್ರಿಯ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಳು. ತನ್ನ ರಾಜ್ಯದಲ್ಲಿನ ನೀರಾವರಿ ಕೆಲಸ, ಕೃಷಿ ಅಭಿವೃದ್ಧಿ, ವ್ಯಾಪಾರ ವಿಸ್ತಾರ ಮತ್ತು ನ್ಯಾಯ

೨೪ ಪಿಸ್ಸುಲೆನ್‌ಕರ್ Assentos I ಪು ೧೦೪-೬ ಶಾಸ್ತ್ರಿ ಅದೇ ಗ್ರಂಥ ಪು. ೩೧, ೩೨.

೨೫ ಪಿಸ್ಸು ಲೆನಿಕರ್ ಅದೇ ಗ್ರಂಥ ಪು. ೧೦೨ ಶಾಸ್ತ್ರಿ ಅದೇ ಗ್ರಂಥ ಪು. ೩೧.

ತೀರ್ಮಾನಗಳಲ್ಲಿ ಈ ರಾಣಿ ತನ್ನನ್ನು ತೊಡಗಿಸಿಕೊಂಡಿದ್ದಳು. ತನ್ನ ರಾಜ್ಯದ ರಕ್ಷಣೆಯನ್ನು ಇವಳು ಬಹಳ ಎಚ್ಚರದಿಂದ ಮಾಡುತ್ತಿದ್ದಳು. ತನ್ನ ವೈರಿಗಳು ತಲ್ಲಣಗೊಳ್ಳುವಂತಹ ಕೋಟೆಯನ್ನು ಈ ರಾಣಿ ಉಳ್ಳಾಲದಲ್ಲಿ ಕಟ್ಟಿದ್ದಳು. ರಸ್ತೆ ನಿರ್ಮಾಣ, ಅಣೆಕಟ್ಟು ರಚನೆ ಮತ್ತು ಹಾಳುಬಿದ್ದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ಆಸಕ್ತಿ ವಹಿಸಿದ್ದಳು. ಉದಾ : ಉಳ್ಳಾಲ ಸೋಮೇಶ್ವರ ದೇವಸ್ಥಾನದ ಗೋಡೆಗಳು ವೈರಿಗಳಿಂದ ನಾಶವಾದಾಗ ಅದನ್ನು ಅವಳು ತಿರುಗಿ ಕಟ್ಟಿದಳಂತೆ.

ಕಿರಿಯ ಅಬ್ಬಕ್ಕಳಲ್ಲಿ ಸ್ವತಂತ್ರ ಮನೋವೃತ್ತಿ ಸ್ವಾಭಿಮಾನ ಮತ್ತು ರಾಜಕೀಯ ಚತುರತೆ ಇದ್ದಿತೆಂದು ಇವಳ ಬಗ್ಗೆ ತಿಳಿಸುವ ಆಕರಗಳು ದೃಢೀಕರಿಸುತ್ತವೆ. ಗೊಡ್ಡು ಸಂಪ್ರದಾಯಕ್ಕೆ ಇವಳು ತಲೆ ತಗ್ಗಿಸಲಿಲ್ಲ. ತನ್ನ ಗಂಡ ಬಂಗರಸ ಮತ್ತು ಅವನ ಅಳಿಯ ರಾಜ್ಯ ಹಿತಾಸಕ್ತಿಗೆ ವಿರೋಧವಾಗಿ ವರ್ತಿಸಿ ಪೋರ್ತುಗೀಸರ ಮೈತ್ರಿ ಮಾಡಿಕೊಂಡಾಗ ಈ ರಾಣಿ ಪ್ರತಿಬಭಟಿಸಿದಳು. ಇದೇ ರೀತಿ ತನ್ನ ರಾಜ್ಯದಲ್ಲಿನ ಒಬ್ಬ ಮೊಗವೀರ ಹುಡುಗ ಜೈನ ಕನ್ಯೆಯನ್ನು ಮದುವೆ ಆಗುವುದನ್ನು ಇವಳು ಸಮರ್ಥಿಸಿದಳು. ಆದರೆ ಜಾತಿ ಬಾಂಧವರಿಗೆ ನೋವುಂಟಾದ ತಪ್ಪಿಗಾಗಿ ಜೈನ ಸಮುದಾಯಕ್ಕೆ ಮೊಗವೀರ ಯುವಕ ಐದು ಗದ್ಯಾಣವನ್ನು ದಂಡಕೊಡಬೇಕೆಂದು ತೀರ್ಮಾನಿಸಿದಳು. ಇದು ಎರಡು ಪಕ್ಷದವರಿಗೆ ತೃಪ್ತಿಯಾಯಿತು. ಈ ರಾಣಿಯೇ ಈ ಮದುವೆಯನ್ನು ಉಳ್ಳಾಲ ಸೋಮನಾಥನ ಸನ್ನಿಧಿಯಲ್ಲಿ ನಡೆಸಿದಳು.[೩೩] ಇದನ್ನು ಖಚಿತಪಡಿಸುವ ಆಕರಗಳು ಇಲ್ಲವಾದರೂ, ಸಿಕ್ಕಿದ ನಿಖರ ಆಕರಗಳು ವಿರೋಧಿಸದ ಕಾರಣ ಮೇಲೆ ತಿಳಿಸಿದ ಸಂಗತಿಯನ್ನು ಒಪ್ಪಿಕೊಳ್ಳಬಹುದು.

ಅಬ್ಬಕ್ಕದೇವಿಯು ಸ್ವಾಭಿಮಾನಿ ಮತ್ತು ನ್ಯಾಯಪರವಾದ ರಾಣಿ (Just queen) ತನ್ನ ಸ್ವಾಭಿಮಾನಕ್ಕೆ ಚ್ಯುತಿ ಬಂದಾಗ ಈ ರಾಣಿ ಧೈರ್ಯವಾಗಿ ಪ್ರತಿಭಟಿಸಿದಳು. ಆದರೂ ನ್ಯಾಯ ಮತ್ತು ರಾಜ್ಯ ಹಿತಾಸಕ್ತಿಯ ವಿರೋಧವಿಲ್ಲದಿದ್ದಲ್ಲಿ ಪೋರ್ತುಗೀಸ ಮತ್ತು ಬಂಗರಾಜನೊಡನೆ ಗೌರವಯುಕ್ತವಾದ ರಾಜಕೀಯ ಸಂಬಂಧಗಳನ್ನು ಇಟ್ಟುಕೊಂಡಿದ್ದಳು. ಅಬ್ಬಕ್ಕಳು ಏಕರೂಪವಾದ (Consisient) ದ್ವೇಷವನ್ನು ಪೋರ್ತುಗೀಸರೊಡನೆ ತೋರಿಸಿಲ್ಲ. ಇವಳು ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪೋರ್ತುಗೀಸರೊಡನೆ ವರ್ತಿಸುತ್ತಿದ್ದಳೆಂದು ಬೊಕೆರೊ ತಿಳಿಸಿದ್ದಾನೆ. ಇದಲ್ಲದೆ ತನ್ನ ರಾಜ್ಯದ ವ್ಯಾಪಾರ ನೀತಿಗೆ ಭಂಗಬಾರದ ಹಾಗೆ ಪೋರ್ತುಗೀಸರಿಗೆ ಇವಳು ವ್ಯಾಪಾರ ಸವಲತ್ತುಗಳನ್ನು ನೀಡಿದ್ದಳು.

---

೩೩ ಅನುಪಮ ನಿರಂಜನ ಅದೇ ಗ್ರಂಥ ಪು ೬೫ - ೬೮.

ಉದಾಹರಣೆಯಾಗಿ ಕ್ರಿ.ಶ. ೧೬೧೩ರಲ್ಲಿ ಅಬ್ಬಕ್ಕದೇವಿ ಪೋರ್ತುಗೀಸರಿಗೆ ತನ್ನ ರಾಜ್ಯ ಉಳ್ಳಾಲದಲ್ಲಿ ವ್ಯಾಪಾರದ ಸವಲತ್ತುಗಳನ್ನು ನೀಡಿ ಇಲ್ಲಿಂದ ಮೂರು ಸಾವಿರ ಹೊರೆಯ ಅಕ್ಕಿಯನ್ನು ಕೊಡಲು ಒಪ್ಪಿದ್ದಳು. ಇದನ್ನು ಅಂತ್ರೊನಿಯಾ ಬೊಕೆರೊ ಪೋರ್ತುಗೀಸ್ ದಾಖಲೆಯಲ್ಲೂ ತನ್ನ ಗ್ರಂಥದಲ್ಲೂ ದಾಖಲಿಸಿದ್ದು ಇದನ್ನು ಗಮನಿಸುವ ಅವಶ್ಯಕತೆ ಇದೆ.[೩೭] ಇದನ್ನು ಮನಗಂಡ ಪೋರ್ತುಗೀಸರು ಅಬ್ಬಕ್ಕದೇವಿಯ ವಿರುದ್ಧ ಬಂಗರಸನಿಗೆ ಸಹಾಯ ನೀಡುವಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿಲ್ಲ. ಇಷ್ಟಲ್ಲದೆ ಇವಳ ವಿರುದ್ಧ ಬಂಗರಸನಿಗೆ ಯಾವ ರೀತಿಯ ಸಹಾಯ ಮಾಡಕೂಡದೆಂದು ವೈಸರಾಯನು ಮಂಗಳೂರಿನಲ್ಲಿರುವ ಪೋರ್ತುಗೀಸ್ ಅಧಿಕಾರಿಗೆ ಆದೇಶ ನೀಡಿದನು. ಬಂಗರಾಜನು ಉಳ್ಳಾಲದಲ್ಲಿ ಕೋಟೆ ಕಟ್ಟಬಾರದೆಂದು ಅವನಿಗೆ ಪೋರ್ತುಗೀಸರು ತಿಳಿಸಿದ ಸಂಗತಿ ಇವನಿಂದ ನಮಗೆ ತಿಳಿಯುತ್ತದೆ.[೩೮] ಆದರೆ ಅಬ್ಬಕ್ಕಳು ಕೆಳದಿ ವೆಂಕಟಪ್ಪ ನಾಯಕನ ಮತ್ತು ಪೋರ್ತುಗೀಸರ ಕಡುವೈರಿ ಜಾಮೋರಿನ ಮತ್ತು ಮಲಬಾರ ನೌಕಾಧಿಕಾರಿಗಳ ಮೈತ್ರಿ ಮಾಡಿಕೊಂಡಾಗ ಪೋರ್ತುಗೀಸರು ಬಂಗರಾಜನಿಗೆ ಸಹಾಯ ಮಾಡಿ ಯಶಸ್ಸು ಪಡೆಯದೇ ಹೋದರೆಂದು ಬೊಕೆರೊ ಹೇಳಿದ್ದು ಗಮನಾರ್ಹ. ಇಷ್ಟಲ್ಲದೆ ಇವನು ಅಬ್ಬಕ್ಕಳ ರಾಜಕೀಯ ನಿಪುಣತೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾನೆ. ಈ ರಾಣಿಯ ಚಿತ್ರಮಯ ವರ್ಣನೆಯು ಪ್ರವಾಸಿ ಪಿಯತ್ರೊ ದೆಲ್ಲಾವಲ್ಲೆಯ ವರದಿಯಿಂದ ತಿಳಿದು ಬರುತ್ತದೆ.[೩೯] ಇವನು ಮಂಗಳೂರಿಗೆ ಬರುವ ಪೂರ್ವದಲ್ಲೇ ಉಳ್ಳಾಲದ ರಾಣಿ ದಿಟ್ಟಳಿರಬೇಕೆಂದು ಅಭಿಪ್ರಾಯ ಹೊಂದಿದ್ದನು. ತನ್ನ ಗಂಡನನ್ನು ಧಿಕ್ಕರಿಸಿ ಅಜೇಯರೆಂದು ಕೊಚ್ಚಿಕೊಳ್ಳುತ್ತಿದ್ದ ಪೋರ್ತುಗೀಸರನ್ನು ಈ ಉಳ್ಳಾಲ ರಾಣಿ ಸೋಲಿಸಿದ ವಾರ್ತೆ ಕೇಳಿದ ಮೇಲೆ ದೆಲ್ಲಾವಲ್ಲೆಯ ಹಿಂದೆ ಮಾಡಿದ ನಿರ್ಧಾರ ಸರಿಯೆಂದು ಮನವರಿಕೆಯಾಗಿ ಇವಳನ್ನು ಸಂದರ್ಶಿಸಬೇಕೆಂಬ ಇರಾದೆಯಿಂದ ಮಂಗಳೂರಿಗೆ ಬಂದನು. (೧೬೨೩). ಮಂಗಳೂರಿಗೆ ಬಂದೊಡನೆ ಈ ರಾಣಿಯ ವಿಚಾರ ಇನ್ನೂ ಹೆಚ್ಚಿಗೆ ಮಾಹಿತಿಗಳನ್ನು ಸಂಗ್ರಹಿಸಿದನು. ಈ ರಾಣಿಯು ಸಮೀಪದ ಮಣೆಲದಲ್ಲಿ ಇದ್ದಾಳೆಂದು ತಿಳಿದು ಅಲ್ಲಿಗೂ ಅವನು ಬಂದನು. ಇಲ್ಲಿ ರಾಣಿಯು ಜನರ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ದುಡಿಯುತ್ತಿದ್ದಳೆಂದು ಅವನು ಅಲ್ಲಿಯ ಜನರಿಂದ ತಿಳಿದುಕೊಂಡನು. ಈ ಸಂಗತಿ ಪಿಯತ್ರೊ

---

೩೭ Decada - I ಪು ೧೮೨-೩ ಶಾಸ್ತ್ರಿ - ಕೆ.ಅ.ಪು. ಪು. ೧೪.

೩೮. ಇದೆ ಗ್ರಂಥ II ೭೦೧ ಶಾಸ್ತ್ರಿ - ಇದೇ ಗ್ರಂಥ ಪು ೧೬ - ೧೭.

೩೯ ಈ ಪ್ರವಾಸಿ ಚೌಟ ಅಬ್ಬಕ್ಕ ದೇವಿಯನ್ನು ನೋಡಿರಲು ಸಾಧ್ಯವಿಲ್ಲವೆಂದು ಈ ಬಗ್ಗೆ ಇನ್ನೂ ಸಂಶೋಧನೆಯಾಗಬೇಕೆಂದು ನಾಗೇಗೌಡರು ಅಭಿಪ್ರಾಯಪಟ್ಟಿದ್ದಾರೆ. ಪ್ರವಾಸಿ ಕಂಡ ಇಂಡಿಯಾ ಭಾಗ ೪. ಪು. ಪು. ೨೭೧ ಅಡಿಟಿಪ್ಪಣಿ ೧.

ದೆಲ್ಲಾವಲ್ಲೆಗೆ ಸಂತೋಷವನ್ನುಂಟು ಮಾಡಿತು. ಇವಳ ರಾಜ್ಯ ಚಿಕ್ಕದು, ಆದರೆ ಇದನ್ನು ಆಳುವ ರಾಣಿಯ ಮನಸ್ಸು ದೊಡ್ಡದು. ಪ್ರಜೆಗಳನ್ನು ತನ್ನ ಮಕ್ಕಳಂತೆ ಈ ರಾಣಿ ನೋಡಿಕೊಳ್ಳುತ್ತಿರುವುದು, ಸಂಜೆಯ ಹೊತ್ತು ತನ್ನ ಪ್ರಜೆಗಳ ಅಹವಾಲುಗಳನ್ನು ಕೇಳುವುದರಲ್ಲಿ ಈ ರಾಣಿಯು ನಿರತಳಾಗಿರುವುದು ಎಂಬ ಸಂಗತಿಗಳನ್ನು ಈ ಪ್ರವಾಸಿಯು ಅರಿತುಕೊಂಡನು. ಇವಳು ಪಶಿಯಾರ್ ಚಕ್ರವರ್ತಿಯಂತೆ ಸದಾ ಕಾರ್ಯನಿರತಳು. ಈ ಸಂಗತಿಗಳು ದೆಲ್ಲಾವಲ್ಲೆಗೆ ಈ ರಾಣಿಯ ಕುರಿತಾಗಿ ಒಳ್ಳೆಯ ಅಭಿಪ್ರಾಯ ಮೂಡಿಬರಲು ಕಾರಣವಾದುವು. ಅವನು ನಂತರ ಅಬ್ಬಕ್ಕಳನ್ನು ಭೇಟಿಯಾದನು. ಇವಳ ಜೊತೆಯಲ್ಲಿ ಹೆಂಗಸರ್ಯಾರೂ ಇರಲಿಲ್ಲ. ಇದ್ದವರು ನಾಲ್ಕಾರು ಸಿಪಾಯಿಗಳು. ಅವರು ರಾಣಿಯ ಜೊತೆಯೇ ನಡೆದುಕೊಂಡು ಬರುತ್ತಿದ್ದರು. ಅವರ ಕೈಯಲ್ಲಿ ಕತ್ತಿ ಗುರಾಣಿ ಇದ್ದವು. ಈ ರಾಣಿಯ ಹಿಂದೆಯೂ ಐದಾರು ಜನ ಸಿಪಾಯಿಗಳಿದ್ದರು. ಅವರಲ್ಲಿ ಒಬ್ಬಳು ರಾಣಿಯ ತಲೆಯ ಮೇಲೆ ತಾಳೆಗರಿ ಕೊಡೆ ಹಿಡಿದಿದ್ದಳು. ಇವಳನ್ನು ನೋಡಿದ ಪ್ರಿಯತ್ರೊ ಅಬ್ಬಕ್ಕಳ ವಿಚಾರ ಈ ರೀತಿ ಚಿತ್ರವನ್ನು ನೀಡಿದ್ದಾನೆ. ಈ ರಾಣಿಯ ಮೈ ಬಣ್ಣ ಇಥಿಯೊಪಿಯನ್ ಬಣ್ಣದಷ್ಟು ಕಪ್ಪು, ಬೊಜ್ಜು ಬೆಳೆದು ಇವಳ ಹೊಟ್ಟೆ ಗುಡಾಣದಂತಿದೆ. ಆದರೆ ಇವಳ ನಡಿಗೆ ಚುರುಕಾಗಿತ್ತು. ಮತ್ತು ದಡಿಯಳಾಗಿಲ್ಲ. ಆಕೆಯ ವಯಸ್ಸು ಹೆಚ್ಚು ಕಡಿಮೆ ೪೦ ಆಗಿರಬಹುದು. ಇವಳು ಸೊಂಟದಿಂದ ಕೆಳಗೆ ಬಿಳಿಯ ಹತ್ತಿಯ ಸೀರೆಯನ್ನು ಉಟ್ಟಿದ್ದಳು. ಕಾಲಿಗೆ ಪಾದರಕ್ಷೆ ಇರಲಿಲ್ಲ. ಇವಳ ಸೊಂಟದಿಂದ ಮೇಲಕ್ಕೆ ತಲೆಗೆ ಕಟ್ಟಿದ್ದ ಮತ್ತು ತೋಳುಗಳು ಮತ್ತು ಎದೆಯ ಮೇಲೆ ಇಳಿಯ ಬಿಟ್ಟ ಬಟ್ಟೆಯಲ್ಲದೆ ಬೇರೆ ಬಟ್ಟೆ ಹಾಕಿರಲಿಲ್ಲ. ಸೊಂಟ ಕೈ ಮತ್ತು ಕೊರಳುಗಳಲ್ಲಿ ಕೆಲವು ಬಂಗಾರದ ಆಭರಣಗಳನ್ನು ಇವಳು ಧರಿಸಿದ್ದಳು. ಇವಳನ್ನು ಪ್ರಥಮವಾಗಿ ಸಂದರ್ಶಿಸಿದ ಪಿಯತ್ರೊ ದೆಲ್ಲಾವಲ್ಲೆ ವಿಸ್ಮಯ ಪಟ್ಟು ಈ ರೀತಿ ತನ್ನಲ್ಲೆ ಉದ್ಗರಿಸಿದ. ಈಕೆಯನ್ನು ಕೋಮಲಾಂಗಿಯಾದ ಕುಲೀನ ಮನೆತನದ ರಾಣಿಯೆಂದು ಹೇಳುವುದಕ್ಕಿಂತ ಯಾವಳೊಬ್ಬಳು ಅಡುಗೆ ಮನೆಯ ಪರಿಚಾರಿಕೆ ಅಥವಾ ಅಗಸಗಿತ್ತಿ ಎಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಇವಳನ್ನು ಕಂಡು ನಾನು (ದಲ್ಲಾವೆಲ್ಲೆ) ಸ್ಪೆಯ್ನ ರಾಜನ ಸೈನ್ಯಗಳನ್ನು ನಿರ್ನಾಮ ಮಾಡಿದವಳೆಂದು, ಯುರೋಪಿನಲ್ಲಿ ಹೊಗಳಿಸಿ ಕೊಂಡವಳು ಇವಳು ಅಲ್ಲವೋ ಎಂದು ಮನಸ್ಸಿನಲ್ಲಿ ಅಂದುಕೊಂಡ. ಆದರೆ ಅಬ್ಬಕ್ಕ ನೋಡುವುದಕ್ಕೆ ಹೇಗಿದ್ದರೂ, ತನ್ನ ಮಾತಿನಲ್ಲಿ ಘನತೆಯನ್ನು ತೋರಿಸಿದಳು. ಮಾತಿನಿಂದ ಇವಳ ಘನತೆಯ ವ್ಯಕ್ತಿತ್ವ ತಿಳಿದು ಬರುತ್ತಿತ್ತು. ಇವಳ ಮಾತು ಸೌಮ್ಯ. ಆದರೆ ಧ್ವನಿಯಲ್ಲಿ ಘನತೆ, ಗಾಂಭೀರ್ಯ ಮತ್ತು ಗತ್ತುಗಾರಿಕೆ ಇದೆ. ಬಹಳ ದೂರದೃಷ್ಟಿಯ ಹಾಗೂ ವಿವೇಕದ ಹೆಂಗಸಿನಂತೆ ಅಬ್ಬಕ್ಕಳು ಮಾತನಾಡಿದಳು ಎಂದು ಈ ಪ್ರವಾಸಿ ಹೇಳಿದ್ದಾನೆ. ಕೆಲವು ಸಲ ಇವಳು ಮುಖವನ್ನು ಅರ್ಧ ಮುಚ್ಚಿಕೊಂಡು ಮಾತನಾಡುತ್ತಿದ್ದಳು. ಇದು ಇಲ್ಲಿನ ಸೌಜನ್ಯದ ಪದ್ಧತಿಯೆಂದು

ದೆಲ್ಲಾವಲ್ಲೆ ತಿಳಿದುಕೊಂಡ. ಇವಳು ದಪ್ಪವಾಗಿದ್ದರೂ ವಕ್ರವಾಗಿ ಕಾಣಿಸುತ್ತಿರಲಿಲ್ಲ. ಈ ರಾಣಿಯ ಗಂಭೀರ ಸೌಂದರ್ಯದ ಕಾರಣದಿಂದ ಇವಳು ಗಡಸಿನ ಹೆಣ್ಣು ಎಂದು ಪ್ರತೀತಿ ಇದೆ.

ಅಬ್ಬಕ್ಕಳು ವಿದೇಶದಿಂದ ಬಂದ ಅತಿಥಿಗಳ ವಿಚಾರ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಳು. ಇವರುಗಳ ಆಚಾರ ವಿಚಾರ ಮತ್ತು ಭಾಷೆಗಳನ್ನು ತಿಳಿದುಕೊಳ್ಳಲು ಇವಳು ಕುತೂಹಲವನ್ನು ತೋರಿಸುತ್ತಿದ್ದಳು. ವಿದೇಶಿ ಭಾಷೆಗಳನ್ನು ತಿಳಿದ ದುಭಾಷಿಗಳು ಇವಳ ಆಸ್ಥಾನದಲ್ಲಿದ್ದರು. ತನ್ನ ರಾಜ್ಯವನ್ನು ಸಂದರ್ಶಿಸಿದ ಪಿಯತ್ರೊ ದೆಲ್ಲಾವಲ್ಲೆಗೆ ಅನೇಕ ಪ್ರಶ್ನೆಗಳನ್ನು ಹಾಕಿ ಅವನಿಂದ ಉತ್ತರ ಪಡೆದಳು. ಇವಳ ಕೆಲವು ಪ್ರಶ್ನೆಗಳು ಸ್ತ್ರೀಯರಲ್ಲಿದ್ದ ಕಾರುಣ್ಯವನ್ನು ವ್ಯಕ್ತಪಡಿಸಿದವು. ಈ ರಾಣಿಯನ್ನು ಕಾಣಲೆಂದು ಈ ಪ್ರವಾಸಿಯು ಇವಳು ಕೆಲಸದ ಮೇಲ್ವಿಚಾರಣೆ ನಡೆಸುತ್ತಿರಬೇಕಾದುದನ್ನು ನೋಡಿ ದೆಲ್ಲಾವಲ್ಲೆಗೆ ಮೆಚ್ಚಿಗೆ ಉಂಟಾಯಿತು. ಸುತ್ತಲು ಹತ್ತೈವತ್ತು ಗಂಡಾಳುಗಳು ಮತ್ತು ಹೆಣ್ಣಾಳುಗಳು ಮಣ್ಣು ಮತ್ತು ಕಲ್ಲುಗಳನ್ನು ಹೊರುತ್ತಿದ್ದದ್ದು ಆಕೆ ಇವರಿಗೆಲ್ಲಾ ಸೂಚನೆ ಮತ್ತು ಆಜ್ಞೆ ಕೊಡುತ್ತಿದ್ದುದನ್ನು ಇದೇ ಪ್ರವಾಸಿ ನೋಡಿ ವಿಸ್ಮಯಪಟ್ಟ. ಈ ರಾಣಿಗೆ ಪ್ರಜೆಗಳ ಮೇಲೆ ಇರುವ ವಾತ್ಸಲ್ಯ ಇವರ ಶ್ರೇಯಸ್ಸಿಗಾಗಿ ಈ ರಾಣಿ ನಡೆಸುವ ದುಡಿಮೆ ಇವಳ ವ್ಯಕ್ತಿತ್ವವನ್ನು ರೂಪಿಸಿ ಇಂತಹ ರಾಣಿಯ ಬಗ್ಗೆ ಯಾವ ಜನರಾದರೂ ಹೆಮ್ಮೆ ಪಡಬೇಕೆಂದು ಈ ಪ್ರವಾಸಿ ಉದ್ಗರಿಸಿದ್ದಾನೆ. ಇಷ್ಟಲ್ಲದೆ ಈ ರಾಣಿಯು ನೆಮ್ಮದಿಯಿಂದ ಇದ್ದು ಅಕ್ಕಪಕ್ಕದ ಎಲ್ಲರ ಗೌರವಗಳಿಗೆ ಪಾತ್ರಳಾಗಿ ತನ್ನ ರಾಜ್ಯವನ್ನು ಆಳಿಕೊಂಡಿದ್ದಳು ಎಂದು ಇದೇ ಪ್ರವಾಸಿ ಹೇಳಿದ್ದು ಗಮನಿಸಬೇಕಾದ ಸಂಗತಿ.[೪೧]

ಅಬ್ಬಕ್ಕದೇವಿ ತನ್ನ ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರಲು ಹೆಚ್ಚಿಗೆ ಆಸಕ್ತಿ ತೋರಿಸಿದ್ದಳು. ಇದಕ್ಕೆ ಧಕ್ಕೆ ಉಂಟಾದಾಗ ಇವಳು ತನ್ನ ಪೂರ್ವಿಕರ ವೈರಿಗಳಾದ ಬಂಗರ ಮತ್ತು ಪೋರ್ತುಗೀಸರ ಸಹಾಯವನ್ನು ಕೋರಿದ್ದಳೆಂದು ಸಮಕಾಲೀನ ದಾಖಲೆಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ.[೪೧]

---

೪೦ Della Valle - ಅದೇ ಗ್ರಂಥ II ಪು. ೩೦೭, ೩೦೮, ೩೧೦, ೩೧೩, ೩೧೫, ೩೧೬, ೩೧೭, ೩೨೧, ೩೩೭, ೩೩೮ ವಿವರ ನಾಗೇಗೌಡ ಅದೇ ಗ್ರಂಥ ಭಾಗ ೪ ಪು. ೨೬೦ - ೨೮೩. ಕಾಮತ್ ಅದೇ ಗ್ರಂಥ ಪು. ೨೮-೩೪. ಈ ರಾಣಿಯ ಅರಮನೆ, ಇವಳ ಮಕ್ಕಳು ಮೊಮ್ಮಕ್ಕಳ ವಿಚಾರವನ್ನು ಇದೇ ಪ್ರವಾಸಿ ತಿಳಿಸಿದ್ದಾನೆ.

ಅಬ್ಬಕ್ಕದೇವಿಯ ಮತ್ತು ಕೆಳದಿ ನಾಯಕರು

ಕೆಳದಿ ವೆಂಕಟಪ್ಪ ನಾಯಕನ ಮೈತ್ರಿಯಿಂದ ಮಂಗಳೂರಿನಲ್ಲಿ ಪೋರ್ತುಗೀಸರ ಸೊಕ್ಕನ್ನು ಅಡಗಿಸಿದ ಅಬ್ಬಕ್ಕದೇವಿಯು ಕೆಳದಿಯರ ಆಳ್ವಿಕೆಯನ್ನು ಒತ್ತಾಯದಿಂದ ಒಪ್ಪಿಕೊಳ್ಳಬೇಕಾಗಿ ಬಂತು.[೪೨] ಈ ರಾಣಿಯು ದುರಾಸೆಯುಳ್ಳವಳೆಂದೂ ಮತ್ತು ಸ್ವಲ್ಪವೂ ನಂಬಿಕೆಗೆ ಅನರ್ಹಳೆಂದೂ ತಿಳಿದು ವೆಂಕಟಪ್ಪನು ಇವಳ ಸೊಕ್ಕನ್ನು ಕುಗ್ಗಿಸಲು ಯೋಚಿಸಿದ. ಇವಳು ತಾನಾಗಿ ಒಪ್ಪಿಯೋ ಅಥವಾ ಒತ್ತಾಯದಿಂದಲೋ ತನ್ನ ರಾಜ್ಯದಲ್ಲಿರುವ ಬೆದ್ರೆ (ಮೂಡಬಿದ್ರೆ ಸಮೀಪದ ಊರು) ನಾಯಕನಿಗೆ ಬಿಟ್ಟುಕೊಟ್ಟಳು.[೪೩] ಇದಲ್ಲದೆ ಕೆಳದಿ ವೆಂಕಟಪ್ಪನ ರಾಜ್ಯಕ್ಕೆ ಸಮೀಪವಿರುವ ಕೆಲವು ಪ್ರದೇಶಗಳನ್ನು ಬಿಟ್ಟುಕೊಟ್ಟಳು. ಒಟ್ಟಿನಲ್ಲಿ ಕೆಳದಿಯವರ ಮೈತ್ರಿಯಿಂದ ಅಬ್ಬಕ್ಕಳಿಗೆ ಹೆಚ್ಚಿಗೆ ಉಪಕಾರವಾಗಲಿಲ್ಲ. ನೆಮ್ಮದಿಯಿಂದ ಇರುವ ಅವಕಾಶವೊಂದೇ ಇವಳಿಗೆ ಸಿಕ್ಕಿದ್ದು. ಇದನ್ನು ಇವಳು ತಾತ್ಕಾಲಿಕವಾಗಿ ಅನುಭವಿಸಿದಳು. ಆದರೆ ಸುಸಂದರ್ಭವನ್ನು ಇವಳು ನಿರೀಕ್ಷಿಸುತ್ತಾ ಇದ್ದಳು. ಕೆಳದಿ ವೆಂಕಟಪ್ಪ ನಾಯಕನ ನಿಧನದ ನಂತರ ಛಲಗಾರ್ತಿಯಾದ ಅಬ್ಬಕ್ಕ ಇನ್ನಿತರ ತುಳುರಾಜರುಗಳನ್ನು (ಬಂಗರೂ ಸೇರಿ) ಕೂಡಿಕೊಂಡು ತಾನು ಕಳೆದುಕೊಂಡಿದ್ದ ಪ್ರದೇಶವನ್ನು ತಿರುಗಿ ಪಡೆಯಲು ಮತ್ತು ಕೆಳದಿಯ ಆಳ್ವಿಕೆಯ ಹಿಡಿತದಿಂದ ಪಾರಾಗಲು ದಂಗೆ[೪೪] ಎದ್ದಳೆಂದು ಕ್ರಿ.ಶ. ೧೬೩೦ರ ಪೋರ್ತುಗೀಸ್ ದಾಖಲೆಯು ತಿಳಿಸುತ್ತದೆ. ಇದರೊಂದಿಗೆ ಹಿಂದೆ ತನ್ನ ವೈರಿಗಳಾದ ಪೋರ್ತುಗೀಸರ ಸಹಾಯವನ್ನು ಕೇಳಿದಳು.[೪೫] ನಂತರ ಇವಳು ತನ್ನ ರಾಜ್ಯವನ್ನು ಕೆಳದಿಯ ಹಿಡಿತದಿಂದ ವಿಮೋಚನೆಗೊಳಿಸಲು ಬಿಜಾಪುರ ಆದಿಲ್‌ಶಾಹಿ ಮತ್ತು ಪೋರ್ತುಗೀಸರ ರಕ್ಷಣೆ ಕೇಳಿದಳೆಂದು ೧೮ ಫೆಬ್ರವರಿ ೧೬೪೦ರ ಪೋರ್ತುಗೀಸ್ ದಾಖಲೆಯಿಂದ ತಿಳಿದು ಬರುತ್ತದೆ.[೪೬] ಆದರೆ ಪೋರ್ತುಗೀಸರು ತಮ್ಮ ರಾಜಕೀಯ ಜಾಣ್ಮೆಯನ್ನು ತೋರಿಸಿದರು. ಇದರಂತೆ ಕನ್ನಡ ಕರಾವಳಿಯಲ್ಲಿ ಯಾರೂ

---

೪೧ ನೋಡಿ ಅಡಿ ಟಿಪ್ಪಣಿ ನಂಬ್ರ ೪೪, ೪೫.

೪೨. ವಾರಕಿ Varkey : The History of Ullala "Mangalore Magazine ಅದೆ VI No. 2 1920) ಪು. ೧೪.

೪೩ ದೆಲ್ಲಾವಲೆ - ಇದೇ ಗ್ರಂಥ ಪು. ೩೧೫.

೪೪ ೧೬.೧.೧೬೩೦ ರಂದು ಬಸ್ರೂರಿನಲ್ಲಿದ್ದ ಪೋರ್ತುಗೀಸ್ ಅಧಿಕಾರಿ ಗೋವೆಯ ವೈಸರಾಯನಿಗೆ ಬರೆದ ಪತ್ರ ನೋಡಿ ಹೆರಾಸ Exparsion of was of Verkatap pa Nayaka Ikkeri - Indian Historical Record Commision XI 1928) ಪು. ಪು. ೧೧೦, ೧೧೧.

೪೫ ಪಿಸುರ್ಲೆನ್‌ಕರ್ Assertos I ೫೫೪,೫ ಬಿ.ಎಸ್. ಶಾಸ್ತ್ರಿ ಅದೇ ಗ್ರಂಥ ಪು. ೫೯.

೪೬. ಅದೇ ಗ್ರಂಥ II ಪು. ೫೦ ಬಿ. ಎಸ್. ಶಾಸ್ತ್ರಿ ಅದೇ ಗ್ರಂಥ ಪು. ೭೬

ಸಂಪೂರ್ಣವಾಗಿ ಸೋತು ಹೋಗಬಾರದು. ಇದಕ್ಕನುಗುಣವಾಗಿ ಇವರು ನಿಷ್ಪಕ್ಷಪಾತ ಸೋಗು ಹಾಕಿ ಅಗತ್ಯಬಿದ್ದವರಿಗೆ ಸಹಾಯ ಮಾಡಿ ಅದಿಲ್‌ಶಾಹನ ವಿರುದ್ಧ ವೀರಭದ್ರನಿಗೆ ಸಹಾಯ ಮಾಡಿದರು. ಇದರಿಂದ ತನ್ನ ರಾಜ್ಯವನ್ನು ಕೆಳದಿಯವರ ಹಿಡಿತದಿಂದ ವಿಮೋಚನೆಗೊಳಿಸುವ ಅಬ್ಬಕ್ಕಳ ಯತ್ನ ವಿಫಲವಾಯಿತು. ಕೆಳದಿ ವೀರಭದ್ರನು ತುಳುವರಸರ ಬಂಡಾಯವನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದನು. ಈ ಘಟನೆಯ ನಂತರ ಈ ರಾಣಿಯ ಉಲ್ಲೇಖವು ಸಿಗುವುದಿಲ್ಲ. ಬಹುಶಃ ಈ ಹೋರಾಟದಲ್ಲಿ ಇವಳು ಅಂತ್ಯವಾಗಿರಬೇಕೆಂದು ಅಭಿಪ್ರಾಯಪಡಬಹುದು. ಈ ಮುಂದಿನ ವರ್ಷಗಳ ಪೋರ್ತುಗೀಸ್ ದಾಖಲೆಗಳಲ್ಲಿ ಉಳ್ಳಾಲದ ರಾಜನ ಉಲ್ಲೇಖಗಳು ಬರುತ್ತವೆ.

ಉಳ್ಳಾಲದಲ್ಲಿ ಅಬ್ಬಕ್ಕಳ ಉತ್ತರಾಧಿಕಾರಿ (ಮೊಮ್ಮಗ) ಯ ಆಳ್ವಿಕೆ ಕ್ರಿ.ಶ. ೧೬೬೬ರ ವರೆಗೆ ಇರುತ್ತದೆ. ಇವನು ಬಂಗರಾಣಿ ಮತ್ತು ಮಲಬಾರಿಗಳ ಸಹಾಯದಿಂದ ಕೆಳದಿ ನಾಯಕರ ವಶವಿದ್ದ ಮಂಗಳೂರು ಕೋಟೆಯನ್ನು ೧೬೬೪ರಲ್ಲಿ ಮುತ್ತಿಗೆ ಹಾಕಿದ್ದನ್ನು ಪೋರ್ತುಗೀಸ್ ಮತ್ತು ಆಂಗ್ಲ ದಾಖಲೆಗಳು ತಿಳಿಸುತ್ತವೆ. ಆದರೆ ಇವರ ಪ್ರಯತ್ನ ವಿಫಲವಾಗುತ್ತದೆ.[೪೭]

ಕ್ರಿ. ೧೬೬೬ರಲ್ಲಿ ಬಂದ ಫ್ರೆಂಚ್ ಪ್ರವಾಸಿ ತೆವನೊಟ (Thevenat) ನು ಉಳ್ಳಾಲದಲ್ಲಿ ರಾಜನು ಆಳಿಕೊಂಡಿದ್ದನೆಂದು ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೪೮] ಆ ವರ್ಷದ ನಂತರ ಉಳ್ಳಾಲ ಚೌಟರ ಹೆಸರು ಬರುವುದಿಲ್ಲ. ಇಲ್ಲಿಗೆ ಈ ವಂಶಸ್ಥರ ಆಳ್ವಿಕೆಯು ಉಳ್ಳಾಲದಲ್ಲಿ ಅಂತ್ಯವಾಯಿತು ಎಂದು ಅಭಿಪ್ರಾಯಪಡಬಹುದು.

---

೪೭ Indica (Bombay Vil. II No 2 1974) ಪು ೧೨೫ ಬಿ. ಎಸ್. ಶಾಸ್ತ್ರಿ ಇದೇ ಗ್ರಂಥವು ಪು. ೧೧೬ Foster English Factories in India 1661 -64 ಪು. 350 ಲಿಂಗಣ್ಣ ಕವಿ ಅದೇ ಕಾವ್ಯ ಪು. ೧೧೨.

೪೮ SN Sen (Ed) The venot and Carei (Delhi 1948) ಪು. ೧೨೫ ನಾಗೇಗೌಡ ಇದೇ ಗ್ರಂಥ ಸಂಪುಟ ೭ ಪು. ೮೬.

ಅಧ್ಯಾಯ - ೭

ಉಳಿದ ಚೌಟರಸರು

(ಮೂರನೇ ಮತ್ತು ನಾಲ್ಕನೇ ಅಬ್ಬಕ್ಕ ದೇವಿಯರು)

ಉಳ್ಳಾಲದಲ್ಲಿ ಚೌಟರಸ ಮತ್ತು ರಾಣಿಯರು ಆಳಿಕೊಂಡಿರುವ ಕಾಲದಲ್ಲಿ ಪುತ್ತಿಗೆಯಲ್ಲಿ ಈ ವಂಶದ ದಾಯಾದಿಗಳು ಆಳಿಕೊಂಡಿದ್ದರು. ಇವರನ್ನು ಮೂಲತಃ ಪುತ್ತಿಗೆಯ ಚೌಟರೆಂದು ಕರೆಯುತ್ತಾರೆ. ಈ ವಂಶಸ್ಥರು ಕ್ರಿ.ಶ. ೧೭೬೩ ವರೆಗೆ ಪುತ್ತಿಗೆ ಮತ್ತು ಮೂಡಬಿದ್ರೆಯ ಪ್ರದೇಶಗಳನ್ನು ಆಳಿಕೊಂಡಿದ್ದರು. ಮೂಡಬಿದ್ರೆ ಇವರ ಪ್ರಮುಖ ಕೇಂದ್ರಸ್ಥಾನವಾಗಿತ್ತು. ನಿಖರ ಐತಿಹಾಸಿಕ ದಾಖಲೆಗಳು ಲೋಕಾದೇವಿ ಚೌಟ (ಇವಳು ಒಂದನೇ ಅಬ್ಬಕ್ಕಳ ಸಹೋದರಿ), ಇವಳ ಅಳಿಯ ಚಿಕ್ಕರಾಜರಸ (೧೫೭೮), ನಂತರ ಚಿಕ್ಕರಾಜ ಒಡೆಯರ ಆಳ್ವಿಕೆಯನ್ನು ಹೇಳಿವೆ. ಇವರು ಜೈನಮತ ಮತ್ತು ಮೂಡಬಿದ್ರೆ ನಗರೀಕರಣಕ್ಕೆ ಪ್ರೋತ್ಸಾಹಿಸಿದ್ದರು.[೧] ಜನಜನಿತ ಹೇಳಿಕೆಯಂತೆ ಚಿಕ್ಕರಾಜ ಒಡೆಯನ ಆಳ್ವಿಕೆಯ ಕಾಲದಲ್ಲಿ ಮೂಡಬಿದ್ರೆಯಲ್ಲಿ ಒಂದು ಹೊಸ ಅರಮನೆ ಕಟ್ಟಲ್ಪಟ್ಟಿತು. ಇದರ ನಿರ್ಮಾಣ ೧೬೪೩ ರಲ್ಲಾಯಿತು.[೨] ಇದರಷ್ಟು ದೊಡ್ಡದಾದ ಅರಮನೆಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಲ್ಲ. ಇವನ ಸೊಸೆ ಚೆನ್ನಮ್ಮಾದೇವಿ ಚೌಟಳ ಆಳ್ವಿಕೆಯು ಐತಿಹಾಸಿಕ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ಇವಳು ೧೬೪೬-೧೬೬೬ರ ವರೆಗೆ ಆಳಿದ್ದಳು. ಕೆಳದಿ ಶಿವಪ್ಪನಾಯಕನು ಇವಳಿಂದ ೩೦೦೦ ವರಹವನ್ನು ಕಪ್ಪವಾಗಿ ಪಡೆದನೆಂಬ ಪ್ರತೀತಿ ಇದೆ.[೩] ಆದರೆ ಸಮಕಾಲೀನ ದಾಖಲೆಗಳಲ್ಲಿ ಇದರ ಉಲ್ಲೇಖವಿಲ್ಲದೆ ಇದ್ದದ್ದು ಆಶ್ಚರ್ಯಕರ. ವಿಠಲ ಕಾಮತ್‌ನೆಂಬ ವ್ಯಾಪಾರಿಗೆ ಚೆನ್ನಮ್ಮ ಚೌಟಳು ದಾಳ ನೀಡಿದ್ದ ದಾಖಲೆ ಇದೆ. ಇವಳು ೧೬೮೭ರ ವರೆಗೆ ಆಳಿದ್ದಳೆಂಬ ನಂಬಿಕೆ ಇದೆ.[೪] ಆದರೆ ಮೂಡಬಿದ್ರೆಯಲ್ಲಿ ಸಿಕ್ಕಿದ ತಾಮ್ರ ಶಾಸನವು ಇದನ್ನು ಅಲ್ಲಗಳೆಯುತ್ತದೆ. ಶಕ ೧೫೮೯ರ (೧೬೬೬)ರ ಶಾಸನವು ಚೌಟ ಅಬ್ಬಕ್ಕ ದೇವಿಯ ಆಳ್ವಿಕೆಯನ್ನು ದಾಖಲಿಸಿದೆ. ಈ ವಂಶದಲ್ಲಿ ಇದೇ ಹೆಸರಿನ ಇಬ್ಬರು ಆಳಿದ್ದರಿಂದ ಇಲ್ಲಿ ತಿಳಿಸುವ ಅಬ್ಬಕ್ಕ ಮೂರನೆಯವಳಾಗುತ್ತಾಳೆ. ಇವಳ ಮನೆತನದ ಗುರುಗಳು ಸೇವಗಣ ಲಕ್ಷ್ಮಸೇನಭವರು. ಇವರು ಬಸದಿಯಲ್ಲಿ ನಡೆಸುವ ಪೂಜೆ ಮತ್ತು ಆಹಾರ ದಾನಸಾಲೆಗೆ ಮೂರನೇ ಅಬ್ಬಕ್ಕದೇವಿ ದಾನವನ್ನು ಮಾಡಿದ್ದು ಇದೇ ಶಾಸನದಲ್ಲಿ ಹೇಳಿದೆ. ದಾನ ಬಿಟ್ಟ

---

೧. ದ.ಭಾ.ಶಾ VII ೨೨೭, ೨೩೭ ARSIE ೧೯೪೦-೪೧ Ap No. ೮

೨. ಭುಜಬಲ ಶಾಸ್ತ್ರಿ ಮೂಡಬಿದಿರೆ (ಐ.ಬಿ.ಎಚ್. ೧೯೭೧ ಬೆಂಗಳೂರು)

೩. Standford smith : chowtas ಮಿ.ಸೊ. X L V 1 July 1955) ಪು. ೯-೧೦.

೪. ಗಣಪತಿರಾವು ಐಗಳ್ - ಪ್ರಾಚೀನ ಇತಿಹಾಸ ಪು ೩೦೬.

ಸ್ಥಳದ ಮೌಲ್ಯ ೪೦ ಮುಡಿ. ಇದನ್ನು ಬರೆದವ ಕೃಷ್ಣಯ್ಯ ಸೇನಬೋವ.[೫]

ಈ ರಾಣಿಯ ಆಳ್ವಿಕೆಯು ಶ.ಕ. ೧೬೦೧ ಕ್ರಿ.ಶ. ೧೬೭೯ರ ಒಳಗೆ ಅಂತ್ಯವಾಗಿರಬೇಕು. ಏಕೆಂದರೆ ಶೃಂಗೇರಿ ಮಠದಲ್ಲಿ ಸಿಕ್ಕಿದ ಒಂದು ಕಡತವು ಈ ಅಬ್ಬಕ್ಕದೇವಿಯು ಶಿವ ಸಾಯುಜ್ಯವಾದುದನ್ನು ತಿಳಿಸಿ ಇವಳ ಮಗಳು ಚೆನ್ನಮ್ಮ ತನ್ನ ತಾಯಿಯ ಸದ್ಗತಿ ನಡೆಯುವುದಕ್ಕೋಸ್ಕರ ಕುಡುಪಿನ ಅನಂತ ದೇವರ ಅಗ್ರಶಾಲೆಯಲ್ಲಿ ನಡೆಯುವ ಧರ್ಮ ಕಟ್ಟಳೆಗೆ ೮೬ ಮುಡಿ ಉತ್ಪತ್ತಿ ಸ್ಥಳವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ದಾನ ಬಿಟ್ಟ ಸ್ಥಳ ಪೇಜಾವರ ಮಾಗಣೆಯಲ್ಲಿನ ಮಳೂರು. ಈ ದಾಖಲೆಯ ಅಧ್ಯಯನದಿಂದ ತಿಳಿದು ಬರುವ ಇನ್ನೊಂದು ಸಂಗತಿಯೇನೆಂದರೆ, ಚೌಟರು ದಾಖಲೆ ಪತ್ರಗಳನ್ನು ರಕ್ಷಿಸುವ ಒಂದು ಖಾತೆಯನ್ನು ಸ್ಥಾಪಿಸಿದ್ದರು. ಈ ಕಾಲದಲ್ಲಿ ಇದನ್ನು ನೋಡಿಕೊಳ್ಳುತ್ತಿದ್ದವು ಕುಡುಪಿನ ಕೃಷ್ಣಯ್ಯ.[೬]

ಈ ಚೆನ್ನಮ್ಮಳ ಆಳ್ವಿಕೆಯು ಕ್ರಿ.ಶ. ೧೭೯ರಲ್ಲಿ ಅಂತ್ಯವಾಗಿ ಇದರ ನಂತರ ಅಬ್ಬಕ್ಕದೇವಿಯ ಆಳ್ವಿಕೆಯ ಉಲ್ಲೇಖ ಸಾಹಿತ್ಯ ಕೃತಿಯಲ್ಲಿದೆ. ಇವಳು ಹಿಂದೆ ಆಳಿದ ಚೆನ್ನಮ್ಮಳ ಮಗಳು. ಇಲ್ಲಿ ತಿಳಿಸಿದ ಅಬ್ಬಕ್ಕ ಈ ಚೌಟ ವಂಶದವಳಾಗುತ್ತಾಳೆ. ಇವಳು ನಾಲ್ಮಡಿ ಅಬ್ಬಕ್ಕ. ಇವಳು ಸಾಹಿತ್ಯ ಮತ್ತು ಸಂಗೀತಗಳಿಗೆ ಪ್ರೋತ್ಸಾಹ ನೀಡಿದ್ದಳು. ಈ ರಾಣಿಯ ಆಸ್ಥಾನದಲ್ಲಿ ಪಟ್ಟಾಭಿರಾಮನೆಂಬ ಕವಿ ಇದ್ದನು. ಇವನು ಈ ರಾಣಿಯ ಪ್ರೋತ್ಸಾಹದಿಂದ ರತ್ನಶೇಖರ ಚರಿತ್ರೆಯೆಂಬ ಕಾವ್ಯವನ್ನು ಬರೆದನು.[೭] ಇವನ ಕಾವ್ಯಗುರು ಪ್ರಭಾಚಂದ್ರ, ಈ ಕಾವ್ಯದಲ್ಲಿ ತೌಳವ ದೇಶದೊಳಗೆ ಮಲೆನಾಡ ಪಾತುಶಹ ಸೋಮಶೇಖರ (ಇಮ್ಮಡಿ ಕೆಳದಿ) ಪೂರ್ವವೇಣಿಪುರದ ಚೌಟ ಕುಲಶೇಖರನಾದ ಚಿಕ್ಕರಾಯ ಚೌಟನ ವಂಶದಲ್ಲಿ ಅಬ್ಬಕ್ಕದೇವಿಯ ಆಳ್ವಿಕೆಯನ್ನು ಹೇಳಿದೆ. ಈ ರಾಣಿಯು ಸಾಹಿತ್ಯ, ನೃತ್ಯ ಮತ್ತು ಸಂಗೀತಕ್ಕೆ ಪ್ರೋತ್ಸಾಹ ನೀಡಿದ್ದಳೆಂದು ಈ ಕಾವ್ಯದ ಅಧ್ಯಯನವು ಸೂಚಿಸುತ್ತದೆ. ಇವಳ ಆಸ್ಥಾನದಲ್ಲಿ ಕವಿ ಪಟ್ಟಾಭಿರಾಮ ಮದುಕವಿ ವಿಶಾರದ ಸುಕಲ ಕವಿಜನಮನೋವನ ವಸಂತ

---

೫ ARSIE ಅದೆ Ap. A. No. ೧೩ ಈ ಶಾಸನದ ಪಾಠ ಶ್ರೀ ದೇವಕುಮಾರ ಜೈನ ಮೂಡಬಿದ್ರೆ ಇವರಿಂದ ದೊರಕಿದೆ.

೬. ಇದು ಅಪ್ರಕಟಿತ ಕಡತ Vol No. ೨೬ No. ೨ ಇದನ್ನು ಡಾ.ಎ.ಕೆ. ಶಾಸ್ತ್ರಿ ಪ್ರಾಧ್ಯಾಪಕ ಶಿರಸಿ ಕಾಲೇಜು ಒದಗಿಸಿಕೊಟ್ಟಿದ್ದಾರೆ.

೭. ಆರ್. ನರಸಿಂಹಾಚಾರ್ಯ ಕರ್ನಾಟಕ ಕವಿ ಚರಿತ್ರೆ III (ಬೆಂಗಳೂರು ೧೯೨೯) ಪು. ೨೫ -೨೭ ಈ ಕಾವ್ಯವು ಮೂಡಬಿದ್ರೆ ಗುರುಗಳ ಬಸದಿಯಲ್ಲಿದ್ದಿತ್ತು. ಇದರಲ್ಲಿ ರಾಜರತ್ನಶೇಖರನು ಪುಷ್ಪಾಂಜನ ನೋಂಪಿಯನ್ನು ಆಚರಿಸಿ ಮುಕ್ತಪಡೆದುದ್ದನ್ನು ಹೇಳಿದೆ.

ವಿವಿಧ ಭಾಷಾ ವಿಶೇಷ ಪ್ರಬಂಧ ವಾಙ್ಮ ಧುರ್ಯ ಧುರೀಣ ಎಂದು ಈ ಕಾವ್ಯದಿಂದ ತಿಳಿದುಬರುತ್ತದೆ.[೮] ಈ ಕಾವ್ಯವು ೧೭೨೫ರಲ್ಲಿ ರಚಿತವಾಯಿತು.

ನಾಲ್ಮಡಿ ಅಬ್ಬಕ್ಕಳ ನಂತರ ಚೌಟ ವಂಶವು ರಾಜಕೀಯ ಶಕ್ತಿಯನ್ನು ಕ್ರಮೇಣ ಕಳೆದುಕೊಳ್ಳಲು ಆರಂಭಿಸಿತು. ಇದರ ಅಂತ್ಯ ಕ್ರಿ. ೧೭೬೬ರಲ್ಲಿ ಹೈದರ ಆಲಿಯಿಂದ ನಡೆಯಿತು. ಅವನು ಆಗ ಚೌಟ ಸೀಮೆಯನ್ನು ಆಳಿಕೊಂಡಿದ್ದ ಚಂದ್ರಶೇಖರನಿಂದ ಹೆಚ್ಚಿಗೆ ಕಪ್ಪವನ್ನು ಕೊಡುವಂತೆ ಒತ್ತಡತಂದನು. ಇದನ್ನು ಈ ಚೌಟರಾಜ ಕೊಡಲು ಅಸಮರ್ಥನಾದಾಗ ಹೈದರನು ಚೌಟ ಸೀಮೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಚಂದ್ರಶೇಖರನ ಆಳ್ವಿಕೆಯನ್ನು ಅಂತ್ಯ ಮಾಡಿದನು. ಈ ಘಟನೆಯ ನಂತರ ಚೌಟರ ರಾಜಕೀಯ ಪ್ರಭಾವವು ಅಂತ್ಯವಾಗಿ ಅವರು ಕೇವಲ ಅರಸರಾಗಿ ಉಳಿದುಕೊಂಡರು.

---

೮ ಇದೇ ಗ್ರಂಥ ಪು. ೨೬.

ಆಯ್ದ ಆಕರ ಗ್ರಂಥಗಳು

ವಿ.ಸೂ. : ಅಬ್ಬಕ್ಕದೇವಿಯರು - ಈ ಗ್ರಂಥದಲ್ಲಿನ ನಿಕಟ ಆಕರಗಳನ್ನು ಪ್ರತಿ ಅಧ್ಯಾಯದ ಅಂತ್ಯದಲ್ಲಿರುವ ಅಡಿ ಟಿಪ್ಪಣಿಗಳಲ್ಲಿ ತಿಳಿಸಲಾಗಿದೆ. ಈ ಕೆಳಗೆ ತಿಳಿಸಿದ ಆಕರ ಗ್ರಂಥಗಳನ್ನು ಈ ರಾಣಿಯರ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಸುವ ಉದ್ದೇಶದಿಂದ ಸಂಗ್ರಹಿಸಲಾಗಿದೆ.

Annual Report of Archaeological Survey of India Calculta 1869 annual Report of Archaeology

Annual Report of Indian Epigraphy 1946-1980 (ARIE)

Annual Report on South Indian Epigraphy 1946-1980 (ARIE)

Historical Inscriptions of Southem India (ed Robert Sewell)

Madras (1932)

Karnataka Inscriptions Val I (Ed R.S. Panchamukti Dharwar 1940)

Lists of Inscriptions Remains in Madras Presidency (Col) R Sewell Madras 1884.

South Indian Inscriptions vol Vii (ಇದು ದ ಭಾಷಾ ಎಂದು ಪರಿಷ್ಕರಿಸಲಾಗಿದೆ.)

Topographical Lists of inscriptions of Madras Presidency

(Col) Rangacharya Madras 1919

ಸಾಹಿತ್ಯ ಕೃತಿಗಳು

ಚಂದ್ರಶೇಖರ ಮತ್ತು ಪದ್ಮನಾಭ, ರಾಮಚಂದ್ರ ಚರಿತ್ರೆ (ಅಪ್ರಕಟಿತ, ಮೂಡಬಿದ್ರೆ ಶ್ರೀ ದೇವಕುಮಾರ ಜೈನರಿಂದ ಇದು ಸಿಕ್ಕಿದೆ.)

ಚಂದ್ರಮ : ಕಾರ್ಕಳ ಗೊಮ್ಮಟೇಶ್ವರ ಚರಿತ್ರೆ (ಸಂ. ಚಂದ್ರಶೇಖರ್ ಮದ್ರಾಸು ೧೯೫೧)

ಆರ್. ನರಸಿಂಹಾಚಾರ್ಯ ಕರ್ನಾಟಕ ಕವಿ ಚರಿತೆ (ಮೂರು ಸಂಪುಟಗಳಲ್ಲಿ ಬೆಂಗಳೂರು ೧೯೭೨)

ಲಿಂಗಣ್ಣ ಕವಿ ಕೆಳದಿ ನೃಪವಿಜಯ (ಮೈಸೂರು ೧೯೭೨)

ಲಿಂಗಣ್ಣ ಕವಿ ಕೆಳದಿ ನೃಪವಿಜಯ (ಮೈಸೂರು ೧೯೭೨)

Portuguese Records :

Indo Lusitana (Ed Antory D'Costa S.J.) India Organ of the Heras Institute of Historical Research Bombay 1973-1975.

Travelogues :

Francis Buchanen : A Journey from Madras through the countries of

Mysore Canara and Malahar Vol II (Madras 1870)

ಅನುಷಂಗಿಕ (Secondary) ಕನ್ನಡ ಆಯ್ದ ಗ್ರಂಥ ಮತ್ತು ಲೇಖನಗಳು :

ಅಮೃತಸೋಮೇಶ್ವರ	ಉಳ್ಳಾಲದ ವೀರರಾಣಿ ಅಬ್ಬಕ್ಕ ಒಂದು ವರ್ಣಮಯ ನೆನಪು ತಂರಗ ಮಣಿಪಾಲ (ನವಂಬರ ೧೬, ೧೯೯೭)
ಉಮಾನಾಥ ಶೆಣೈ	ಪುತ್ತೂರು ಕ್ಷೇತ್ರದ ಇತಿಹಾಸ (ಪುತ್ತೂರು ೧೯೮೩)
ಕಲಬುರ್ಗಿ ಎಂ.ಎಂ.	ಕರ್ಣಾಟಕದ ಕೈಫಿಯತ್ತುಗಳು (ಕಮಲಾಪುರ ೧೯೯೪)
ಕಿಲ್ಲೆ ಎನ್‌ಎಸ್ ಮತ್ತು ಶೀನಪ್ಪ ಹೆಗ್ಡೆ	ಪ್ರಾಚೀನ ತುಳುನಾಡು (ಮಂಗಳೂರು ೧೯೪೭)
ಕೃಷ್ಣಭಟ್ಟ ಮತ್ತು ಇತರರು (ಸಂ)	ತೆಂಕನಾಡು ಕಾಸರಗೋಡು (೧೯೪೩)
ಕೃಷ್ಣಭಟ್ಟ ಎ.(ಸಂ)	ಸುದರ್ಶನ ಡಾ| ತೋನ್ಸೆ ಮಾಧವ ಅನಂತ ಪೈಯವರ ಅಭಿನಂದನ ಗ್ರಂಥ (ಮೂಲ್ಕಿ ೧೯೭೭)
ಗಣಪತಿ ರಾವ್ ಐಗಳ್	ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ (ಮಂಗಳೂರು ೧೯೨೩)
ಗುಂಡಾಜೋಯಿಸ್	ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ (ಕೆಳದಿ ೧೯೭೪)
ಗುರುರಾಜಭಟ್ಟ ಪಿ.	ತುಳುನಾಡು (ಉಡುಪಿ ೧೯೭೪)
ದೀಕ್ಷಿತ ಜಿ. ಎಸ್.	ಕೆಳದಿಯ ನಾಯಕರು (ಧಾರವಾಡ ೧೯೭೪)
ನಾಯಕ ಹಾ. ಮಾ. (ಸಂ.)	ಕನ್ನಡ ವಿಷಯಕೋಶ (ಕರ್ಣಾಟಕ ಮೈಸೂರು ೧೯೭೯)
ಬಾಬು ಎಂ.	ಚರಿತ್ರೆ ಮತ್ತು ಕಥೆಗಳು (ಮಂಗಳೂರು ೧೯೨೨)
ನರಸಿಂಹಮೂರ್ತಿ	ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊರೆತ ಹೊಸ ಶಾಸನಗಳು 'ರತ್ನ ಮಂಜೂಷ' (ಕಾರ್ಕಳ)
ಇದೇ	ಕಾರ್ಕಳ ಇತಿಹಾಸ (ಕಾರ್ಕಳ ೧೯೭೪)
ರಮೇಶ ಕೆ.ವಿ. ಮತ್ತು ಎಂ.ಜೆ. ಶರ್ಮ	ತುಳುನಾಡಿನ ಅರಸು ಮನೆತನಗಳು (ಉಜಿರೆ)
ಲೋಕನಾಥ ಶಾಸ್ತ್ರಿ	ಮೂಡಬಿದಿರೆಯ ಇತಿಹಾಸ (ಮಂಗಳೂರು ೧೯೨೬)
ವಸಂತಮಾಧವ ಕೆ.ಜಿ.	ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಆಕರಗಳು (ಅಪ್ರಕಟಿತ ೧೯೯೩)
ಬಿ. ವಸಂತ ಶೆಟ್ಟಿ	ಚೌಟರಸರು (ಅಪ್ರಕಟಿತ)
ವಿವೇಕ ರೈ ಬಿ.ಎ.	ತುಳು ಜಾನಪದ ಸಾಹಿತ್ಯ (ಬೆಂಗಳೂರು ೧೯೮೫)
ವೆಂಕಟರಾಮಾಚಾರ್ಯ ಕೆ.	ಸಾಹಿತ್ಯ ಹಾಗೂ ಸಂಶೋಧನೆಗಳು (ಸುರತ್ಕಲ್ ೧೯೬೪)

ಇದೇ	ಸಾಹಿತ್ಯ ಪ್ರಭ (ಸುರತ್ಕಲ್ ೧೯೮೩)
ಶೀನಪ್ಪ ಹೆಗ್ಡೆ	**ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಿಪಾಂಡ್ಯನ ಅಳಿಯಕಟ್ಟು.** (ಪ್ರಥಮ ಮುದ್ರಣ ೧೯೦೯ ಎರಡನೇ ಮುದ್ರಣ ಉಡುಪಿ - ೧೯೮೧)
ಇದೇ	**ಮಿತ್ಯ ನಾರಾಯಣ ಕತೆ** (ಅನು ಅ. ಬಾಲಕೃಷ್ಣ ಶೆಟ್ಟಿ, ಪೊಳಲಿ)
ಎಸ್.ಡಿ. ಶೆಟ್ಟಿ	'ತಾಮ್ರ ಪತ್ರದಲ್ಲಿ ಕಂಡಂತೆ ನ್ಯಾಯತೀರ್ಮಾನದ ಕಥೆ ಮಂಜುವಾಣಿ ಉಜಿರೆ (ಜನವರಿ ೧೯೯೪)
ಸುಬ್ಬಣ್ಣ ರೈ	**ದ.ಕ. ಜಿಲ್ಲೆಯ ಐತಿಹ್ಯಗಳು** (ಮಾಣಿ ೧೯೯೪)
ಸೂರ್ಯನಾಥ ಕಾಮತ್	**ಕರ್ನಾಟಕದ ಸಂಕ್ಷಿಪ್ತ ಇತಿಹಾಸ** (ಬೆಂಗಳೂರು ೧೯೭೩)
ಕೆ. ಜಿ. ವಸಂತ ಮಾಧವ	**ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಮತ್ತು ಸಂಶೋಧನೆ** (1998)
Abisharkar (ed)	**South Kanara DistircGazetteer** (Karnataka Bangalore 1973)
Alvarea EM	**The Nayakas of Ikkeri** (Unpublished M.A. Thesis Bombay University 1930)
Basavaraja K.R.	**History and Culture of Karnataka** (Dharwad 1984)
Chitnis K.N.	**Keladi Polity** (Dharwad 1975)
Dikshit G.S.	**Studies in Keladi History** (Bangalore 1981)
Gerson Da Cunha	"The Portuguese in South Canara", The **Journal of Bombay Branch of Royal Asi atic Society** (XiX 1895 -1897, pp 249-62)
Haridas Bhat K.S.	"Mangalore Glimpses from the Past" Manglaore 1958 (Syndicate Bank Silver
Jublilee	Souvenir Mangalore 1958)
Moraes G.M.	**History of Christianity in India Bombay 1964)**
Mathew K.S.	**The Portuguese Trade with India in the six**

teenth Century (New Delhi 1976)

Mathew K.S. — The Portuguese Trade with India in the six teenth Century (New Delhi 1976)

Menezes W.J. — **Canara and the Portuguese** (Unpublished M.A. Thesis Bombay University 1953)

Pearson M.N. — **Coastal Western India Studies from the Portuguese Records** (New Delhi 1984)

Rice B.L. — **Mysore and Coorg from Inscriptions** (Secound Ed. Delhi 1988)

Saletore B.A. — **History and Archaeology Soth Kanara Madras Distict Gazetteer** (Madras 1938)

Sewell — **A Forgotten Empire Vijayanagar** (New Delhi 1991)

Shastry B. S. — **Goa - Kanara Portuguese Relations 1498-1763** (New Delhi 2000)

Silva S. — **History of Christianity in Kanara** (Karwar 1955)

Standford Smith "Chowtas" — **- Quarterly Journal of Mythic Society** (Bangalore July 1955)

Suryanath U. Kamath — **Tuluvas in Vijayanagara Times** (Unpublished Ph. D Thesis Bombary Uni versity 1965)

Sturrock — **South Canara** (Madras districe Manual) (Ma dras 1894)

Vasartha Madhava K.G. — **Political History of Kanara,** (Mairly based on Inscriptions) (Unpublished ph. D. Thesis Karnataka University Dharwad 1976)

Ibid — **Trends in Karnataka Historical Reasearch** (Mangalore 1996)

ರಾಣಿ ಒಂದನೇ ಅಬ್ಬಕ್ಕ ದೇವಿಯ ತಾಮ್ರ ಶಾಸನದ ಮೂಲಪಾಠ

- ಮುಂಭಾಗ -

1. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾ
2. ರವೇ ಚ್ರೈಲೋಕ್ಯ ನಗರಾರಂಭ ಮೂಲ
3. ಸ್ತಂಭಾಯ ಸಾಂಭವೆ|| ಸ್ವಸ್ತಿ ಶ್ರೀ ಜಯಾ
4. ಭ್ಯುದಯ ಶಾಲಿವಾಹನ ಶಕ ವರ್ಷ
5. ೧೪೫೬ನೆಯ ಬಾವ ಸಂವತ್ಸರದ ಆಶ್ರಯು
6. ಜ ಬಹುಳ ೧೧ ಚಂದ್ರವಾರ ಶ್ರೀಮತು ಬಾಳೆಹ
7. ಳಿಯ ಸಿಂಹಾಸನದ ಕುಮಾರ ಚೆಂನಬಸವರಾಜ
8. ದೇವರು ಬಿದಿರೆಯ ಅಬ್ಬಕ್ಕದೇವಿಯರಾದ ಚೌಟರಿ
9. ಗು ಬಿದಿರೆಯ ನಖರದ ಹಲವರು ಸೆಟ್ಟಿಗಾರರು ಸಮ
10. ಸ್ತರಿಗು ಪಾಲಿಸಿದ ತಾಂಬ್ರಶಾಸನದ ಕ್ರಮವೆಂ
11. ತೆಂದರೆ ನಿಂಮ ಬಿದಿರೆಯ ನಖರದಲ್ಲಿ ವೀರೇಶ್ವರನನು
12. ಕಿತ್ತು ನಷ್ಟವ ಮಾಡಿದರುಯೆಂದು ನಂಮ ಜಂಗಮ
13. ರು ಆಚಾರವನು ಮಾಡಲಾಗಿ ಅದು ಆಹುದು
14. ಅಲ್ಲಯೆಂದು ಪ್ರಮಾಣಕ್ಕಿ ನಿಂಡಲ್ಲಿ ಮಧ್ಯಸ್ಥರು ರ
15. ತ್ನಪ್ಪಣೆಟ್ಟಿಯುಯಲ್ಲದ ಮಾತುಯಿಲ್ಲಯೆಂದು
16. ಗಿದು ನಮಗೆ ಕಾಣಿಕೆಯಾಗಿ ಗ ೪೫೦ ವರಹನನು
17. ಮೂಗಿಸಿ ಕೊಂಡೆ 50 ನೆಲ್ಲಿ ತೀರ್ಥದಲೂ ಮೊದಲು ಪೂ
18. ಜಿಸುಟ ಬ್ರಾಹ್ಮರ್ ಪೂಜಿಸೋಣ ಯಿನ್ನು ನಂಮ ಜಂ
19. ಗಮರು ಬಿದಿರೆಯ ನಖರದಲು ನೆಲ್ಲಿ ತೀರ್ಥದಲು ಆ
20. ಚಾರವೆಂದು ಹಿಡಿತಡೆಗಳ ಮಾಡಲಿಲ್ಲಯೆಂದು ಪಾಲಿ
21. ನೆದ ತಾಂಬ್ರಶಾಸನ ಈ ಶಾಸನ ಕ್ರಮಕ್ಕೆ ತಪ್ಪಿದರೆ ವೀ
22. ರೇಶ್ವರನಿಗೆ ತಪ್ಪಿದರು ಪರ್ವತದಲು ಬಸವನ ಕೊಂದ
23. ಪಾವಕ್ಕೆ ಹೋಹರುಯಿಂ ತಪ್ಪುದಕ್ಕೆ ಸಾಕ್ಷಿಗಳು ಸಂ
24. ಕರಸರಾದ ಕುಂದ ಹೆಗ್ಗಡೆಯರು ಅಡವಳ್ಳಿಯ

- ಮುಂಭಾಗ -

25. ಚಿಕ್ಕಣ ಹೆಗ್ಗಡೆಯರು ಬಿದಿರೆಯ ನಖರದಲು
26. ನೆಲ್ಲಿ ತೀರ್ಥದಲು ಮುಂದಕ್ಕೆ ಅಲುದೊಂದು ನ್ಯಾ
27. ಯ ನಖರಗಳು ಯಿಲ್ಲಯಂದು ಪಾಲಿಸಿದ
28. ತಾಂಬ್ರ ಶಾಸನಕ್ಕೆ ವೀರಣ ದೇವರ ವೊಪ್ಪಿತ ಕುಮಾರ
29. ಚಿನ್ನ ಬಸವರಾಜ ದೇವರ ಸ್ವಹಸ್ತದವೊಪ್ಪಿತ ಶ್ರೀ
30. ಸಾರಂಗಯ್ಯನ ಬರಹ ಶ್ರೀ ವೀರೇಶ್ವರನೇ ಶರಣು
31. ಸಂಕರಸರಾದ ಕುಂಡ ಹೆಗ್ಗಡೆಯರ ಸ್ವಹಸ್ತದ ವೊಪ್ಪಿ
32. ತ
33. ಆಡವಳ್ಳಿಯ ಚಿಕ್ಕಣ ಹೆಗ್ಗಡೆಯರ ಸ್ವಹಸ್ತದವೊ
34. ಪ್ಪಿತ ಶ್ರೀ.

ಕೃಪೆ - ಎಸ್.ಡಿ. ಶೆಟ್ಟಿ, ಉಜಿರೆ



1. ರಾಣಿ ಅಬ್ಬಕ್ಕದೇವಿಯ ತಾಮ್ರ ಶಾಸನದ ಪಡಿಯಚ್ಚು ಶಕ ೧೪೯೬ -ಕ್ರಿ.ಶ. ೧೫೭೪.
ಸಿಕ್ಕಿದ ಸ್ಥಳ : ಧರ್ಮಸ್ಥಳದ ಮಂಜೂಷ ವಸ್ತುಸಂಗ್ರಹಾಲಯ
ಕೃಪೆ : ಡಾ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ, ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಎಸ್.ಡಿ. ಶೆಟ್ಟಿ, ಕನ್ನಡ ಪ್ರಾಧ್ಯಾಪಕ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ.



ಮಂಗಳೂರು - ಉಳ್ಳಾಲದ ಭೂಪಟ. ೧೫೮೦ರಲ್ಲಿ ಈ ಭೂಪರವನ್ನು ಪೋರ್ತುಗಿಳಿಸಿ ಅಧಿಕಾರಿ ರಚಿಸಿದ್ದ. ಕ್ರಿ.ಶ. ೧೬೪೬ರಲ್ಲಿ ಪೋರ್ತುಗೀಸ ಇತಿಹಾಸಕಾರ ಪೆರಿಯಾ ಸೋಜಾ ತನ್ನ ಗ್ರಂಥದಲ್ಲಿ ಅಳವಡಿಸಿಕೊಂಡ.

ಕೃಪೆ : ಗೋವಾ ರಾಜ್ಯದ ಪತ್ರಾಗರ ಖಾತೆ.

ಕ್ರಿ.ಶ. ೧೫೯೬ರಲ್ಲಿ ಡಚ್ಚ ಪ್ರವಾಸಿ ಲಿನ್‌ಸ್ಕೋಟೆನ್ ತಯಾರಿಸಿದ ಭಾರತ - ಪಶ್ಚಿಮ ಏಷ್ಯಾ ಭೂಪಟ. ಈ ಭೂಪಟದಲ್ಲಿ ದ.ಕ. ಜಿಲ್ಲೆಯ ಉಳ್ಳಾಲ ಮತ್ತು ಮಾಲ್ಡೀವಿ ದ್ವೀಪಗಳ ವ್ಯಾಪಾರ ಸಂಪರ್ಕವನ್ನು ತಿಳಿಸಿದೆ. ಇದು ಗಮನಾರ್ಹ ಸಂಗತಿ.

ಕೃಪೆ : ಗೋವಾ ಪತರಾಗಾರ ಖಾತೆ.



ಕ್ರಿ.ಶ. ೧೬೨೩ರಲ್ಲಿ ಇಟಲಿ ಪ್ರವಾಸಿ ಡೆಲ್ಲಾವೆಲ್ಲಿ ರಚಿಸಿದ ಭೂಪಠ. ಇದರಲ್ಲಿ ಮಂಗಳೂರು ಉಳ್ಳಾಲ, ಬಂಗೆಲ, ಕಾರ್ನಾಟೆ (ಕಾರ್ನಾಡು), ಒಮಂಜೂರು (ವಾಮಂಜೂರು) ಮತ್ತು ಕಾಂಗೋರಟೊ (ಕಾಸರಗೋಡು) ಗುರುತಿಸಿದೆ. ಈ ಭೂಪಟದಿಂದ ಈ ಮೇಲೆ ಕಾಣಿಸಿದ ನಗರಗಳು ಆಗಿನ ಕಾಲದ ರಾಜಕೀಯದಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಿದ್ದವು ಎಂದು ತಿಳಿದುಬರುತ್ತದೆ.

ಕೃಪೆ : ಗೋವಾ ರಾಜ್ಯ ಪತ್ರಾಗಾರ ಖಾತೆ.